ಜೀವಾನ್ನಿ ಬೊಕಾಷಿಯೋನ

ರಸಿಕತೆಗಳು


IL DECAMERONE
DI M. GIOVANNI
BOCCACCIO.
NVOVAMENTE ALLA SVA VERA
LETTIONE RIDOTTO.
CON TVTTE QVELLE ALLEGORIE, ANNOTA-
tioni, e tauole, che nelle altre nostre impressioni si conten-
gono: e di piu ornato di molte figure.
AGGIVNTOVI SEPARATAMENTE VN'INDICE
copiosissimo de' uocaboli e delle materie composto
da Messer Lodouico Dolce.
CON GRATIA ET PRIVILEGIO.
IN VINEGIA APPRESSO GABRIEL
GIOLITO DE FERRARI, ET
FRATELLI. MDLII.

1552ರಲ್ಲಿ ವೆನಿಸಲ್ಲಿ ಪ್ರಕಟವಾದ 'ಡೆಕಮೆರಾನ್'ನ ಮುಖಪುಟ

'ಡೆಕಮೆರಾನ್'

ಆಯ್ದ ಕತೆಗಳ ಸಂಗ್ರಹಾನುವಾದ

ಡಾ|| ಜೆ. ಬಾಲಕೃಷ್ಣ

BOCCACCIONA DECAMERON-
Selected stories from
DECAMERON translated by
Dr.J.BALAKRISHNA, Professor,
Dept. of Kannada Studies,
University of Agricultural
Sciences,GKVK, Bangalore-560065
j.balakrishna@gmail.com



ಜೇವಾನ್ನಿ ಬೊಕಾಷಿಯೊ–
ಕಲಾವಿದನೊಬ್ಬನ ಕಲ್ಪನೆ

ಬೊಕಾಷಿಯೋನ ಡೆಕಮೆರಾನ್– ಬೊಕಾಷಿಯೋನ ಡೆಕಮೆರಾನ್‌ನಿಂದ ಆಯ್ದ ಕತೆಗಳ ಸಂಗ್ರಹಾನುವಾದ. ಲೇ: **ಡಾ. ಜೆ.ಬಾಲಕೃಷ್ಣ,** ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, *ಜಿ.ಕೆ.ಬಿ.ಕೆ.*, ಬೆಂಗಳೂರು–560065.



ಬೊಕಾಷಿಯೊನ 'ಡೆಕಮೆರಾನ್'–
ಕರ್ತೃ ಮತ್ತು ಕೃತಿ

ಜೇವಾನ್ನಿ ಬೊಕಾಷಿಯೊ ಇಟಲಿಯ ಸಾಹಿತಿ ಹಾಗೂ ಮಾನವತಾವಾದಿ; ಯೂರೋಪಿನ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಸ್ಥಾನ ಪಡೆದಾತ. 1313ರಲ್ಲಿ ಬೊಕಾಷಿಯೊ ಡಿ ಚೆಲಿನೊ ಎಂಬ ವರ್ತಕನಿಗೆ ತನ್ನ ಪ್ರೇಯಸಿಯಿಂದ ಪ್ಯಾರಿಸ್ಸಿನಲ್ಲಿ ಹುಟ್ಟಿದ ಈತ ಅಲ್ಪ ಸ್ವಲ್ಪ ವಿದ್ಯಾಭ್ಯಾಸದೊಂದಿಗೆ ನೇಪಲ್ಸ್ ನಗರದಲ್ಲಿ ತನ್ನ ತಂದೆಯ ವ್ಯಾಪಾರದಲ್ಲಿ ಸಹಕರಿಸುತ್ತಿದ್ದ. ಅಲ್ಲಿ ರಾಬರ್ಟ್ ದೊರೆಯ ಮಗಳಾದ ಮರಿಯಾ ಡಿ ಅಕ್ವಿನೋಳನ್ನು ಪ್ರೀತಿಸಿ ಅವಳನ್ನು ಫಿಯಮೆಟ್ಟಾ ಎಂಬ ಹೆಸರಿನ ಪಾತ್ರದಲ್ಲಿ ತನ್ನ ಎಲ್ಲಾ ಕೃತಿಗಳಲ್ಲೂ ಶಾಶ್ವತಗೊಳಿಸಿದ. ಆ ಪಾತ್ರ ಕಾಲ್ಪನಿಕ ಎಂದೂ ಕೆಲವರು ಹೇಳುತ್ತಾರೆ.

ಬೊಕಾಷಿಯೋನಿಗೆ 1349ರಲ್ಲಿ ಫ್ಲಾರೆನ್ಸ್‌ನಲ್ಲಿ ಖ್ಯಾತ ಕವಿ, ಸಾಹಿತಿ ಪೆಟ್ರಾರ್ಕ್‌ನ ಪರಿಚಯುವಾಯಿತು. ಪೆಟ್ರಾರ್ಕ್‌ನ ಬೌದ್ಧಿಕ ಔನ್ನತ್ಯ ಬೊಕಾಷಿಯೊನ ಬದುಕಿನ ಮೇಲೆ ಗಾಢ ಪ್ರಭಾವ ಬೀರಿತು. ಆಗ ಆರಂಭವಾದ ಅವರ ಸ್ನೇಹ ಬೊಕಾಷಿಯೊನ ಕೊನೆಕಾಲದವರೆಗೂ ಉಳಿದಿತ್ತು. ಹೇಗೆ ಇಟಲಿಯ ಕಾವ್ಯವನ್ನು ಪೆಟ್ರಾರ್ಕ್‌ನೊಂದಿಗೆ ಗುರುತಿಸಲಾಗುತ್ತದೆಯೋ ಅದೇ ರೀತಿ ಇಟಲಿಯ ಗದ್ಯವನ್ನು ಬೊಕಾಷಿಯೊನೊಂದಿಗೆ ಗುರುತಿಸಲಾಗುತ್ತದೆ.

ಬೊಕಾಷಿಯೊನ ಸಾಹಿತ್ಯ ಜೀವನ ಪ್ರಾರಂಭವಾದದ್ದು ನೇಪಲ್ಸ್ ನಗರದಲ್ಲೆ. ಆತನ 'ಡೆಕಮೆರಾನ್'ಗಿಂತ ಮುಂಚಿನ ಕೃತಿಗಳು ಪದ್ಯ ಹಾಗೂ ಗದ್ಯರೂಪದ ಭಾವನಾಪೂರ್ಣ ಕೃತಿಗಳಾಗಿದ್ದವು. 'ಇಲ್ ಫಿಲೊಕೋಲೊ', 'ಫಿಲೋಸ್ಟ್ರಾಟೊ', ನಿನ್‌ಫೇಲ್ ಡಿ ಅಮಿಟೊ', 'ಎಲ್ ಅಮೊರೋಸಾ', 'ಟೆನೇಡಾ' ಮತ್ತು 'ಇಲ್‌ನಿನ್‌ಫೇಲ್ ಫೀಸೊಲಾನೊ' ಆತನ ಪ್ರಮುಖ ಕೃತಿಗಳು. ಆತನ ಆತ್ಮಕಥಾರೂಪದ 'ಲಾ ಫಿಯಮೆಟ್ಟಾ'ದಲ್ಲಿ ತನ್ನ ಹಾಗೂ ಮರಿಯಳ ಪ್ರೇಮದ ಬಗ್ಗೆ ಮನೋವೈಜ್ಞಾನಿಕ ಅಂತರ್ ದೃಷ್ಟಿಯಿಂದ



1552ರಲ್ಲಿ ಫ್ಲಾರೆನ್ಸ್‌ನಲ್ಲಿ ಪ್ರಕಟವಾದ 'ಡೆಕಮೆರಾನ್'ನಲ್ಲಿನ ಬೊಕಾಷಿಯೋನ ಮರದಚ್ಚಿನ ಚಿತ್ರ

ಬರೆದಿದ್ದಾನೆಂದು ಹೇಳುತ್ತಾರೆ. ಬೊಕಾಷಿಯೊನ ಇಂಗದ ಜ್ಞಾನ ದಾಹ ಆತ ಲಿಂಯೋ ಪಿಲಾಟಸ್‌ನಿಂದ ಗ್ರೀಕ್ ಭಾಷೆ ಕಲಿಯಲು ಪ್ರೇರೇಪಿಸಿತು ಹಾಗೂ ಲಿಯೊ ಪಿಲಾಟಸ್‌ನನ್ನು ಫ್ಲಾರೆನ್ಸ್ ನಗರಕ್ಕೆ ಕರೆತಂದು ಆತ 'ಈಲಿಯಡ್' ಮತ್ತು 'ಒಡೆಸ್ಸಿ'ಯನ್ನು ಲ್ಯಾಟಿನ್‌ಗೆ ಅನುವಾದಿಸಲು ಸಹಕರಿಸಿದ. ಅಲ್ಲದೆ ಬೊಕಾಷಿಯೊ ಲ್ಯಾಟಿನ್‌ನಲ್ಲಿ ಭೌಗೋಳಿಕ ನಿಘಂಟೊಂದನ್ನು ಸಹ ರಚಿಸಿದ್ದಾನೆ.

ಬೊಕಾಷಿಯೊನ ಸಾಹಿತ್ಯ ಕೃಷಿಯ ಮೇರು ಕೃತಿಯೇ 'ಡೆಕಮೆರಾನ್'. 1348–1353ರಲ್ಲಿ ರಚಿಸಲ್ಪಟ್ಟಿರುವ 'ಡೆಕಮೆರಾನ್'ನಲ್ಲಿ ನೂರು ಕತೆಗಳಿವೆ. 'ಡೆಕಮೆರಾನ್'ನ ಮೊದಲ ಅಚ್ಚಾದ ಆವೃತ್ತಿ 1471ರಲ್ಲಿ ಪ್ರಕಟವಾಯಿತು. 'ಡೆಕಮೆರಾನ್'ನ ಅರ್ಥ 'ಹತ್ತು ದಿನಗಳ ಕೆಲಸ' ಎಂದಾಗುತ್ತದೆ. 1348ರಲ್ಲಿ ಫ್ಲಾರೆನ್ಸ್ ನಗರಕ್ಕೆ ಭಯಂಕರ ರೂಪದಲ್ಲಿ ದಾಳಿಯಿಟ್ಟ ಪ್ಲೇಗ್ ಮಾರಿಯ ಘಟನೆಗಳ ಹಿನ್ನೆಲೆಯಲ್ಲಿ ಈ ಕತೆಗಳನ್ನು ಹೆಣೆಯಲಾಗಿದೆ. ಫ್ಲಾರೆನ್ಸ್ ನಗರ ಪ್ಲೇಗ್‌ನ ದಾಳಿಯಿಂದ ತತ್ತರಿಸುತ್ತಿರುವಾಗ, ಜನ ಹುಳುಗಳಂತೆ ಸಾಯುತ್ತಿರುವಾಗ ಏಳು ಜನ ಯುವತಿಯರು ಹಾಗೂ 3 ಜನ ಯುವಕರು ಸೇರಿ ಆ ಸಾವು ನೋವನ್ನು ಕೆಲದಿನಗಳಾದರೂ ಮರೆತು ದೂರವಿರೋಣವೆಂದು ನಿರ್ಧರಿಸಿ ದೂರದ ತೋಟದ ಮನೆಗಳಿಗೆ ಹೋಗಿ ಹಾಡು, ಸಂಗೀತ, ಮೋಜಿನಲ್ಲಿ ಹದಿನೈದು ದಿನ ಕಾಲ ಕಳೆಯುತ್ತಾರೆ. ಆಗ ಸಮಯ ಕಳೆಯಲೆಂದು ದಿನಕ್ಕೊಂದು ವಿಷಯದ ಬಗ್ಗೆ ಒಬ್ಬೊಬ್ಬರು ಒಂದೊಂದು ಕತೆ ಹೇಳಬೇಕೆಂದು ನಿರ್ಧರಿಸಿ ಹತ್ತು ದಿನ ಕತೆಗಳನ್ನು ಹೇಳುತ್ತಾ ಕಾಲ ಕಳೆಯುತ್ತಾರೆ. ಬೊಕಾಷಿಯೊನ ಆ ಕತೆಗಳಿಗೆ ಆಧಾರವಾಗಿ ಹಲವಾರು ಕತೆ, ದಂತಕತೆಗಳು, 14ನೇ ಶತಮಾನದ ಇಟಲಿಯ ದಿನನಿತ್ಯದ

ಬದುಕಿನ ಘಟನೆಗಳೇ ಆಧಾರವಾಗಿದ್ದು ವೆಂದು ಸಾಹಿತ್ಯ ವಿಮರ್ಶಕರು ಹೇಳುತ್ತಾರೆ. 'ಡೆಕಮೆರಾನ್'ನ ಮೊದಲ ಅಧ್ಯಾಯದಲ್ಲಿ ಚಿತ್ರಿತವಾಗಿರುವ ಪ್ಲೇಗ್‌ನ ಭಯಂಕರ ರೂಪ, ಅದು ಉಂಟು ಮಾಡುವ ನೈತಿಕ, ಸಾಮಾಜಿಕ ಅಧಃಪತನ ಭೀಭತ್ಸವಾಗಿದ್ದರೆ, ನಂತರದ ಕತೆಗಳಲ್ಲಿ ಕಾಣುವ ಮೋಜು, ಸಡಗರ, ಜೀವಂತಿಕೆಗಳು ವೈದೃಶ್ಯವಾಗಿವೆ. ಹದಿನಾಲ್ಕನೇ ಶತಮಾನದ ಇಟಲಿಯ ಸಾಮಾಜಿಕ ಸ್ಥಿತಿಯನ್ನು ಬೊಕಾಷಿಯೊ ವಾಸ್ತವವಾಗಿ ಚಿತ್ರಿಸಿದ್ದಾನೆಂದು ಹೇಳುತ್ತಾರೆ.



ಜೀವಾನ್ನಿ ಬೊಕಾಷಿಯೊ

'ಡೆಕಮೆರಾನ್'ನ ಭಾವನಾತ್ಮಕ ರೂಪವನ್ನು ಹೊಗಳಿದ ಫ್ರಾನ್ಸೆಸ್ಕೊ ಡೆ ಸ್ಯಾಂಕ್ಟಿಸ್ ಅದನ್ನು ಡಾಂಟೆಯ 'ಡಿವೈನ್ ಕಾಮೆಡಿ' ನಂತರದ 'ಹ್ಯೂಮನ್ ಕಾಮೆಡಿ' ಎಂದು ಕರೆದಿದ್ದಾನೆ. ಇನ್ನು ಕೆಲವರು ಅದನ್ನು ಇಟಲಿ ಸಾಹಿತ್ಯದ ಆದಿಮೂಲ(Fountain Head)ವೆಂದು ಕರೆದಿದ್ದಾರೆ.

'ಡೆಕಮೆರಾನ್'ನಲ್ಲಿ 14ನೇ ಶತಮಾನದ ದಿನನಿತ್ಯದ ಘಟನೆಗಳನ್ನು ಯಾವುದೇ ಆಡಂಭರ, ಅಲಂಕಾರಗಳಿಲ್ಲದೆ, ಸಿನಕಭಾವದಿಂದ ಚಿತ್ರಿಸಲಾಗಿದೆ. ಅದರಲ್ಲಿನ ಪಾತ್ರಗಳು ಜೀವಂತಿಕೆಯಿಂದ ತುಡಿಯುತ್ತವೆ, ಅಲ್ಲದೆ ಬೊಕಾಷಿಯೊನ ತೀಕ್ಷ್ಣ ಮನಃಶಾಸ್ತ್ರದ ಅಂತರ್‌ದೃಷ್ಟಿ ಮನುಷ್ಯನ ಎಲ್ಲಾ ಗುಣಗಳನ್ನು ಬಯಲಿಗಿಡುತ್ತವೆ. ಬೊಕಾಷಿಯೊ ನೀತಿ ಬೋಧಕನಾಗಿರಲಿಲ್ಲ, ಆದರೆ ಮಧ್ಯಯುಗದ ಧಾರ್ಮಿಕ ಆಚರಣೆ ಹಾಗೂ ಆಗಿನ ಧರ್ಮಾಧಿಕಾರಿಗಳ ಕಪಟ ಆಚರಣೆ, ಠಕ್ಕು, ಬೂಟಾಟಿಕೆಗಳ ವಿರುದ್ಧವಿದ್ದ. ತನ್ನ 'ಡೆಕಮೆರಾನ್'ನ ಹಲವಾರು ಕತೆಗಳಲ್ಲಿ ಆಗಿನ ಚರ್ಚು ಹಾಗೂ ಪಾದ್ರಿ ಸಂತರನ್ನು ಲೇವಡಿ ಮಾಡಿ ಅವರ ಕಪಟ ನಾಟಕಗಳನ್ನು, ಕಚ್ಚೆಹರುಕತನವನ್ನು ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾನೆ. 'ಡೆಕಮೆರಾನ್'ನನ್ನು ಆಗಿನ ಚರ್ಚು ಹಾಗೂ ಪಾದ್ರಿಗಳು ಪ್ರತಿಭಟಿಸಿದರೂ ಸಹ ಅದರ ಖ್ಯಾತಿಯೇನೂ ಕಡಿಮೆಯಾಗಲಿಲ್ಲ. ಆಗಲೇ ಅದು ಹಲವಾರು ಭಾಷೆಗಳಿಗೆ ತರ್ಜುಮೆಗೊಂಡಿತ್ತು. 16ನೇ ಶತಮಾನದಲ್ಲಿ ಅದರ ಭಾಷಾ ಪಾಂಡಿತ್ಯವನ್ನು ಭಾಷಾ ಶಾಸ್ತ್ರಜ್ಞರು ಅಧ್ಯಯನ ಮಾಡಲು ಆರಂಭಿಸಿದ್ದರು. 'ಡೆಕಮೆರಾನ್'ನಿಂದ ಪ್ರೇರಿತರಾಗಿ ಹಲವಾರು ಕಲಾವಿದರು ಚಿತ್ರಗಳನ್ನು ರಚಿಸಿದ್ದಾರೆ; ಹಲವಾರು ಚಲನಚಿತ್ರಗಳೂ ನಿರ್ಮಾಣವಾಗಿವೆ.

'ಡೆಕಮೆರಾನ್'ನ ಪ್ರಕಾರ ಮನುಷ್ಯ ಸದ್ಗುಣಶೀಲನಾಗಬೇಕಾದರೆ ಬದುಕನ್ನು ಅದು ಬರುವ ರೀತಿಯಲ್ಲಿಯೇ ಯಾವುದೇ ಬೇಸರವಿಲ್ಲದೆ ಒಪ್ಪಿಕೊಳ್ಳಬೇಕು; ಅಲ್ಲದೆ ತನ್ನ ಕೃತ್ಯದ ಪರಿಣಾಮಗಳನ್ನು, ತನ್ನ ಅನಿಸಿಕೆ, ಆಸೆಗಳಿಗೆ ತದ್ವಿರುದ್ಧ, ದುಃಖಕಾರಕ ಪರಿಣಾಮಗಳಾದರೂ ಸಹ ಅವನ್ನು ಹಾಗೆಯೇ ಒಪ್ಪಿಕೊಳ್ಳಬೇಕು. ಮನುಷ್ಯ ತಾನು ಸುಖ ಸಂತೋಷ–ದಿಂದಿರಬೇಕಾದರೆ ಮಾನವಸಾಧ್ಯವಾಗಿ ಲಭ್ಯವಾಗುವಂತಹುದಕ್ಕೆ ಮಾತ್ರ



1552ರಲ್ಲಿ ಫ್ಲಾರೆನ್ಸ್‌ನಲ್ಲಿ ಪ್ರಕಟವಾದ 'ಡೆಕಮೆರಾನ್'ನಲ್ಲಿನ ಇಟಲಿಯ ಜನಸಾಮಾನ್ಯರ ಚಿತ್ರಣ ತೋರಿಸುವ ಮರದಚ್ಚಿನ ಚಿತ್ರ

ತನ್ನ ಆಸೆಗಳನ್ನು ಸೀಮಿತಗೊಳಿಸಿಕೊಳ್ಳಬೇಕು ಹಾಗೂ ಪಾರಮಾರ್ಥಿಕವನ್ನು ಯಾವುದೇ ವಿಷಾದವಿಲ್ಲದೆ ತಿರಸ್ಕರಿಸಬೇಕು. ಹಾಗಾಗಿ ಬೊಕಾಷಿಯೊ ತನ್ನ ಕೃತಿಯಲ್ಲಿ ಮನುಷ್ಯನ ಶಕ್ತಿಯ ಪ್ರಾಮುಖ್ಯತೆಯನ್ನು ತೋರಿಸುತ್ತಾನೆ, ಜೊತೆಗೆ ಅದರ ಸೀಮಿತ ಪರಿಧಿಯನ್ನೂ ಸಹ ತೋರಿಸುತ್ತಾನೆ.

1362ರಲ್ಲಿ ಗಿಯೊಷಿನೊ ಸಿಯಾನಿ ಎಂಬ ಧರ್ಮಾಂಧ ಸಂನ್ಯಾಸಿಯ ಹಿಡಿತಕ್ಕೆ ಬೊಕಾಷಿಯೊ ಸಿಕ್ಕಿಬಿದ್ದ. ಆ ಸಂನ್ಯಾಸಿ ಬೊಕಾಷಿಯೊನನ್ನು ಧರ್ಮದ ಕಟ್ಟುಪಾಡುಗಳಿಗೆ ಸಿಕ್ಕಿಸಲು ಪ್ರಯತ್ನಿಸಿದ. ಅವನ ಮಾತುಗಳಿಗೆ ಮರುಳಾಗಿದ್ದ ಬೊಕಾಷಿಯೊ ತನ್ನ 'ಡೆಕಮೆರಾನ್' ಹಾಗೂ ಇನ್ನಿತರ ಕೃತಿಗಳನ್ನು ಸುಟ್ಟುಹಾಕಲೂ ಸಹ ಮುಂದಾಗಿದ್ದ. ಆದರೆ ಆಗ ಪೆಟ್ರಾರ್ಕ್ ಮುಂದೆ ಬಂದು ಬೊಕಾಷಿಯೊನಿಗೆ ತಿಳಿಹೇಳಿ ಆತನ ಕೃತಿಗಳನ್ನು ವಿನಾಶದಿಂದ ರಕ್ಷಿಸಿದ.

'ಡೆಕಮೆರಾನ್'ನ ಅತ್ಯಂತ 'ಅಶ್ಲೀಲ' ಕತೆಗಳಲ್ಲಿಯೂ ಸಹ ಧಾರ್ಮಿಕ ವಾಸ್ತವತೆಯ ಅಂತರ್ಬೋಧೆಯಿದೆ ಹಾಗೂ ನೈತಿಕ ಮೌಲ್ಯಗಳನ್ನು ಒತ್ತಿ ಹೇಳುತ್ತವೆ. ಹಾಗಾಗಿ ಆಧುನಿಕ ವಿಮರ್ಶಕರ ಪ್ರಕಾರ ಬೊಕಾಷಿಯೋನನ್ನು ಅಶ್ಲೀಲ ಲೇಖಕನೆಂದಾಗಲಿ, ವಿಷಯಲಂಪಟ ಬರಹಗಾರನೆಂದಾಗಲಿ ಕರೆಯುವುದು ಆತನ ಸಾಹಿತ್ಯಕ್ಕೆ ಮಾಡುವ ಅಪರಾಧವಾಗುತ್ತದೆ.

ಪೆಟ್ರಾರ್ಕ್ 1374ರಲ್ಲಿ ಸತ್ತ. ಆ ಕೊರಗಿನಿಂದಾಗಿ ಹಾಗೂ ಖಾಯಿಲೆಯಿಂದಾಗಿ ಬೊಕಾಷಿಯೊ 1375ರ ಡಿಸೆಂಬರ್ 21ರಂದು ತೀರಿಕೊಂಡ. ಆತನನ್ನು ಸ್ಯಾನ್ ಜ್ಯಾಕೋಪೊ ಚರ್ಚಿನ ಆವರಣದಲ್ಲಿ ಹೂಳಲಾಯಿತು. ಆತನ ಸಮಾಧಿಯ ಅವಶೇಷಗಳು ಈಗಲೂ ಇವೆ.

–ಡಾ॥ಜೆ.ಬಾಲಕೃಷ್ಣ

ಬೊಕಾಷಿಯೋನ ಡೆಕಮೆರಾನ್

ಕತೆ ಹೇಳುವ ಮುನ್ನ.......

1348ರಲ್ಲಿ ಇಟಲಿಯ ಸುಂದರ ನಗರಗಳಲ್ಲೊಂದಾದ ಫ್ಲಾರೆನ್ಸ್ ಪ್ಲೇಗ್‌ನ ದಾಳಿಗೆ ಬಲಿಯಾಗಿತ್ತು. ಯಾವ ಗ್ರಹಗತಿಯಿಂದಾಗಿಯೋ ಅಥವಾ ದೇವರ ಕೋಪದಿಂದಾಗಿಯೋ ಏನೋ ಪೂರ್ವದಲ್ಲಿ ಪ್ರಾರಂಭವಾದ ಪ್ಲೇಗ್ ಮಾರಿ ಹುಲುಮಾನವರನ್ನು ಅವರ ಪಾಪಗಳಿಗೆ ಪ್ರತಿಫಲವಾಗಿಯೋ



'ಬೊಕಾಷಿಯೊ ವಿವರಿಸಿರುವ ಫ್ಲಾರೆನ್ಸ್‌ನ ಪ್ಲೇಗ್' – ಕಲಾವಿದ ಸಬಾಟೆಲ್ಲಿಯ ಕೃತಿ

ಏನೋ ಎಂಬಂತೆ ಕಾಡಿತ್ತು. ಸಾವಿರಾರು ಜನ ಹುಳುಗಳ ಹಾಗೆ ಸಾಯುತ್ತಿದ್ದರು. ಊರಿಂದೂರಿಗೆ ವಿನಾಶ ಹರಡುತ್ತಾ ಪಶ್ಚಿಮದ ದಿಕ್ಕಿಗೆ ಸಾಗುತ್ತಿತ್ತು. ಆ ಭಯಂಕರ ಪ್ಲೇಗ್‌ನ ಎದುರು ಮನುಷ್ಯನ ಯಾವುದೇ ಜಾಣತನ, ಮುಂದಾಲೋಚನೆ ಕೆಲಸಕ್ಕೆ ಬರುತ್ತಿರಲಿಲ್ಲ. ವರುಷದ ವಸಂತದ ಆಗಮನದೊಂದಿಗೆ ಪ್ಲೇಗ್‌ನ ಭಯಂಕರ ಪರಿಣಾಮಗಳು ಕಾಣಿಸಿಕೊಳ್ಳತೊಡಗಿದವು. ಪೂರ್ವದಲ್ಲಿ ಮೂಗಿನಿಂದ ರಕ್ತ ಸುರಿಯುವುದು

ಸಾವಿನ ನಿಶ್ಚಿತ ಸಂಕೇತವಾಗಿತ್ತು. ಆದರೆ ಇಲ್ಲಿ ಅದರ ಜೊತೆಗೆ ಕಂಕುಳು ಹಾಗೂ ತೊಡೆಗಳ ಸಂದಿಯಲ್ಲಿ ಗಂಟುಗಳು ಕಾಣಿಸಿಕೊಳ್ಳಲಾರಂಭಿಸಿದವು. ನಂತರ ಆ ತರಹದ ಗಂಟುಗಳು ದೇಹವೆಲ್ಲಾ ವ್ಯಾಪಿಸುತ್ತಿದ್ದುವು. ಮೈಮೇಲೆಲ್ಲಾ ಕಪ್ಪು ಅಥವಾ ಕಂದು ಬಣ್ಣದ ಚುಕ್ಕೆಗಳು ಕಾಣಿಸಿಕೊಳ್ಳುತ್ತಿದ್ದವು. ಆ ಚುಕ್ಕೆಗಳು ಸಾವಿನ ಆಗಮನವನ್ನು ಸಾರುತ್ತಿದ್ದವು.

ಆ ಭಯಂಕರ ವ್ಯಾಧಿಗೆ ಕಾರಣವೇನೆಂದು ತಿಳಿಯದೆ ವೈದ್ಯರು ಕಂಗಾಲಾಗಿದ್ದರು. ಅವರ ಯಾವುದೇ ಸಲಹೆ, ಔಷಧ ಕೆಲಸ ಮಾಡುತ್ತಿರಲಿಲ್ಲ. ಪ್ಲೇಗ್ ರೋಗ ಒಬ್ಬರಿಂದೊಬ್ಬರಿಗೆ ಕಾಡ್ಗಿಚ್ಚಿನಂತೆ ಹರಡುತ್ತಿತ್ತು. ರೋಗಿಯೊಬ್ಬನ ಬಳಿ ಹೋದರೆ, ಮಾತನಾಡಿದರೆ ಆತನ ಬಟ್ಟೆ, ಇನ್ನಾವುದೇ ವಸ್ತು ಮುಟ್ಟಿದರೂ ಸಹ ರೋಗ ಹರಡುವುದು ಖಚಿತವಾಗಿತ್ತು. ಇದರಿಂದಾಗಿ ಜನರಲ್ಲಿ ಎಷ್ಟು ಹೆದರಿಕೆ ಉಂಟಾಗಿತ್ತೆಂದರೆ, ಕೊನೆಕೊನೆಗೆ ರೋಗಿಗಳನ್ನು ಅವರ ಪಾಡಿಗೆ ಬಿಟ್ಟು ತಮ್ಮ ರಕ್ಷಣೆಗಾಗಿ ಅವರಿಂದ ದೂರ ಓಡುತ್ತಿದ್ದರು.

ಕೆಲಜನ ಈ ರೋಗಿಗಳ ಸಹವಾಸವೇ ಬೇಡವೆಂದು ತಮ್ಮದೇ ಒಂದು ಗುಂಪು ರಚಿಸಿಕೊಂಡು ಯಾವುದಾದರೂ ಮನೆಯಲ್ಲಿ ತಮ್ಮ ಆಳುಕಾಳುಗಳೊಂದಿಗೆ, ರುಚಿಶುಚಿಯಾದ ಆಹಾರ ಸೇವಿಸಿಕೊಂಡು, ಒಳ್ಳೆಯ ವೈನ್ ಚಪ್ಪರಿಸಿಕೊಂಡು, ಹೊರಗಿನ ಸಾವು ನೋವಿನ ಪ್ರಪಂಚಕ್ಕೆ ತಮ್ಮ ಮನೆಯ ಹಾಗೂ ಮನದ ಬಾಗಿಲು, ಕಿಟಕಿಗಳನ್ನು ಮುಚ್ಚಿಕೊಂಡು ಸಾವು ನರಳಾಟದ ವಿಷಯಗಳನ್ನೇ ಮಾತನಾಡದಂತೆ ಸಂಗೀತ ಪ್ರಪಂಚದಲ್ಲಿ ಮುಳುಗಿರುತ್ತಿದ್ದರು. ಇನ್ನು ಕೆಲವರು ಇದಕ್ಕೆ ತದ್ವಿರುದ್ಧವಾಗಿ ಚೆನ್ನಾಗಿ ಕುಡಿದು, ಊರೆಲ್ಲಾ ಅಲೆದಾಡುತ್ತ, ಸಿಕ್ಕ ಸಿಕ್ಕ ಮನೆಗಳಿಗೆ ನುಗ್ಗಿ (ಬಹುಪಾಲು ಮನೆಗಳು ಖಾಲಿಯಾಗಿದ್ದವು) ದಾಂಧಲೆ ಎಬ್ಬಿಸುತ್ತಾ, ರೋಗಿಗಳನ್ನು ಸೋಕಿಸಿಕೊಳ್ಳದೆ ಈ ರೀತಿ ಮೋಜು ಮಾಡುವುದೇ ಪ್ಲೇಗ್ ರೋಗಕ್ಕೆ ಸರಿಯದ ಔಷಧವೆಂದು ನಂಬಿದ್ದರು.

ಇಂಥ ಭೀಭತ್ಸ ವಾತಾವರಣದಲ್ಲಿ ನಗರದ ಕಾನೂನು ಪಾಲಕರು ನಿಯಮ, ಕಾನೂನುಗಳೆಲ್ಲಾ ಸಾವಿನ ಗಾಳಿಗೆ ತೂರಿಹೋಗಿದ್ದವು. ಎಲ್ಲರೂ ಅವರಿಗಿಷ್ಟ ಬಂದಹಾಗೆ ನಡೆದು ಕೊಳ್ಳುತ್ತಿದ್ದರು.

ಬಹುಪಾಲು ಜನ ತಮ್ಮ ಮನೆ, ಆಸ್ತಿಪಾಸ್ತಿ ತ್ಯಜಿಸಿ, ಅಷ್ಟೇಕೆ ರೋಗದಿಂದ ನರಳುತ್ತಿರುವ ತಮ್ಮ ಸಂಬಂಧಿಕರನ್ನು, ಅಮ್ಮ ಅಪ್ಪಂದಿರನ್ನು, ಅಣ್ಣ ತಂಗಿಯರನ್ನು, ಹೆಂಡತಿ ಗಂಡಂದಿರನ್ನೂ ಬಿಟ್ಟು ಸಾವಿನಿಂದ ದೂರ ಓಡುವ ಸಲುವಾಗಿ ಫ್ಲಾರೆನ್ಸ್ ನಗರ ಬಿಟ್ಟು ಪರ ಊರುಗಳಿಗೆ ಹೋಗುತ್ತಿದ್ದರು.

ಕೆಲವರಿಗೆ ಆತ್ಮೀಯ ಗೆಳೆಯರೋ ಅಥವಾ ಹಣದಾಸೆಗೆ ಇರುತ್ತಿದ್ದ ಸೇವಕರೋ ತಮ್ಮ ಸೇವೆಗೆ ಇರುವುದನ್ನು ಬಿಟ್ಟಲ್ಲಿ, ಬಹುಪಾಲು ರೋಗಿಗಳು ತಮ್ಮ ಆರೈಕೆಗೆ ಯಾರೂ ಇಲ್ಲದೆ ಸಾಯುತ್ತಿದ್ದರು.

ಸಾವಿನ ಸಂಖ್ಯೆ ಹೆಚ್ಚಿದಂತೆಲ್ಲಾ ಶವಸಂಸ್ಕಾರದ ಆಚರಣೆಗಳೂ ಬದಲಾಗುತ್ತಿದ್ದವು. ಮೊದಲಿನಂತೆ ಶಿಸ್ತಿನ ಆಚರಣೆಗಳನ್ನು ನಡೆಸದೆ ಕಾಟಾಚಾರಕ್ಕೆ ಬೇಗ ಬೇಗ ಒಂದೆರಡು ಶಾಸ್ತ್ರಗಳನ್ನು ನಡೆಸಿ ಸಿಕ್ಕಸಿಕ್ಕ ಸ್ಮಶಾನಗಳಲ್ಲಿ ಹೂತುಬಿಡುತ್ತಿದ್ದರು. ಪಾದ್ರಿ, ಪುರೋಹಿತರಿಗಂತೂ ಬಿಡುವೇ ಇರುತ್ತಿರಲಿಲ್ಲ. ಸತ್ತವರಿಗೆ ಅಳುವವರೇ ಇರುತ್ತಿರಲಿಲ್ಲ. ಹೆಣಗಳನ್ನು ಗಾಡಿಗಳಲ್ಲಿ ಸ್ಮಶಾನಕ್ಕೆ ಸಾಗಿಸುತ್ತಿದ್ದರು. ದೊಡ್ಡ ದೊಡ್ಡ ಹಳ್ಳಗಳನ್ನು ಅಗೆದು ಹಡಗಿಗೆ ಸಾಮಾನು ತುಂಬಿಸುವಂತೆ ಶವಗಳನ್ನು ಗುಂಡಿಗೆ ತುಂಬಿ ಸಾಮೂಹಿಕ ಶವಸಂಸ್ಕಾರ ನಡೆಸಿಬಿಡುತ್ತಿದ್ದರು.

ಮಾರ್ಚ್ ಹಾಗೂ ಜುಲೈನ ನಡುವೆ ಫ್ಲಾರೆನ್ಸ್ ನಗರವೊಂದರಲ್ಲೇ ಒಂದು ಲಕ್ಷ ಜನ ಸತ್ತಿದ್ದರು. ಪ್ಲೇಗ್ ದಾಳಿಯಿಡುವ ಮೊದಲು ಆ ನಗರದಲ್ಲಿ ಅಷ್ಟೊಂದು ಜನರಿದ್ದಾರೆಂದು ತಿಳಿದೇ ಇರಲಿಲ್ಲ!

ಹೋ! ಫ್ಲಾರೆನ್ಸ್ ಎಂಥ ಸುಂದರ ನಗರ! ಅದ್ಭುತ ಅರಮನೆಗಳೂ, ಸುಂದರ ಮನೆಗಳೂ– ಕೆಲದಿನಗಳ ಹಿಂದಷ್ಟೇ ರಾಜಮನೆತನದವರಿಂದ, ಶ್ರೀಮಂತ, ಕುಲೀನ ಮನೆತನದವರಿಂದ ಅವರ ಆಳುಕಾಳುಗಳಿಂದ ಗಿಜಿಗಿಜಿಗುಡುತ್ತಿದ್ದ ಆ ಮನೆಗಳು ಇಂದು ಮಸಣಗಳಾಗಿವೆ. ಬೆಳಗಿದ್ದ ಜನ ರಾತ್ರಿ ಇರುತ್ತಿರಲಿಲ್ಲ. ಇಹಲೋಕದಲ್ಲಿ ಮಧ್ಯಾಹ್ನ ಗೆಳೆಯರೊಂದಿಗೆ, ನೆಂಟರೊಂದಿಗೆ ಊಟ ಮಾಡಿದವರು ರಾತ್ರಿಯ ಊಟದ ಹೊತ್ತಿಗೆ ತಮ್ಮ ಪಿತೃಗಳೊಂದಿಗೆ ಪರಲೋಕದಲ್ಲಿರುತ್ತಿದ್ದರು!

ಅಂತಹ ದಟ್ಟ ಸಾವಿನ ವಾಸನೆಯ ವಾತಾವರಣದಲ್ಲಿ ಒಂದು ಮಂಗಳವಾರ ಮುಂಜಾನೆ ಏಳು ಜನ ಯುವತಿಯರು ಸಂತ ಮರಿಯಾ ನೊವೆಲ್ಲಾ ಚರ್ಚಿನ ಬಳಿ ಪ್ರಾರ್ಥನೆಗೆಂದು ಬಂದವರು ಆಕಸ್ಮಿಕವಾಗಿ ಭೇಟಿಯಾಗುತ್ತಾರೆ. ಆ ಯುವತಿಯರು ಹದಿನೆಂಟರಿಂದ ಇಪ್ಪತ್ತೆಂಟರ ವಯಸ್ಸಿನವರು. ವಿದ್ಯಾವಂತರೂ, ಸುಸಂಸ್ಕೃತರೂ, ಸುಂದರಿಯರೂ ಆಗಿದ್ದು ಉತ್ತಮ ಮನೆತನದಿಂದ ಬಂದವರಾಗಿರುತ್ತಾರೆ. ಅವರ ಹೆಸರುಗಳು ಪಾಂಪಿನಿಯಾ, ಫಿಯಮೆಟ್ಟಾ, ಫಿಲೋಮೆನ, ಎಮಿಲಿಯ, ಲಾರೆಟ್ಟ, ನೆಫಿಲೆ ಮತ್ತು ಎಲಿಸಾ. ಅವರೆಲ್ಲಾ ಪ್ಲೇಗ್‌ನಿಂದಾದ ಸಾವು ನೋವಿನ ವಿಷಯ ಮಾತನಾಡುತ್ತಾ ಇರುವಾಗ ಹಿರಿಯವಳಾದ ಪಾಂಪಿನಿಯ ಹೇಳುತ್ತಾಳೆ,

'ಈ ನಗರದಲ್ಲಿ ನಾವೆಲ್ಲಾ ಏನೂ ಕಾರಣವಿಲ್ಲದೆ ಇದ್ದೇವೆ. ದಿನನಿತ್ಯ ಸಾವು–ನೋವು, ನರಳಾಟ ಕಾಣುತ್ತಿದ್ದೇವೆ, ಪಾದ್ರಿಯ ಒಂದೇ ಪ್ರಾರ್ಥನೆಯ ಯಾಂತ್ರಿಕ ವದರಾಟ ಕೇಳುತ್ತಿದ್ದೇವೆ. ಅವರಿವರಿಂದ ನಮಗೆ ಸಿಗುವ ಸುದ್ದಿಯೂ ಸಾವಿನ ಸುದ್ದಿಯೇ ಆಗಿರುತ್ತದೆ. ಎಲ್ಲಿ ಹೋದರೂ, ಎಲ್ಲಿ ನೋಡಿದರೂ



ಸಂತ ಮರಿಯಾ ನೊವೆಲ್ಲಾ ಚರ್ಚಿನ ಬಳಿ ಸೇರಿರುವ ಗೆಳೆಯರು

(1552ರ ಫ್ಲಾರೆನ್ಸ್ ಆವೃತ್ತಿಯ ಮರದಚ್ಚಿನ ಚಿತ್ರ)

ಸತ್ತವರ ಪ್ರೇತಾತ್ಮಗಳೇ ಕಂಡಂತೆ ಭಾಸವಾಗುತ್ತದೆ. ಹಾಗಿರುವಾಗ ಈ ಸ್ಮಶಾನ ನಗರದಲ್ಲಿ ನಾವೇಕೆ ಇರಬೇಕು. ನಮ್ಮ ಆತ್ಮಗಳೂ ಸಹ ನಮ್ಮ ದೇಹಕ್ಕೆ ಬೇರೆಯವರಿಗಿಂತ ಬಲವಾಗೇನೂ ಅಂಟಿಕೊಂಡಿಲ್ಲ. ನಮ್ಮಂಥ ಯುವಕ ಯುವತಿಯರೂ ಸತ್ತಿರುವುದನ್ನು ಕಂಡಿದ್ದೇವೆ. ಹಾಗಿರುವಾಗ ನಮಗೆ ಶಕ್ತಿ ಇರುವಾಗಲೇ ಈ ಊರು ಬಿಟ್ಟು ದೂರ ಹೋಗೋಣ; ಸಾಧ್ಯವಿರುವಾಗಲೇ ತಪ್ಪಿಸಿಕೊಳ್ಳೋಣ. ಪಕ್ಷಿಗಳ ಕಲರವ ಕೇಳುವಲ್ಲಿಗೆ, ಸುಂದರ ಹಸಿರು ಬೆಟ್ಟ, ಕಣಿವೆ ಕಾಣುವಲ್ಲಿಗೆ, ಸಮುದ್ರದ ಅಲೆಗಳ ಹಾಗೆ ಓಲಾಡುವ ಗೋಧಿ ಹೊಲಗಳು ಇರುವೆಡೆಗೆ ಹೋಗೋಣ. ನಾವು ಎಲ್ಲರನ್ನೂ ಬಿಟ್ಟು ಹೋಗುತ್ತಿದ್ದೇವೆನ್ನುವ ಪಾಪ ಪ್ರಜ್ಞೆ ಬೇಡ. ಏಕೆಂದರೆ ನಾವು ಯಾರನ್ನೂ ಬಿಟ್ಟು ಹೋಗುತ್ತಿಲ್ಲ; ಒಂದು ರೀತಿಯಲ್ಲಿ ನಮ್ಮ ಸಂಬಂಧಿಕರೆಲ್ಲಾ ಸತ್ತು ನಮ್ಮನ್ನೇ ಬಿಟ್ಟು ಹೋಗಿದ್ದಾರೆ. ನಾವು ಇಲ್ಲೇ ಇದ್ದರಂತೂ ನಮಗೆ ಸಾವು ನಿಶ್ಚಿತ. ಆದ್ದರಿಂದ ದೂರದ ಹಳ್ಳಿಗಳಿಗೆ ನಮ್ಮ ಆಳುಕಾಳುಗಳೊಂದಿಗೆ

ಹೋಗೋಣ. ಸಾಧ್ಯವಿರುವಷ್ಟು ದಿನ ಸುಖ ಸಂತೋಷದಿಂದ ಬದುಕೋಣ.'

ಪಾಂಪಿನಿಯಾಳ ಸಲಹೆಯನ್ನು ಎಲ್ಲರೂ ಒಪ್ಪುತ್ತಾರೆ ಹಾಗೂ ಕೂಡಲೇ ಹೊರಡೋಣವೆಂದು ಹೇಳುತ್ತಾರೆ. ಆಗ, 'ಬರೇ ಹೆಂಗಸರೇ ಹೊರಡುವುದು ಕಷ್ಟ.. ನಿಮಗೇ ಗೊತ್ತು ಗಂಡಸೊಬ್ಬನಿಲ್ಲದಿದ್ದಲ್ಲಿ ಹೆಂಗಸರು ಹೇಗೆ ವರ್ತಿಸುತ್ತಾರೆಂಬುದು! ನಾವೆಲ್ಲಾ ಮೊದಲೇ ಪುಕ್ಕಲು ಸ್ವಭಾವದವರು. ಯಾರಾದರು ಗಂಡಸರನ್ನೂ ಕರೆದೊಯ್ಯೋಣ' ಎನ್ನುತ್ತಾಳೆ ಫಿಲೋಮೆನಾ. ಆಗ ಅಲ್ಲಿಗೆ ಪಾಂಫಿಲೊ, ಫಿಲೋಸ್ಟ್ರಾಟೊ ಹಾಗೂ ಡಿಯೋನಿಯೋ ಎಂಬ ಮೂವರು ಸ್ಫುರದ್ರೂಪಿ ಯುವಕರು ಬರುತ್ತಾರೆ. ಅವರು ಆ ಯುವತಿಯರಿಗೆ ಪರಿಚಯವಿದ್ದವರೆ. ಪಾಂಪಿನಿಯಾ, 'ಅದೃಷ್ಟವೇ ಅವರನ್ನು ಅಲ್ಲಿಗೆ ಕರೆತಂದಿದೆ' ಎಂದು ಹೇಳುತ್ತಾ, ಅವರಿಗೆ ಅದುವರೆಗೆ ನಡೆದ ಮಾತುಕತೆಯೆಲ್ಲಾ ತಿಳಿಸಿ ಅವರ ಜೊತೆ ಬರುವಂತೆ ಕೇಳುತ್ತಾಳೆ. ಆ ಯುವಕರೂ ಸಂತೋಷದಿಂದ ಹೊರಡಲು ತಯಾರಾಗುತ್ತಾರೆ.

ಎಲ್ಲರೂ ಮರುದಿನ ಮುಂಜಾನೆಯೇ ತಮಗೆ ಬೇಕಾದ ಸಾಮಾನು ಸರಂಜಾಮುಗಳನ್ನು ಹೊತ್ತು ಆಳುಕಾಳುಗಳೊಂದಿಗೆ ಹೊರಟು ಊರ ಹೊರಗಿನ ತೋಟದ ಮನೆಯೊಂದಕ್ಕೆ ಹೋಗುತ್ತಾರೆ. ಆ ಹತ್ತು ಜನಗಳ ಗುಂಪಿನಲ್ಲಿ ದಿನಕ್ಕೊಬ್ಬರು ನಾಯಕರಾಗಬೇಕೆಂದೂ, ಆ ದಿನ ಎಲ್ಲರೂ ಅವರು ಹೇಳಿದಂತೆ ಕೇಳಬೇಕೆಂದು ತೀರ್ಮಾನಿಸುತ್ತಾರೆ.

ಆ ಮನೆಯಲ್ಲಿ ಎಲ್ಲರೂ ಹರುಷೋಲ್ಲಾಸದಿಂದ ರುಚಿಯಾದ ವೈನ್ ಕುಡಿದು, ಒಳ್ಳೆಯ ಆಹಾರ ಸೇವಿಸಿ, ಹೊರಗಿನ ತೋಟದಲ್ಲಿ ಓಡಾಡಿ, ಹಾಡು, ಸಂಗೀತದೊಂದಿಗೆ ಹೊರಗಿನ ಸಾವಿನ ಪ್ರಪಂಚ ಮರೆತು ಕಾಲ ಕಳೆಯುತ್ತಾರೆ.

ಮೊದಲನೆಯ ದಿನ ಆ ಗುಂಪಿಗೆ ನಾಯಕಿಯದ ಪಾಂಪಿನಿಯಾ ಕಾಲ ಕಳೆಯಲು ದಿನಕ್ಕೊಬ್ಬಬ್ಬರು ಒಂದೊಂದು ಕತೆ ಹೇಳಬೇಕೆಂದು ತಿಳಿಸುತ್ತಾರೆ. ಎಲ್ಲರೂ ಆ ಸಲಹೆಯನ್ನು ಅನುಮೋದಿಸಿ ಕತೆಗಳನ್ನು ಕೇಳಲು ಉತ್ಸುಕರಾಗುತ್ತಾರೆ.

ಕಂಡದ್ದು ಕಂಡ ಹಾಗೆ

ಇಟಲಿಯ ಲುನಿಜಿಯಾನ ಎಂಬಲ್ಲಿ ಸಾಧು ಸಂತರಿಂದ ಕೂಡಿದ ಆಶ್ರಮವೊಂದಿತ್ತು. ಅಲ್ಲಿ ಉಪವಾಸ ವ್ರತಗಳನ್ನು ಆಚರಿಸುವುದು ಕಡ್ಡಾಯವಾಗಿತ್ತು.ಅಂತಹ ಆಚರಣೆಗಳನ್ನು ಪರಿಪಾಲಿಸುತ್ತಿದ್ದರೂ ಸಹ ಬಳಲದೆ ದೃಢಕಾಯನಾಗಿದ್ದ ಯುವ ಸಂನ್ಯಾಸಿಯೊಬ್ಬನಿದ್ದ. ಒಂದು ದಿನ ಮಧ್ಯಾಹ್ನ



ಆಶ್ರಮದಲ್ಲಿ ಎಲ್ಲರೂ ಊಟ ಮಾಡಿ ಮಲಗಿ ವಿರಮಿಸುತ್ತಿರುವಾಗ ನಿದ್ದೆ ಬರದೆ ಹೊರಳಾಡುತ್ತಿದ್ದ ಈ ಯುವ ಸಂನ್ಯಾಸಿ ಎದ್ದು ತೋಟದಲ್ಲಿ ಓಡಾಡಲು ಹೋದ. ತೋಟದ ಮೂಲೆಯೊಂದರಲ್ಲಿ ಹೂ ಕೀಳಲು ಪಕ್ಕದ ತೋಟದ ರೈತರ ಯುವತಿಯೊಬ್ಬಳು ಬಂದಿದ್ದಳು. ಅವಳ ಸೌಂದರ್ಯವನ್ನು ನೋಡಿದಾಕ್ಷಣ ಆ ಯುವ ಸಂನ್ಯಾಸಿಗೆ ಆಕೆಯ ಮೇಲೆ ಅತೀವ ವ್ಯಾಮೋಹ ಉಂಟಾಯಿತು.

ಆತ ನಿಧಾನವಾಗಿ ಆಕೆಯ ಬಳಿ ಹೋಗಿ ತನ್ನ ಪರಿಚಯ ಮಾಡಿಕೊಂಡ; ಅದೂ ಇದೂ ಮಾತನಾಡಿದ ನಂತರ ತನ್ನಲ್ಲಿನ ಆಸೆಯನ್ನು ತೋಡಿಕೊಂಡ; ಆ ಆಸೆಯ ಈಡೇರಿಕೆಗೆ ಆಕೆಯನ್ನು ತನ್ನ ಕೋಣೆಗೆ ಬರುವಂತೆ ಆಹ್ವಾನಿಸಿದ. ಅವರಿಬ್ಬರ ನಡುವೆ ಹಲವಾರು ನಿಮಿಷ ಮಾತುಕತೆ ನಡೆದು, ಕೊನೆಗೆ ಎಂಥದೋ ಒಪ್ಪಂದ ಏರ್ಪಟ್ಟು ಆತನ ಕೋಣೆಗೆ ಬರಲು

ಆಕೆ ಒಪ್ಪಿದಳು. ಆ ಯುವ ಸಾಧು ಆಶ್ರಮದ ಇನ್ನಾವ ಸಾಧುವಿನ ಕಣ್ಣಿಗೂ ಬೀಳದಂತೆ ಅವಳನ್ನು ತನ್ನ ಕೋಣೆಗೆ ಕರೆದೊಯ್ದು ಅವಳೊಂದಿಗೆ ಮಲಗಿದ.

ಆದರೆ ಆ ಆಶ್ರಮದ ವೃದ್ಧ ಹಿರಿಯಾಧಿಕಾರಿಗೆ ಆ ಆಶ್ರಮದಲ್ಲಿ ಎಂದೂ ಕೇಳದ ಶಬ್ದ ಕೇಳಿಸಿದಂತಾಗಿ ನಿದ್ದೆಯಿಂದ ಎಚ್ಚೆತ್ತು ಹೊರಬಂದ. ಆ ಯುವ ಸಂನ್ಯಾಸಿಯ ಕೋಣೆಯ ಮುಂದೆ ಹಾದು ಹೋಗುವಾಗ ಆ ಕೋಣೆಯಿಂದ ಆ ಶಬ್ದ ಬರುತ್ತಿದ್ದುದನ್ನು ನಿಂತು ಆಲಿಸಿದ. ಆ ಕೋಣೆಯೊಳಗೆ ಒಂದು ಹೆಣ್ಣು ಯುವ ಸಂನ್ಯಾಸಿಯೊಂದಿಗಿರುವುದು ತಿಳಿದು ಬಂತು. ಆಶ್ರಮದ ಆಚಾರ ವಿಚಾರಗಳ ಉಲ್ಲಂಘನೆ ಮಾಡಿರುವುದರಿಂದ ಅತಿಯಾದ ಸಿಟ್ಟು ಬಂತು. 'ಕೂಡಲೇ ಬಾಗಿಲು ತೆರೆದು ಯುವ ಸಂನ್ಯಾಸಿಯನ್ನು ದಂಡಿಸಲೆ?' ಎಂದು ಆಲೋಚಿಸಿದ. ನಂತರ ಬೇರೇನೋ ತೀರ್ಮಾನಿಸಿ ಸದ್ದು ಮಾಡದಂತೆ ತನ್ನ ಕೋಣೆಗೆ ಹಿಂದಿರುಗಿದ.

ಆದರೆ ಇತ್ತ ಕೋಣೆಯಲ್ಲಿ ಯುವ ಸಂನ್ಯಾಸಿ ಹಾಗೂ ಯುವತಿ ಸುಖ ಸಂತೋಷದಿಂದ ಇಹಲೋಕ ಮರೆಯುವ ಅವಸ್ಥೆಯಲ್ಲಿದ್ದರೂ ಸಹ ಆತನಿಗೆ ತನ್ನ ಕೋಣೆಯ ಹೊರಗೆ ಹೆಜ್ಜೆಯ ಸದ್ದು ಕೇಳಿಸಿದಂತಾಗಿ ಕಿವಿ ನೆಟ್ಟಗಾಯಿತು. ಸದ್ದು ಮಾಡದೆ ಎದ್ದು ಬಾಗಿಲ ಸಂದಿಯಲ್ಲಿ ಇಣಿಕಿ ನೋಡಿದರೆ, ಹೊರಗೆ ಆಶ್ರಮದ ಹಿರಿಯ ವೃದ್ಧ ಮುಖ್ಯಾಧಿಕಾರಿ ತಾವು ಮಾಡುತ್ತಿದ್ದ ಶಬ್ದ ಕೇಳಿಸಿಕೊಳ್ಳುತ್ತಿದ್ದುದನ್ನು ನೋಡಿ ಆತನ ಜಂಘಾಬಲವೇ ಉಡುಗಿಹೋಯಿತು. ಬ್ರಹ್ಮಚಾರಿಗಳ ಆಶ್ರಮದೊಳಕ್ಕೆ ಹೆಣ್ಣೊಂದನ್ನು ಕರೆತಂದುದೇ ಅಲ್ಲದೆ ಆಕೆಯೊಂದಿಗೆ ಸಾಧು ಸಂನ್ಯಾಸಿಗಳು ಮಾಡಬಾರದ ಕೆಲಸವನ್ನು ಮಾಡುತ್ತಿದ್ದುದರಿಂದ ಇನ್ನು ತನಗೆ ಉಗ್ರ ಶಿಕ್ಷೆಯಾಗುತ್ತದೆಂದು ತಿಳಿದು ಹೆದರಿದ. ಆದರೆ ತನ್ನ ಗಾಬರಿ, ಹೆದರಿಕೆಯನ್ನು ಆ ಯುವತಿಗೆ ತೋರ ಗೊಡದೆ ಆ ಪರಿಸ್ಥಿತಿಯಿಂದ ಪಾರಾಗುವ ಬಗೆಗೆ ಆಲೋಚಿಸ ತೊಡಗಿದ. ಕೊನೆಗೆ ಆತನಿಗೊಂದು ಉಪಾಯ ಹೊಳೆಯಿತು.

ಆತ ಆ ಯುವತಿಗೆ, 'ನಿನ್ನನ್ನು ಇಲ್ಲಿಂದ ಹೊರಗೆ ಕರೆದೊಯ್ಯುವ ಉಪಾಯ ಹುಡುಕ ಬೇಕು. ನಾನು ಹೊರಗೆ ಹೋಗಿ ಬರುವವರೆಗೂ ಇಲ್ಲೇ ನಿಶ್ಯಬ್ಧವಾಗಿರು' ಎಂದು ತಿಳಿಸಿ ತನ್ನ ಕೋಣೆಗೆ ಬೀಗ ಹಾಕಿ ಹೊರಟ. ನೇರ ಆಶ್ರಮದ ವೃದ್ಧ ಮುಖ್ಯಾಧಿ-ಕಾರಿಯ ಕೋಣೆಗೆ ಹೊರಟು, ಏನೂ ನಡೆದಿಲ್ಲವೆಂಬಂತೆ ನಟಿಸುತ್ತಾ, ತಾನು ಕಾಡಿಗೆ ಸೌದೆ ತರಲು ಹೋಗುವುದಾಗಿ ತಿಳಿಸಿ ದಿನನಿತ್ಯದ ಅಭ್ಯಾಸದಂತೆ ಕೊಠಡಿಯ ಕೀಲಿ ಕೈ ಆತನಿಗೆ ಕೊಟ್ಟು ವಂದಿಸಿ ಹೊರಟ.

ಇತ್ತ ವೃದ್ಧ ಮುಖ್ಯಾಧಿಕಾರಿ ತನಗೇನೂ ತಿಳಿದಿಲ್ಲವೆಂಬಂತೆ ಇದ್ದು ಅತ್ತ ಯುವ ಸಂನ್ಯಾಸಿ ಹೊರಟೊಡನೆ ಆತನ ಕೋಣೆಯ ಕಡೆಗೆ ನಡೆದ. 'ಎಲ್ಲ ಸಂನ್ಯಾಸಿಗಳ ಎದುರು ಕೋಣೆಯ ಬಾಗಿಲು ತೆರೆದು ಆ ಯುವ ಸಂನ್ಯಾಸಿಯ ವ್ಯಭಿಚಾರ ಬಯಲಿಗೆಳೆಯಲೆ? ಅಥವಾ ಮೊದಲಿಗೆ ನಾನೊಬ್ಬನೇ ಕೋಣೆಯೊಳಗೆ ಹೋಗಿ ಆ ಹೆಣ್ಣಿಗೆ ಇವೆಲ್ಲಾ ಹೇಗೆ ನಡೆಯಿತೆಂದು ವಿಚಾರಿಸಲೆ?' ಎಂದು ಮುಖ್ಯಾಧಿಕಾರಿ ಆಲೋಚಿಸಿದ. 'ಆ ಹೆಣ್ಣು ಯಾರಾದರೂ ಗೌರವಾನ್ವಿತ ವ್ಯಕ್ತಿಯ ಪತ್ನಿಯೋ, ಪುತ್ರಿಯೋ ಆಗಿದ್ದು, ಎಲ್ಲರೆದುರು ಆಕೆಯ ಮಾನ ಕಳೆಯುವುದು ಸರಿಯಲ್ಲ, ಆದ್ದರಿಂದ ನಾನೊಬ್ಬನೇ ಆಕೆಯನ್ನು ಖುದ್ದಾಗಿ ಕಂಡು ವಿಚಾರಿಸಿಕೊಂಡು ಬರುತ್ತೇನೆ' ಎಂದು ಕೋಣೆಯ ಕೀಲಿ ತೆರೆದು ಒಳಹೋದ. ಆತನನ್ನು ಕಂಡ ಯುವತಿ ಬೆಚ್ಚಿ ಬೆದರಿದಳು; ಅವಮಾನವಾದಂತಾಗಿ ಅಳತೊಡಗಿದಳು.

ಅವಳ ಸೌಂದರ್ಯ, ದೇಹಸಿರಿ ಕಂಡ ಆತ ಬಾಯ್ದೆರೆದು ನಿಂತ. ವೃದ್ಧನಾದರೂ ಆತನಲ್ಲಿ ಬಿಸಿರಕ್ತವಿತ್ತು; ಆತನ ಮಾಂಸಖಂಡಗಳು ಬೆಚ್ಚಗಾಗತೊಡಗಿದವು, ಮಲಗಿದ್ದ ಕಾಮನೆಗಳು ಎದ್ದು ಹಾವಿನಂತೆ ಆಡತೊಡಗಿದವು. 'ಇಂಥ ಅವಕಾಶ ಸಿಕ್ಕಿರುವಾಗ ನಾನೇಕೆ ಉಪಯೋಗಿಸಿಕೊಳ್ಳಬಾರದು? ಅಲ್ಲದೆ ಆಕೆ ಇಲ್ಲಿರುವುದು ಯಾರಿಗೂ ತಿಳಿದಿಲ್ಲ. ನಾನೀಗ ಸುಖಿಸಿದರೆ ಯಾರಿಗೂ ತಿಳಿಯುವುದಿಲ್ಲ. ಅಲ್ಲದೆ ಮಾಡಿದ ಪಾಪವನ್ನು ಮುಚ್ಚಿಟ್ಟಲ್ಲಿ ಅದು ಅರ್ಧ ಪರಿಹಾರವಾದಂತೆಯೆ! ದೇವರೇ ಈ ವೃದ್ಧನ ಮೇಲೆ ಕರುಣೆ ತೋರಿ ಈ ರೀತಿಯ ಅವಕಾಶ ಕಲ್ಪಿಸಿಕೊಟ್ಟಿದ್ದಾನೆ' ಎಂದುಕೊಂಡ. ಅಳುತ್ತಿದ್ದ ಯುವತಿಯನ್ನು ತಬ್ಬಿಕೊಂಡು ಸಂತೈಸಿದ, ಅವಳಲ್ಲಿ ಧೈರ್ಯ ತುಂಬಿದ. ಅವಳು ಸುಮ್ಮನಾದ ನಂತರ ತನ್ನ ಮನದ ಅಳಲು ತೋಡಿಕೊಂಡ.

ಆ ಯುವತಿಯೂ ಅಷ್ಟೆ, ಕಲ್ಲಿನ ಹೃದಯದವಳಾಗಿರಲಿಲ್ಲ. ಹಿರಿಯ ಸಾಧು ಸಂನ್ಯಾಸಿಗಳ ಮನನೋಯಿಸುವಂತಹವಳಾಗಿರಲಿಲ್ಲ. ಸಮ್ಮತಿಸಿದಳು. ಆಕೆಯನ್ನು ಮುದ್ದಿಸಿದ ವೃದ್ಧ ಮುಖ್ಯಾಧಿಕಾರಿ ಆ ಕೋಣೆಯ ಯುವ ಸಂನ್ಯಾಸಿಯ ಮಂಚಕ್ಕೆ ಆಕೆಯನ್ನು ಕರೆದೊಯ್ದು. ಆಕೆಯ ಸುಕೋಮಲ ದೇಹವನ್ನು ತನ್ನ ಹಿರಿತನದ ಘನತೆಯ ಭಾರದಿಂದ ನಲುಗಿಸಲು ಇಷ್ಟವಾಗದೆಯೋ ಏನೋ ಆತ ಆಕೆಯ ಎದೆಯ ಮೇಲೆ ಮಲಗಲಿಲ್ಲ, ಬದಲಿಗೆ ತನ್ನ ಎದೆಯ ಮೇಲೆ ಆಕೆಯನ್ನೇ ಮಲಗಿಸಿಕೊಂಡ.

ಇತ್ತ ಸೌದೆಗೆಂದು ಹೊರಟ ಯುವ ಸಂನ್ಯಾಸಿ, ಕಾಡಿಗೆ ಹೋಗದೆ



ಮುದುಕ ಏನು ಮಾಡುತ್ತಾನೋ ನೋಡೋಣವೆಂದು ಆಶ್ರಮದ ಮೂಲೆಯೊಂದರಲ್ಲಿ ಕೂತು ಎಲ್ಲಾ ಗಮನಿಸುತ್ತಿದ್ದ. ಮುಖ್ಯಾಧಿಕಾರಿ ಕೋಣೆಯ ಬಾಗಿಲು ಹಾಕಿಕೊಂಡ ಕೂಡಲೆ ಒಳಗೆ ನಡೆಯುತ್ತಿರುವುದನ್ನು ಊಹಿಸಿ ಅದನ್ನು ನೋಡಲೆಂದು ಎದ್ದು ಬಂದು ಬಾಗಿಲ ಸಂದಿಯಲ್ಲಿ ಇಣುಕಿ ನೋಡಿ ಮಾತನಾಡಿದ್ದು ಕೇಳಿಸಿಕೊಂಡ, ಮಾಡಿದ್ದು ನೋಡಿದ. ನಂತರ ಕಾಡಿಗೆ ಹೋಗಿ ಸ್ವಲ್ಪ ಸೌದೆ ತಂದು ಹಾಕಿದ.

ಅಷ್ಟೊತ್ತಿಗೆ ಬಳಲಿ ತನ್ನ ಕೋಣೆ ಸೇರಿದ್ದ ಮುಖ್ಯಾಧಿಕಾರಿ ಆ ಯುವ ಸಂನ್ಯಾಸಿಯನ್ನು ತನ್ನ ಕೋಣೆಗೆ ಕರೆಸಿ, ತಾನೂ ಏನೂ ಮಾಡಿಲ್ಲವೆಂಬಂತೆ ನಟಿಸಿ, ಆ ಯುವ ಸಂನ್ಯಾಸಿಯನ್ನು ಚೆನ್ನಾಗಿ ಬೈದು, ಮಾಡಿದ ವ್ಯಭಿಚಾರದ ತಪ್ಪಿಗೆ ಶಿಕ್ಷೆಯಾಗಿ ಕಾರಾಗೃಹವಾಸ ಅನುಭವಿಸುವಂತೆ ಆದೇಶಿಸಿದ. ಅದಕ್ಕೆ ವಿಚಲಿತನಾಗದೆ ಯುವ ಸಂನ್ಯಾಸಿ ಕೈ ಮುಗಿದು, 'ಸ್ವಾಮಿ, ಈ ಆಶ್ರಮದಲ್ಲಿ ನಾನು ಬಹಳ ವರ್ಷಗಳಿಂದ ತಮ್ಮ ಸೇವೆ ಮಾಡುತ್ತಿದ್ದೇನೆ. ಈ ಆಶ್ರಮದಲ್ಲಿ ನಮ್ಮಂಥ ಸಂನ್ಯಾಸಿಗಳು ಆಚರಿಸಬೇಕಾದ ಪ್ರತಿಯೊಂದು ರೀತಿರಿವಾಜೂ ಸಹ ಹೇಳಿಕೊಟ್ಟಿದ್ದೀರಿ. ಆದರೆ ಸಂನ್ಯಾಸಿಗಳು ಹೆಣ್ಣಿನ ಕೆಳಗೆ ಮಲಗಿ ನಮ್ರರಾಗಬೇಕೆಂದು ತಾವು ಹೇಳಿಕೊಟ್ಟಿರಲಿಲ್ಲ. ಆದರೆ ಈ ದಿನ ತಾವು ಅದನ್ನು ಮಾಡಿಯೇ ತೋರಿಸಿದ್ದೀರಿ. ನಾನು ಪ್ರಮಾಣ ಮಾಡುತ್ತೇನೆ, ಈ ಬಾರಿ ನನ್ನನ್ನು ಕ್ಷಮಿಸಿದಲ್ಲಿ, ಮತ್ತೆಂದೂ ತಪ್ಪಾಗಿ ನಡೆದುಕೊಳ್ಳದೆ ತಾವು ತೋರಿಸಿಕೊಟ್ಟ ರೀತಿಯಲ್ಲಿಯೇ ನಡೆದುಕೊಳ್ಳುತ್ತೇನೆ' ಎಂದ.

ಈ ಯುವ ಸಂನ್ಯಾಸಿ ತನಗಿಂತ ಚತುರನೆಂದು ತಿಳಿದ ಮುಖ್ಯಾಧಿಕಾರಿ ಆತನನ್ನು ಕ್ಷಮಿಸಿದ್ದೂ ಅಲ್ಲದೆ, ತಾನು ಕಂಡದ್ದನ್ನು ಯಾರಿಗೂ ತಿಳಿಸಬೇಡವೆಂದು ಕೇಳಿಕೊಂಡ. ಆ ಯುವತಿಯನ್ನು ಬೇರ್‍ಯಾರಿಗೂ ತಿಳಿಯದಂತೆ ಹೊರಗೆ ಕರೆದುಕೊಂಡು ಹೋಗಲು ಅನುವು ಮಾಡಿಕೊಟ್ಟ ಹಾಗೂ ಅದೇ ರೀತಿ ಆಗಾಗ ಕರೆದುಕೊಂಡು ಬರಲೂ ಸಹ ಅನುಮತಿ ನೀಡಿದ.

ಕಳ್ಳನಿಗೆ ರಜಾದಿನಗಳಿಲ್ಲ!!


ಇಟಲಿಯ ಪೀಸಾ ನಗರದಲ್ಲಿ ರಿಕಿಯಾರ್ಡೊ ಎಂಬ ನ್ಯಾಯಾಧೀಶನಿದ್ದ. ಆತ ತುಂಬಾ ಸಣಕಲನಾಗಿದ್ದ ಹಾಗೂ ಆತನಿಗೆ ತಲೆಯಲ್ಲಿ ಬುದ್ಧಿಯಿತ್ತೇ ವಿನಃ ದೇಹದಲ್ಲಿ ಏನೇನೂ ತಾಕತ್ತಿರಲಿಲ್ಲ. ಆತ ಹಣವಂತನಾಗಿದ್ದುದರಿಂದ ಅದರ ಸೊಕ್ಕು ಆತನ ತಲೆಗೇರಿತ್ತು. ಒಂದು ದಿನ ಆತ ಮದುವೆಯಾಗಲು ನಿರ್ಧರಿಸಿ ಪೀಸಾ ನಗರದಲ್ಲೇ ಅತಿ ಸುಂದರಿಯಾದ ಬಾರ್ತೊಲೋಮಿಯಾ ಎಂಬ ಯುವತಿಯನ್ನು ಮದುವೆಯಾದ. ಆತನ ದೈಹಿಕ ದುರ್ಬಲತೆಯಿಂದಾಗಿ ಹೆಂಡತಿಯನ್ನು ಮೊದಲ ರಾತ್ರಿ ಸಂತೃಪ್ತಿಗೊಳಿಸುವುದೇ ಕಷ್ಟವಾಯಿತು. ಅಷ್ಟಕ್ಕೇ ಆತ ಬೆಳಗಿನ ಹೊತ್ತಿಗೆ ಬಿಳಿಚಿದ ಬೊಂಬೆಯಂತಾಗಿದ್ದ. ಆತನನ್ನು ಸರಿಮಾಡಲು ಬಿಳಿ ವೈನ್, ಪೋಷಕಾಂಶಗಳುಳ್ಳ ಹಲವಾರು ಸಿಹಿತಿಂಡಿ ಮುಂತಾದುವನ್ನು ಕೊಡಬೇಕಾಯ್ತು.

ಆಗ ಆತನಿಗೆ ತನ್ನ ನಿಜಶಕ್ತಿಯ ಅರಿವಾಗಿ ಹೆಂಡತಿಯ ಬಳಿ ಹಾಸಿಗೆಯ ಮೇಲೆ ಅವಮಾನಗೊಳ್ಳುವುದಕ್ಕಿಂತ ಆಕೆಯೊಂದಿಗೆ ಮಲಗುವುದನ್ನೇ ತಪ್ಪಿಸಬೇಕೆಂದು ಉಪಾಯಗಳನ್ನು ಹುಡುಕತೊಡಗಿದ. ಈ ದಿನ ಹುಣ್ಣಿಮೆಯೆಂದೋ ಅಥವಾ ಅಮಾವಾಸ್ಯೆಯೆಂದೋ ಅಥವಾ ಇನ್ನಾವುದಾದರೂ ದೇವರು ದಿಂಡಿರ ಹೆಸರು ಹೇಳಿ "ರಜಾದಿನ'ವೆಂದು ಹೇಳುತ್ತಾ ಆಕೆಯೊಂದಿಗೆ ಮಲಗುವುದನ್ನು ತಪ್ಪಿಸಿಕೊಳ್ಳುತ್ತಿದ್ದ. ಆತನ ಹಬ್ಬಹರಿದಿನ, ಸಾಧುಸಂತರ ದಿನಗಳ ಪಂಚಾಂಗದ ಪ್ರಕಾರ ಪ್ರತಿದಿನವೂ ರಜಾದಿನವಾಗಿತ್ತು. ಅಲ್ಲದೆ ತನ್ನ ಪತ್ನಿಗೆ ದಿನಾಲೂ ದೇವರ ಮಹಿಮೆಗಳ, ಸಾಧುಸಂತರ ಕತೆಗಳನ್ನು ಹೇಳಿ ಗಂಡಹೆಂಡತಿ ಕಾಮಜೀವನದಿಂದ ದೂರವಿರಬೇಕೆಂದು ಬೋಧಿಸುತ್ತಿದ್ದ.

ಆ ನ್ಯಾಯಾಧೀಶ ತನ್ನ ಹೆಂಡತಿಗೆ "ರಜಾದಿನ'ಗಳನ್ನು ತಿಳಿಸಿಕೊಟ್ಟ ಮೇಲೆ ಆಕೆಗೆ ಯಾರಾದರೂ ಅಕ್ಕಪಕ್ಕದವರು ಅವಳಿಗೆ "ಕೆಲಸದ ದಿನ'ಗಳನ್ನು

ತಿಳಿಸಿಕೊಟ್ಟುಬಿಟ್ಟಾರೆಂದು ಅಸೂಯೆಯಿಂದ, ಹದ್ದಿನಕಣ್ಣಿನಿಂದ ಅವಳನ್ನು ಕಾಯತೊಡಗಿದ.

ಒಂದು ಸಾರಿ ಬೇಸಿಗೆಯಲ್ಲಿ ರಿಕಿಯಾರ್ಡೊ ಒಂದಷ್ಟು ದಿನ ತಂಪು ಹವೆ ಸೇವಿಸಿ ಕಾಲಕಳೆಯಲೆಂದು ತನ್ನ ಪತ್ನಿ ಬಾರ್ತೊಲೊಮಿಯಾಳನ್ನು ಮಾಂಟೆನೀರೋಗೆ ಕರೆದೊಯ್ದ. ಅಲ್ಲಿ ಒಂದು ದಿನ ಮೀನು ಹಿಡಿಯಲು ರಿಕಿಯಾರ್ಡೊ ನಿರ್ಧರಿಸಿ ಮೀನುಗಾರರೊಂದಿಗೆ ಹೊರಟ ಹಾಗೂ



1552ರ ಫ್ರೆಂಚ್ ಆವೃತ್ತಿಯ ಮುದ್ರಣ ಚಿತ್ರ

ಮತ್ತೊಂದು ಸಣ್ಣ ದೋಣಿಯಲ್ಲಿ ಬಾರ್ತೊಲೋಮಿಯಾ ತನ್ನ ಸೇವಕಿಯರೊಂದಿಗೆ ಅದನ್ನು ನೋಡಲು ಸಾಗರದಲ್ಲಿ ಹೊರಟಳು. ಮೀನು ಹಿಡಿಯುವ ಉತ್ಸಾಹದಲ್ಲಿ ಅವರಿಗರಿವಿಲ್ಲದೆ ಸಮುದ್ರದಲ್ಲಿ ಹಲವಾರು ಮೈಲಿಗಳಷ್ಟು ದೂರ ಹೋಗಿಬಿಟ್ಟಿದ್ದರು. ಆಗ ಕುಖ್ಯಾತ ಕಡಲ್ಗಳ್ಳ ಪಗಾನಿನೊ ಎಲ್ಲಿಂದಲೋ ಬಿರುಗಾಳಿಯಂತೆ ದಾಳಿಯಿಟ್ಟ. ಮೀನುಗಾರರ ಸಣ್ಣ ಸಣ್ಣ ದೋಣಿಗಳು ಚೆಲ್ಲಾಪಿಲ್ಲಿಯಾಗಿ ತಪ್ಪಿಸಿಕೊಂಡವು. ಆದರೆ ಹೆಂಗಸರಿದ್ದ ದೋಣಿ ಪಗಾನಿನೊ ಕೈಗೆ ಸಿಕ್ಕಿಹಾಕಿಕೊಂಡಿತು. ಆ ದೋಣಿಯಲ್ಲಿದ್ದ ಸುಂದರಿ ಬಾರ್ತೊಲೋಮಿಯಾಳನ್ನು ನೋಡಿ ಅವಳನ್ನು ತನ್ನ ದೋಣಿಗೆ ಏರಿಸಿಕೊಂಡು, ದೂರದಿಂದ ರಿಕಿಯಾರ್ಡೊ ನೋಡಿ ಬೊಬ್ಬೆಯಿಡುತ್ತಿರುವಂತೆ ಪಗಾನಿನೊ ಪರಾರಿಯಾದ. ಇತ್ತ ಪೀಸಾ ನಗರಕ್ಕೆ ರಿಕಿಯಾರ್ಡೊ ಹಿಂದಿರುಗಿ ಕಡಲ್ಗಳ್ಳರಿಗೆ ಶಾಪಹಾಕುತ್ತಾ, ತನ್ನ ಪತ್ನಿ ಬಾರ್ತೊಲೋಮಿಯಾಳನ್ನು ಹುಡುಕುವ ಪ್ರಯತ್ನ ಮಾಡುತ್ತಿದ್ದ.

ಅತ್ತ ಪಗಾನಿನೊ, ಬಾರ್ತೊಲೋಮಿಯಾಳನ್ನು ಹೊತ್ತೊಯ್ದ ನಂತರ ಅವಳ ಸೌಂದರ್ಯ ನೋಡಿ ಮೋಹಿತನಾಗಿ, ತನಗೆ ಹೇಗೂ

ಹೆಂಡತಿಯೊಬ್ಬಳು ಇಲ್ಲದಿರುವುದರಿಂದ ಆಕೆಯನ್ನೇ ಇಟ್ಟುಕೊಳ್ಳಲು ನಿರ್ಧರಿಸಿದ. ಆಕೆಯಂತೂ ಗೋಳೋ ಎಂದು ಅಳುತ್ತಿದ್ದಳು. ಆತ ಎಷ್ಟು ಸಂತೈಸಿದರೂ ಆಕೆ ಅಳು ನಿಲ್ಲಿಸಲಿಲ್ಲ. ಹಗಲೆಲ್ಲಾ ಆತನ ಸಾಂತ್ವನದ ಮಾತುಗಳು ಏನೂ ಪರಿಣಾಮ ಬೀರಲಿಲ್ಲ. ಆದರೆ ರಾತ್ರಿಯಾಗುತ್ತಿರುವಂತೆ "ರಜಾದಿನ'ಗಳ ಕ್ಯಾಲೆಂಡರ್ ಆಕೆಯ ಉಡಿಯಿಂದ ಜಾರಿಹೋಯಿತು ಹಾಗೂ



ಹಬ್ಬ ಹರಿದಿನಗಳ, ಸಾಧುಸಂತರ ಪೂಜೆ ಪುನಸ್ಕಾರಗಳ ಆಚರಣೆಗಳು ಆಕೆಯ ತಲೆಯಿಂದ ಹಾರಿಹೋದವು. ಹಗಲೆಲ್ಲಾ ತನ್ನ ಮಾತುಗಳಿಂದ ಸಾಂತ್ವನಗೊಳಿಸಲಾಗದ ಆಕೆಯುನ್ನು ಪಗಾನಿನೊ ರಾತ್ರಿ ತನ್ನ ಕಾಮಕ್ರಿಯೆಯಿಂದ ಸಾಂತ್ವನಗೊಳಿಸಲಾರಂಭಿಸಿದ. ಅವರಿದ್ದ ಹಡಗು ಮೊನಾಕೊ ತಲುಪುವಷ್ಟರಲ್ಲಿ ಬಾರ್ತೊಲೊಮಿಯಾ ನ್ಯಾಯಾಧೀಶನನ್ನು ಹಾಗೂ ಆತನ ಕಾನೂನುಗಳನ್ನು ಸಂಪೂರ್ಣ ಮರೆತುಹೋಗಿದ್ದಳು. ಅಲ್ಲದೆ ಅತ್ಯಂತ ಸಂತೋಷವಾಗಿಯೂ ಇದ್ದಳು. ಪಗಾನಿನೊ ಸಹ ಆಕೆಯನ್ನು ತನ್ನ ಪತ್ನಿಯ ಹಾಗೆಯೇ ನೋಡಿಕೊಳ್ಳುತ್ತೇನೆಂದು ಪ್ರಮಾಣ ಮಾಡಿದ.

ಸ್ವಲ್ಪ ದಿನಗಳ ನಂತರ ರಿಕಿಯಾರ್ಡೊ ತನ್ನ ಪತ್ನಿ ಪಗಾನಿನೊ ಜೊತೆ ಮೊನಾಕೋದಲ್ಲಿ ಇರುವ ವಿಷಯ ತಿಳಿದು ಅಲ್ಲಿಗೆ ಕೂಡಲೇ ಹೊರಟ. ಕಿಟಕಿಯಿಂದಲೇ ತನ್ನ ಪತಿ ರಿಕಿಯಾರ್ಡೊ ಬಂದಿದ್ದನ್ನು ನೋಡಿ ಬಾರ್ತೊಲೋಮಿಯಾ ಪಗಾನಿನೋಗೆ ತನ್ನ ಇಚ್ಛೆ ಏನೆಂಬುದನ್ನು ತಿಳಿಸಿದಳು. ರಿಕಿಯಾರ್ಡೊ ಪಗಾನಿನೋನನ್ನು ಭೇಟಿಯಾಗಿ ತನ್ನ ಪತ್ನಿಯನ್ನು ವಾಪಸ್ಸು

ಕಳುಹಿಸುವಂತೆ ಕೇಳಿಕೊಂಡ; ಅದಕ್ಕಾಗಿ ಎಷ್ಟು ಹಣ ಬೇಕಾದರೂ ಕೊಡಲು ಸಿದ್ಧನೆಂದು ತಿಳಿಸಿದ. ಅದಕ್ಕೆ ಪಗಾನಿನೋ, "ನಿಜ. ನನ್ನ ಮನೆಯಲ್ಲಿ ಯುವತಿಯೊಬ್ಬಳಿದ್ದಾಳೆ. ಆದರೆ ಆಕೆ ನಿನ್ನ ಪತ್ನಿಯೋ ಅಥವಾ ಇನ್ನಾರದಾದರೂ ಪತ್ನಿಯೋ ನನಗೆ ತಿಳಿದಿಲ್ಲ. ಆಕೆ ನನ್ನೊಂದಿಗೆ ಕೆಲದಿನಗಳಿಂದ ಇದ್ದಾಳೆ ಎನ್ನುವುದನ್ನು ಬಿಟ್ಟರೆ ಬೇರೆ ನನಗೇನೂ ತಿಳಿದಿಲ್ಲ. ನನಗೆ ನೀನೂ ಪರಿಚಯವಿಲ್ಲ, ಆಕೆಯೂ ಪರಿಚಯವಿಲ್ಲ. ನಾನು ಆಕೆಯನ್ನು ಕರೆಯುತ್ತೇನೆ. ಆಕೆ ನಿನ್ನ ಪತ್ನಿಯೇ ಆಗಿದ್ದಲ್ಲಿ ಹಾಗೂ ಆಕೆ ಬರುವುದಾದಲ್ಲಿ ನೀನು ಕರೆದೊಯ್ಯಬಹುದು ಹಾಗೂ ನಿನಗೆ ಆಕೆಯ ಮೇಲಿರುವ ಪ್ರೀತಿಯ ಗೌರವದಿಂದಾಗಿ ನೀನು ಎಷ್ಟು ಹಣ ಕೊಟ್ಟರೂ ನಾನು ಸ್ವೀಕರಿಸುತ್ತೇನೆ' ಎಂದು ಹೇಳಿ ಬಾರ್ತೊಲೋಮಿಯಾಳನ್ನು ಕರೆದ. ಅಲ್ಲಿಗೆ ಬಂದ ಬಾರ್ತೊಲೋಮಿಯಾ ರಿಕಿಯಾರ್ಡೋನನ್ನು ನೋಡಿ, ಆತ ಯಾರೋ ತನಗೆ ಗೊತ್ತೇ ಇಲ್ಲವೆಂದಳು. ಬಹುಶಃ ತಾನು ಆಕೆಯನ್ನು ಕಳೆದುಕೊಂಡು ಕೊರಗಿ ಕೊರಗಿ ಕೃಶನಾಗಿರುವುದರಿಂದ ನಾನು ಅವಳಿಗೆ ಗುರುತು ಸಿಗುತ್ತಿಲ್ಲವೆಂದುಕೊಂಡ ರಿಕಿಯಾರ್ಡೊ, ಅವರು ಮೀನು ಹಿಡಿಯಲು ಹೋದದ್ದು, ಅಲ್ಲಿಗೆ ಪಗಾನಿನೊ ಬಂದು ಆಕೆಯನ್ನು ಅಪಹರಿಸಿದ್ದು ಎಲ್ಲಾ ತಿಳಿಸಿ ಹೇಳಿದ. ಆದರೂ ಆಕೆ ರಿಕಿಯಾರ್ಡೊ ಯಾರೋ ಗೊತ್ತೇ ಇಲ್ಲವೆಂದಳು. ಬಹುಶಃ ಆಕೆ ಧೂರ್ತ ಪಗಾನಿನೊ ಮುಂದೆ ನಿಜ ಒಪ್ಪಿಕೊಳ್ಳಲು ಹೆದರಿಕೊಂಡಿರಬಹುದೆಂದು ತಿಳಿದು, ಅವರಿಬ್ಬರೇ ಏಕಾಂತದಲ್ಲಿ ಮಾತನಾಡಲು ಅನುವು ಮಾಡಿಕೊಡಬೇಕೆಂದು ಪಗಾನಿನೋನನ್ನು ಕೇಳಿಕೊಂಡ. ಒಪ್ಪಿಕೊಂಡ ಪಗಾನಿನೊ ಪಕ್ಕದ ಕೋಣೆಯಲ್ಲಿ ಮಾತನಾಡುವಂತೆ ತಿಳಿಸಿದ.

ಅಲ್ಲಿ ಆಕೆ ನಗುತ್ತಾ, "ನೀನು ನನ್ನ ಗಂಡನೆಂಬುದು ನನಗೆ ನೆನಪಿದೆ. ಆದರೆ ನಾನು ನಿನ್ನ ಜೊತೆ ಬಾಳುವೆ ನಡೆಸುವಾಗ ನೀನು ನನ್ನನ್ನು ಅಪರಿಚಿತಳೆಂಬಂತೆ ನಡೆಸಿಕೊಂಡೆ. ನಾನೂ ಸಹ ಉಪ್ಪುಖಾರ ತಿನ್ನುವ, ಬಿಸಿನೆತ್ತರ ಯುವತಿಯೆಂಬುದನ್ನು ನೀನು ಮರೆತಿದ್ದೆ. ಅಲ್ಲದೆ ನನಗೆ ಊಟ ಬಟ್ಟೆ ಕೊಟ್ಟರೆ ಸಾಕೆಂದು ನೀನು ತಿಳಿದುಕೊಂಡಿದ್ದೆ. ಆ ಇನ್ನುಳಿದ ವಿಷಯದಲ್ಲಿ ನಿನ್ನ ನಿರ್ವಹಣೆ ಹೇಗಿತ್ತೆಂದು ನಿನಗೇ ತಿಳಿದಿದೆ. ನಿನಗೆ ಪತ್ನಿಗಿಂತ ಕಾನೂನಿನ ಅಧ್ಯಯನವೇ ಮುಖ್ಯವಾಗಿದ್ದಲ್ಲಿ ನೀನು ಮದುವೆಯೇ ಆಗಬಾರದಿತ್ತು. ನನ್ನ ಪುಟ್ಟ ಹೊಲದಲ್ಲಿ ಉಳಲು ಬಿಡದೆ ನಿನ್ನಲ್ಲಿನ ಕೆಲಸಗಾರನಿಗೆ ನೀನು ರಜೆ ಕೊಟ್ಟಂತೆ ನಿನ್ನ ಹೊಲಗಳಲ್ಲಿ ದುಡಿಯುವ ಕೆಲಸಗಾರರಿಗೆ ನೀನು

ರಜೆ ಕೊಟ್ಟಿದ್ದಲ್ಲಿ ನೀನು ಒಂದು ಗೋಧಿ ಕಾಳನ್ನೂ ಸಹ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ದೇವರು ನನ್ನ ಯೌವನದ ಮೇಲೆ ಕರುಣೆ ತೋರಿ ಪಗಾನಿನೋನನ್ನು ನನಗೆ ವರದಾನವನ್ನಾಗಿ ಕಳುಹಿಸಿದ್ದಾನೆ. ಇಲ್ಲಿ ನಮಗೆ ರಜಾದಿನಗಳೆಂಬುದೇ ಇಲ್ಲ; ಹಗಲೂ ರಾತ್ರಿಯೆನ್ನದೆ ನಾವು ಈ ಕೋಣೆಯಲ್ಲಿ ದುಡಿಯುತ್ತಿದ್ದೇವೆ. ವಯಸ್ಸಿರುವಾಗಲೇ ದುಡಿದು ಮುದುಕಿಯಾದ ನಂತರ ಉಪವಾಸ, ವ್ರತ, ಹಬ್ಬ ಹರಿದಿನಗಳನ್ನು ಆಚರಿಸೋಣವೆಂದು ಕೊಂಡಿದ್ದೇನೆ. ಆದ್ದರಿಂದ ಇಲ್ಲಿಂದ ಕೂಡಲೇ ಹೊರಟುಹೋಗು. ಸದ್ಯಕ್ಕೆ ಹಬ್ಬ ಹರಿದಿನಗಳನ್ನು ನೀನೊಬ್ಬನೇ ಆಚರಿಸಿಕೋಹೋಗು' ಎಂದಳು.

ರಿಕಿಯಾರ್ಡೊ ಎಷ್ಟು ಕೇಳಿಕೊಂಡರೂ ಆಕೆ ಬರಲು ಒಪ್ಪಲಿಲ್ಲ. ಕೊನೆಗೆ ಬರಿಗೈಲಿ ಹಿಂದಿರುಗಿದ ರಿಕಿಯಾರ್ಡೊ ಹುಚ್ಚನಂತಾದ. ಯಾರು ಏನು ಮಾತನಾಡಿಸಿದರೂ "ಕಳ್ಳನಿಗೆ ರಜಾ ದಿನಗಳಿಲ್ಲ' ಎಂದೇ ಹೇಳುತ್ತಿದ್ದ. ಕೊನೆಗೊಂದು ದಿನ ಸತ್ತೇಹೋದ.

ಇತ್ತ ಪಗಾನಿನೊ ತನ್ನನ್ನು ಬಾರ್ತೊಲೋಮಿಯಾ ಎಷ್ಟು ಪ್ರೀತಿಸುತ್ತಿದ್ದಾಳೆಂಬುದನ್ನು ತಿಳಿದು ಆಕೆಯನ್ನು ವಿಧಿವತ್ತಾಗಿ ಮದುವೆಯಾದ ಹಾಗೂ ಅವರ ಕಾಲುಗಳು ಗಟ್ಟಿಯಾಗಿರುವವರೆಗೂ ಯಾವುದೇ ಹಬ್ಬ ಹರಿದಿನಗಳಿಲ್ಲದೆ, ಉಪವಾಸ ವ್ರತಗಳಿಲ್ಲದೆ, ರಜಾದಿನಗಳಿಲ್ಲದೆ ಜೊತೆಯಾಗಿ ದುಡಿದು ಸಂತೋಷವಾಗಿದ್ದರು.

ಸೈತಾನ ಮತ್ತು ನರಕ

ಕ್ಯಾಪ್ಸಾ ನಗರದ ಒಬ್ಬ ಶ್ರೀಮಂತನಿಗೆ ಅಲಿಬೆಕ್ ಎಂಬ ಸುಂದರ, ಮುಗ್ಧ ಮಗಳಿದ್ದಳು. ಒಂದು ದಿನ ಆಕೆಗೆ ದೇವರ ಸೇವೆ ಮಾಡಬೇಕೆಂದೆನ್ನಿಸಿ, ದೇವರ ಸೇವೆಗೆ ಅತ್ಯುತ್ತಮ ದಾರಿ ಯಾವುದೆಂದು ಅವರಿವರನ್ನು ಕೇಳತೊಡಗಿದಳು. ದೇವರ ಸೇವೆ ಮಾಡಬೇಕಾದಲ್ಲಿ ಈ ಇಹಲೋಕದ ನಶ್ವರ ವಸ್ತುಗಳ ವ್ಯಾಮೋಹ ತ್ಯಜಿಸಿ ಸಾಧು ಸಂನ್ಯಾಸಿಗಳ ತರಹ ಥೆಬಾಯಿಡ್ ಮರುಭೂಮಿಗೆ ಹೋಗಿ ಒಂಟಿಯಾಗಿ ವಾಸಿಸಬೇಕೆಂದು ಕೆಲವರು ಸೂಚಿಸಿದರು.

ಆ ಯುವತಿಗೆ ದೇವರ ಬಗ್ಗೆ ಅಂತಹ ಭಕ್ತಿಯಿಲ್ಲದಿದ್ದರೂ ಸಹ ಒಂದು ರೀತಿಯ ಬಾಲಿಶ ಕುತೂಹಲದಿಂದ ನೋಡೇ ಬಿಡೋಣವೆಂದು ಯಾರಿಗೂ ಹೇಳದೆ ಥೆಬಾಯಿಡ್ ಮರುಭೂಮಿ ಅರಸುತ್ತಾ ಹೊರಟಳು. ಒಂಟಿಯಾಗಿ ಇದೇ ರೀತಿ ಅರಸುತ್ತಾ ಬಳಲಿದ ಆಕೆಗೆ ಒಂದು ದಿನ ಒಂದು ಗುಡಿಸಲು ಕಾಣಿಸಿತು ಹಾಗೂ ಅದರ ಮುಂದೆ ಒಬ್ಬ ಸಂನ್ಯಾಸಿ ನಿಂತಿದ್ದ. ಆ ಮರಳುಗಾಡಿನಲ್ಲಿ ಒಬ್ಬಂಟಿ ಯುವತಿ ಬಂದುದನ್ನು ಕಂಡು ಆತ ಅಚ್ಚರಿಯಿಂದ ಆಕೆಗೆ ಏನು ಬೇಕೆಂದು ಕೇಳಿದ. ದೈವಾನುಗ್ರಹದಿಂದ ಆಕೆ ದೇವರ ಸೇವೆಗೆ ಹೊರಟಿರುವುದಾಗಿ ತಿಳಿಸಿದ ಆಕೆ ದೇವರ ಸೇವೆಗೆ ಉತ್ತಮ ಮಾರ್ಗ ತೋರಿಸುವಂತೆ ಆಕೆ ಸಂನ್ಯಾಸಿಯನ್ನು ಕೇಳಿಕೊಂಡಳು. ಆಕೆ ಯುವತಿಯೂ, ಸುಂದರಿಯೂ ಆಗಿರುವುದರಿಂದ ಆಕೆಯನ್ನು ತನ್ನ ಜೊತೆಗಿಟ್ಟುಕೊಂಡಲ್ಲಿ ಎಲ್ಲಿ ಸೈತಾನ ತಲೆಹೊಕ್ಕು ಹಲವಾರು ವರ್ಷಗಳಿಂದ ಕಾಪಾಡಿಕೊಂಡುಬಂದಿರುವ ತನ್ನ ಬ್ರಹ್ಮಚರ್ಯ ಹಾಳುಗೆಡವುತ್ತಾನೋ ಎಂದು ಹೆದರಿ ಆಕೆಗೆ ಆಹಾರ ನೀರು ಕೊಟ್ಟು, ತನಗಿಂತಲೂ ಹೆಚ್ಚು ಸಾಧನೆ ಮಾಡಿರುವ ಮತ್ತೊಬ್ಬ ಸಂನ್ಯಾಸಿ ಇನ್ನೂ ಮುಂದೆ ಇದ್ದಾನೆಂದೂ ಆತ ಸರಿಯಾದ ದಾರಿ ತೋರಿಸಬಲ್ಲನೆಂದು ಅಲಿಬೆಕ್‌ಳಿಗೆ ತಿಳಿಸಿ ಅವಳನ್ನು ಸಾಗಹಾಕಿದ.



ಮುಂದೆ ಮತ್ತೊಬ್ಬ ಸಂನ್ಯಾಸಿ ಸಿಕ್ಕ. ಅವನಲ್ಲಿಯೂ ಸಹ ದೇವರ ಸೇವೆಗೆ ಅತ್ಯುತ್ತಮ ದಾರಿ ತೋರಿಸುವಂತೆ ಕೇಳಿಕೊಂಡಳು. ಆತನೂ ಸಹ ಅವಳ ಸೌಂದರ್ಯ, ದೇಹಸಿರಿಗೆ ಹೆದರಿ ಮುಂದೆ ಸಾಗಹಾಕಿದ.

ಅಲ್ಲಿಂದ ಮುಂದೆ ರಸ್ಟಿಕೊ ಎಂಬ ಯುವ ಸಂನ್ಯಾಸಿ ಸಿಕ್ಕ. ಅವನಲ್ಲಿಯೂ ಸಹ ಅದೇ ಬೇಡಿಕೆ ಇಟ್ಟಳು. ಆತ ತನ್ನ ಇಷ್ಟು ವರ್ಷಗಳ ಸಾಧನೆ ಹಾಗೂ ತನ್ನ ಬ್ರಹ್ಮಚರ್ಯದ ಸ್ವನಿಯಂತ್ರಣವನ್ನು ಪರೀಕ್ಷಿಸಲು ಇದು ಒಳ್ಳೆಯ ಅವಕಾಶ ಎಂದು ತೀರ್ಮಾನಿಸಿ ಆಕೆಯನ್ನು ಅಲ್ಲೇ ಇರಿಸಿಕೊಂಡ. ತನ್ನದು ಸಣ್ಣ ಗುಡಿಸಲಾಗಿದ್ದು, ಮಲಗಲು ಒಂದೇ ಕೋಣೆ ಇದ್ದುದರಿಂದ ಒಂದು ಮೂಲೆಯಲ್ಲಿ ಆಕೆಗೆ ಮಲಗಲು ಎಲೆಗಳ ಹಾಸಿಗೆ ಹಾಸಿಕೊಟ್ಟು ತಾನು ಮತ್ತೊಂದು ಮೂಲೆಯಲ್ಲಿ ಮಲಗಿದ.

ಅಲಿಬೆಕ್‌ಳಂತಹ ಮತ್ತೇರಿಸುವ ದೇಹಸಿರಿಯ ಯುವತಿ ತನ್ನ ಕೋಣೆಯಲ್ಲಿದ್ದುದರಿಂದ ರಸ್ಟಿಕೋನಿಗೆ ರಾತ್ರಿಯೆಲ್ಲಾ ನಿದ್ದೆಯೇ ಬರಲಿಲ್ಲ. ಅವನಲ್ಲಿ ಜಾಗೃತವಾಗುತ್ತಿದ್ದ ಕಾಮ ಅವನ ಧಾರ್ಮಿಕ ಶಕ್ತಿಯೊಡನೆ ಭೀಕರ ಹೋರಾಟ ನಡೆಸುತ್ತಿತ್ತು. ಆತನಿಗೆ ತನ್ನಲ್ಲಿನ ಧಾರ್ಮಿಕ ಶಕ್ತಿಯ ಮೇಲೆ ಅತಿಯಾದ ನಂಬಿಕೆ ಇರಿಸಿದ್ದೇ ತಪ್ಪಾಯಿತೇನೋ ಎನ್ನಿಸತೊಡಗಿತು. ಕೊನೆಗೆ ಹೋರಾಟದಲ್ಲಿ ವಿಜಯಿಯಾದ ಕಾಮ ಆತನಲ್ಲಿನ ದೈವಭಕ್ತಿಯ ಆಲೋಚನೆಗಳನ್ನು ದೂರಕ್ಕೆಸೆಯಿತು. ರಸ್ಟಿಕೊ ಆಕೆಯ ದೇಹಸೌಂದರ್ಯವನ್ನು ಕಣ್ತುಂಬಿಸಿಕೊಳ್ಳತೊಡಗಿದ. ಅವನ ಮನಸ್ಸಿನಲ್ಲಿ ಎಂದೂ ಬರದ ಆಲೋಚನೆಗಳು ಬರತೊಡಗಿದವು. ತಾನು ಸಂನ್ಯಾಸಿಯಾಗಿರುವುದರಿಂದ ಒಬ್ಬ ಕೆಟ್ಟ ಮನುಷ್ಯನಂತೆ ಆಕೆಯನ್ನು ಉಪಯೋಗಿಸಿಕೊಳ್ಳುತ್ತಿದ್ದೇನೆಂದು ಆಕೆಗೆ ಅನ್ನಿಸದಂತೆ ಆಕೆಯನ್ನು ಹೇಗೆ ಅನುಭವಿಸಬೇಕೆಂಬ ಆಲೋಚನೆಯಲ್ಲಿ ಮುಳುಗಿದ. ಹಾಗೆಯೇ ಆಕೆಯನ್ನು ಅದೂ ಇದೂ ಮಾತನಾಡಿಸತೊಡಗಿದ. ಆಕೆಯ ಮಾತುಗಳಿಂದ ಆಕೆ ಮುಗ್ಧಳೆಂದೂ ಹಾಗೂ ಆಕೆ ಯಾವುದೇ



ಗಂಡಸಿನೊಂದಿಗೆ ಮಲಗಿಲ್ಲ–ವೆಂಬುದು ತಿಳಿಯಿತು. ದೇವರ ಸೇವೆಯ ಹೆಸರಿನಲ್ಲಿ ಆಕೆಯನ್ನು ಹೇಗೆ ಬಲೆಗೆ ಹಾಕಿಕೊಳ್ಳಬೇಕೆಂಬುದು ಕೊನೆಗೂ ಆತನಿಗೆ ಹೊಳೆಯಿತು.

ತನ್ನ ಸಂನ್ಯಾಸದ ಕಪಟ ಮಾತುಗಳಿಂದ ಆಕೆಗೆ ಸೈತಾನನ ಬಗ್ಗೆ ಹೇಳುತ್ತಾ, ಸೈತಾನ ದೇವರ ಪರಮಶತ್ರುವೆಂದು ತಿಳಿಸಿದ ಹಾಗೂ ದೇವರಿಗೆ ಸಂತೋಷ ಕೊಡುವ ಸೇವೆಯೆಂದರೆ ಸೈತಾನನನ್ನು ನರಕಕ್ಕೆ ದೂಡಿ ದಂಡಿಸುವುದು ಎಂದೂ ಸಹ ತಿಳಿಸಿದ. ಆ ರೀತಿ ದೇವರ ಸೇವೆ ಮಾಡುವುದು ಹೇಗೆಂದು ಮುಗ್ಧ ಅಲಿಬೆಕ್ ಕೇಳಿದಳು. ಅದಕ್ಕಾಗಿಯೇ ಕಾಯುತ್ತಿದ್ದ ರಸ್ಟಿಕೊ ಈಗಲೇ ತೋರಿಸುತ್ತೇನೆಂದು ತಿಳಿಸಿ ಎದ್ದು ನಿಂತು ತನ್ನ ಬಟ್ಟೆಗಳನ್ನು ಕಳಚಿ ದಿಗಂಬರನಾಗಿ ನಿಂತ. ಅಲಿಬೆಕ್‌ಳಿಗೂ ಸಹ ಅದೇ ರೀತಿ ಮಾಡುವಂತೆ ತಿಳಿಸಿದ. ಅವಳು ಬಹಳ ಭಕ್ತಿಯಿಂದ ಅನುಕರಿಸಿದಳು. ಮೊಣಕಾಲೂರಿ ದೇವರ ಪ್ರಾರ್ಥನೆ ಮಾಡುವಂತೆ ನಟಿಸಿ ಅಲಿಬೆಕ್‌ಳ ನಗ್ನ ದೇಹಸೌಂದರ್ಯ ಸವಿಯತೊಡಗಿದ. ಅವನಲ್ಲಿನ ಕಾಮದೇವ ಅವನ ಮಾಂಸ ನರನಾಡಿಗಳಲ್ಲಿ ಹೊಕ್ಕು ಎಚ್ಚೆತ್ತುಕೊಳ್ಳತೊಡಗಿದ. ಅವನ ದೇಹದಲ್ಲಾದ ಮಾರ್ಪಾಟಿನಿಂದ ಅಚ್ಚರಿಗೊಂಡ ಆಕೆ, 'ರಸ್ಟಿಕೊ, ಅದೇನು ನಿನ್ನಲ್ಲಿರುವುದು? ಅಂಥದು ನನ್ನಲ್ಲಿಲ್ಲವಲ್ಲಾ?' ಎಂದು ಕೇಳಿದಳು. 'ಹೋ, ಅದೇ ಮಗಳೇ, ನಾನು ನಿನಗೆ ಇಷ್ಟುಹೊತ್ತು ಸೈತಾನನ ಬಗ್ಗೆ ಹೇಳಲಿಲ್ಲವೆ, ಅವನೇ ಈ ಸೈತಾನ. ನಿನಗೆ ಕಾಣುತ್ತಿಲ್ಲವೆ, ನೋಡು, ನನಗೆ ಎಷ್ಟು ತೊಂದರೆ ಕೊಡುತ್ತಿದ್ದಾನೆ!' ಎಂದ ರಸ್ಟಿಕೊ. ಅದಕ್ಕೆ ಆಕೆ, 'ಸದ್ಯ! ಒಳ್ಳೆಯದಾಯಿತು. ನನ್ನಲ್ಲಿ ಅಂಥ ಸೈತಾನನಿಲ್ಲ!' ಎಂದಳು. ಅದಕ್ಕೆ ರಸ್ಟಿಕೊ, 'ಆದರೇನು, ನಿನ್ನಲ್ಲಿ ನರಕವಿದೆಯೆಲ್ಲಾ!' ಎಂದು, 'ದೇವರೇ ನಿನ್ನನ್ನು ನನ್ನ ಆತ್ಮದ ಮುಕ್ತಿಗಾಗಿ ಇಲ್ಲಿಗೆ ಕಳುಹಿಸಿರಬೇಕು. ಈ ಸೈತಾನ ನನಗೆ ವಿಪರೀತ ತೊಂದರೆ ಕೊಡುತ್ತಿದ್ದಾನೆ. ನೀನು ದಯೆತೋರಿ ಇವನನ್ನು ನರಕದಲ್ಲಿ ಹಾಕಲು ಅವಕಾಶ ಮಾಡಿಕೊಟ್ಟರೆ ನನಗೆ ಇವನ ಕಾಟ ತಪ್ಪಿ

ಸಂತೋಷವಾಗುತ್ತದೆ ಹಾಗೂ ನಮಗಿಬ್ಬರಿಗೆ ದೇವರ ಸೇವೆ ಮಾಡಿದ ಪುಣ್ಯವೂ ಲಭಿಸುತ್ತದೆ; ನೀನು ದೇವರ ಸೇವೆಗೆಂದು ಇಷ್ಟು ದೂರ ಬಂದದ್ದೂ ಸಹ ಸಾರ್ಥಕವಾಗುತ್ತದೆ' ಎಂದೂ ಸಹ ಹೇಳಿದ. ಆಕೆ ವಿನಮ್ರ ಭಕ್ತಿಯಿಂದ ಸೈತಾನನ್ನು ನರಕಕ್ಕೆ ಹಾಕಿಸಿಕೊಳ್ಳಲು ಒಪ್ಪಿ ಸಿದ್ದವಾದಳು.

ಸೈತಾನನ್ನು ನರಕದಲ್ಲಿ ಸೆರೆಹಾಕಲು ಹೇಗೆ ಮಲಗಬೇಕೆಂದು ಅಲಿಬೆಕ್‌ಳಿಗೆ ತೋರಿಸಿ ಸಂನ್ಯಾಸಿ ರಸ್ಟಿಕೊ ಮೇಲೇರಿದ. ಆಕೆಯೆಂದೂ ಸೈತಾನನನ್ನು ನರಕಕ್ಕೆ ಹಾಕಿಸಿಕೊಂಡವಳಲ್ಲ. ಆದ್ದರಿಂದ ನೋವಾಯಿತು. 'ಹೋ ದೇವರೇ! ಈ ಸೈತಾನ ನಿಜವಾಗಿಯೂ ಕ್ರೂರಿ ಹಾಗೂ ದೇವರ ಶತ್ರುವೇ ಇರಬೇಕು. ನರಕಕ್ಕೆ ಹಾಕಿದ್ದರೂ ಸಹ ನೋವುಂಟು ಮಾಡುತ್ತಿದ್ದಾನೆ' ಎಂದಳು. ಸೈತಾನನ್ನು ನರಕಕ್ಕೆ ಹಾಕಿ ಚೆನ್ನಾಗಿ ದಂಡಿಸಿ ಅವನ ಸೊಕ್ಕಡಗಿಸಿದ ನಂತರ ರಸ್ಟಿಕೊ ಸಂತೃಪ್ತಿಯಿಂದ ನಿದ್ದೆ ಮಾಡಿದ.

ಅದಾದನಂತರ ರಸ್ಟಿಕೊ ಆಗಾಗ ಸೈತಾನನನ್ನು ನರಕಕ್ಕೆ ಹಾಕಲು ಹೋಗುತ್ತಿದ್ದ. ಅಲಿಬೆಕ್‌ಳೂ ಸಹ ಸದಾ ದೇವರ ಸೇವೆಗೆ ಸಿದ್ಧವಿರುತ್ತಿದ್ದಳು. 'ದೇವರ ಸೇವೆ ಇಷ್ಟು ಸುಖಸಂತೋಷ ಕೊಡುವ ಆಚಾರವೆಂದು ನನಗೆ ತಿಳಿದಿರಲಿಲ್ಲ. ದೇವರ ಸೇವೆ ಮಾಡದಿರುವಂತಹ ಜನರೇ ದಡ್ಡರು' ಎಂದೂ ಸಹ ಹೇಳುತ್ತಿದ್ದಳು. ಕೊನೆಕೊನೆಗೆ ಆಕೆಯೇ ರಸ್ಟಿಕೋನ ಬಳಿ ಬಂದು, 'ಸುಮ್ಮನೆ ಕೂತು ಕಾಲ ಕಳೆಯುವುದಕ್ಕಿಂತ ಸೈತಾನನನ್ನಾದರೂ ನರಕಕ್ಕೆ ಹಾಕೋಣ ಬನ್ನಿ. ದೇವರ ಸೇವೆಗೆಂದೇ ನಾನಿಲ್ಲಿ ಬಂದಿರುವುದು' ಎಂದು ಒತ್ತಾಯಿಸುತ್ತಿದ್ದಳು. ಮೊದಲೇ ಕಂದಮೂಲಗಳನ್ನು ಸೇವಿಸಿ ಬದುಕಿದ್ದ ಸಂನ್ಯಾಸಿ ರಸ್ಟಿಕೊ, ಸೈತಾನನ್ನು ನರಕಕ್ಕೆ ಹಾಕಿ ಹಾಕಿ ಬಳಲಿ ಬೆಂಡಾಗಿದ್ದ. ಆಕೆ ಕರೆದಾಗಲೆಲ್ಲಾ ಬೆವರಿ ನಡುಗತೊಡಗಿದ. 'ಹಾಗೆ ಯಾವಾಗೆಂದರೆ ಆವಾಗ ಸೈತಾನನನ್ನು ನರಕಕ್ಕೆ ಹಾಕಬಾರದು. ಅವನು ಸೊಕ್ಕಿನಿಂದ ತಲೆಎತ್ತಿದಾಗ ಮಾತ್ರ ನರಕಕ್ಕೆ ಹಾಕಿ ದಂಡಿಸಬೇಕು. ಈಗ ನೋಡು ಹೇಗೆ ತೆಪ್ಪಗಿದ್ದಾನೆ. ಸದ್ಯ ಅವನಷ್ಟಕ್ಕೆ ಅವನನ್ನು ಬಿಟ್ಟರೆ ಸಾಕೆಂದು ದೇವರನ್ನು ಪ್ರಾರ್ಥಿಸಿಕೊಳ್ಳುತ್ತಿದ್ದಾನೆ' ಎಂದ ರಸ್ಟಿಕೊ ಒಂದು ದಿನ ಅಲಿಬೆಕ್ ದೇವರ ಸೇವೆಗೆ ಕರೆದಾಗ. ಅದಕ್ಕೆ ಅಲಿಬೆಕ್ 'ನಿನ್ನ ಸೈತಾನನ ಸೊಕ್ಕಡಗಿರಬಹುದು, ಆದರೆ ನನ್ನ ನರಕದ ಸೊಕ್ಕಡಗಿಲ್ಲವಲ್ಲ. ನೀನು ಅದರ ಸೊಕ್ಕಡಗಿಸು ಬಾ' ಎಂದು ಬಲವಂತ ಮಾಡಿದಳು. ಆ ಬಡಪಾಯಿ ಸಂನ್ಯಾಸಿ, 'ನಿನ್ನ ನರಕದ ಸೊಕ್ಕಡಗಿಸಲು ಎಷ್ಟು ಜನ ಸೈತಾನರು ಬೇಕೋ' ಎಂದು ಗೊಣಗಿದ. ದೇವರ ಸೇವೆ ಸರಿಯಾಗಿ ಆಗುತ್ತಿಲ್ಲವೆಂದು ಆಕೆ ಗೊಣಗಿದಳು.

ಇತ್ತ ಕ್ಯಾಪ್ಸಾ ನಗರದಲ್ಲಿ ಒಂದು ದಿನ ಅಲಿಬೆಕ್‌ಳ ಮನೆಗೆ ಬೆಂಕಿಬಿದ್ದು ಅವಳ ತಂದೆ, ಅಣ್ಣತಂಗಿಯರು ಹಾಗೂ ಆಳುಕಾಳುಗಳೆಲ್ಲ ಸತ್ತುಹೋದರು. ಉಳಿದ ಆಸ್ತಿಗೆಲ್ಲಾ ಅಲಿಬೆಕ್‌ಳೇ ವಾರಸುದಾರಳಾದಳು. ನೀರ್‌ಬಾಲೆ ಎಂಬ ಯುವಕ, ಅಲಿಬೆಕ್ ಥೆಬಾಯಿಡ್ ಮರುಭೂಮಿಯಲ್ಲಿ ಇರುವುದು ತಿಳಿದು, ಅವಳ ಆಸ್ತಿಯನ್ನೆಲ್ಲಾ ಯಾರೂ ವಾರಸುದಾರರಿಲ್ಲವೆಂದು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವ ಮೊದಲೇ ಅವಳನ್ನು ಕರೆತರಬೇಕೆಂದು ಅವರಿವರನ್ನು ವಿಚಾರಿಸಿ, ಅವಳಿರುವ ಸ್ಥಳ ಹುಡುಕಿದ. ಅಲ್ಲಿಗೆ ಹೋಗಿ ಅಲಿಬೆಕ್‌ಳಿಗೆ ಎಲ್ಲಾ ವಿಷಯ ತಿಳಿಸಿ ಅವಳನ್ನು ಕರೆತಂದ. ಆವಳಿಗೆ ಹೋಗಲು ಇಷ್ಟವಿಲ್ಲದಿದ್ದರೂ ರಸ್ಟಿಕೊ, ಅವಳು ಹೋದರೆ ಸಾಕೆಂದು ಅವಳನ್ನು ಸಾಗಹಾಕಿದ. ನೀರ್‌ಬಾಲೆ ಅವಳನ್ನು ಕರೆತಂದು ಆಸ್ತಿಗೆಲ್ಲಾ ಹಕ್ಕುದಾರಳನ್ನಾಗಿ ಮಾಡಿ ಅವಳನ್ನೇ ಮದುವೆಯಾದ. ಮೊದಲ ರಾತ್ರಿಗೆ ಮುನ್ನ ಅಲಿಬೆಕ್‌ಳ ಹಳೆಯ ಗೆಳತಿಯರು ಆಕೆಯನ್ನು, 'ಅಲ್ಲಿ ಮರುಭೂಮಿಯಲ್ಲಿ ದೇವರ ಸೇವೆ ಹೇಗೆ ಮಾಡುತ್ತಿದ್ದೆ?' ಎಂದು ವಿಚಾರಿಸಿದರು. ಅದಕ್ಕೆ ಆ ಮುಗುದೆ ಸೈತಾನನನ್ನು ನರಕಕ್ಕೆ ಹಾಕುವುದರ ಮೂಲಕ ಎಂದು ಮಾತು ಹಾಗೂ ಸಂಜ್ಞೆಗಳ ಮೂಲಕ ತಿಳಿಸಿದಳು ಹಾಗೂ ದೇವರ ಸೇವೆ ಬಿಟ್ಟು ಬಂದುದಕ್ಕೆ ಬಹಳ ಬೇಸರವಾಗಿದೆಯೆಂದೂ ಸಹ ತಿಳಿಸಿದಳು. ಅದನ್ನು ಕೇಳಿ ಹೊಟ್ಟೆ ಹುಣ್ಣಾಗುವಂತೆ ನಕ್ಕ ಅಲಿಬೆಕ್‌ಳ ಗೆಳತಿಯರು, 'ಬೇಸರಪಡಬೇಡ, ನಿನ್ನ ಗಂಡ ನೀರ್‌ಬಾಲೆಯ ಬಳಿಯೂ ಸೈತಾನನಿದ್ದಾನೆ; ನೀನು ಅವನನ್ನು ನರಕಕ್ಕೆ ಹಾಕುವುದರ ಮೂಲಕ ಇಲ್ಲಿಯೂ ಸಹ ದೇವರ ಸೇವೆ ಮಾಡಬಹುದು' ಎಂದು ತಿಳಿಸಿದರು.

ಸ್ವರ್ಗಕ್ಕೆ ದಾರಿ

ಇಟಲಿಯ ಸ್ಯಾನ್ ಪ್ಯಾಂಕ್ರೇಜಿಯೋನಲ್ಲಿ ಪುಕ್ಸಿಯೋ ಎಂಬ ದಡ್ಡ ಶ್ರೀಮಂತನಿದ್ದ. ಆತ ಅತ್ಯಂತ ಧಾರ್ಮಿಕ ಮನೋಭಾವದವನಾಗಿದ್ದು ಬೆಳಗಿನಿಂದ ಸಂಜೆಯವರೆವಿಗೂ ಪೂಜೆ ಪುನಸ್ಕಾರಗಳಲ್ಲೇ ತೊಡಗಿರುತ್ತಿದ್ದ. ಆತನಿಗೆ ಸುಮಾರು ಮುವ್ವತ್ತು ವರ್ಷ ವಯಸ್ಸಿನ ಮೋನಾ ಎಂಬ ಸುಂದರ ಪತ್ನಿಯಿದ್ದಳು. ಪುಕ್ಸಿಯೋನಂತೂ ಸದಾ ದೇವರ ಧ್ಯಾನದಲ್ಲಿ ಮುಳುಗಿರುತ್ತಿದ್ದುದರಿಂದ ಆತನಿಗೆ ತನ್ನ ಪತ್ನಿಯ ದೈಹಿಕ ಅವಶ್ಯಕತೆಗಳನ್ನು ಪೂರೈಸಲು ಸಮಯವೇ ಇರಲಿಲ್ಲ. ಆಕೆಯೇ ಮೇಲೆ ಬಿದ್ದು ಒತ್ತಾಯಿಸಿದರೆ ದೈವ ಭಕ್ತಿಯ ಕತೆಗಳನ್ನು ಹೇಳುತ್ತ ಮಾತು ಮರೆಸುತ್ತಿದ್ದ.

ಅಂತಹ ಸಮಯದಲ್ಲಿ ಪ್ಯಾರಿಸ್ಸಿನಿಂದ ಡಾನ್ ಫೆಲಿಸ್ ಎಂಬ ಸುಂದರ, ಸದೃಢ, ಚತುರ ಯುವ ಸಂನ್ಯಾಸಿ ಆ ಊರಿಗೆ ಬಂದ. ಆತ ಹೆಚ್ಚು ಧಾರ್ಮಿಕ ವಿಷಯಗಳ ಬಗ್ಗೆ ತಿಳಿದವನಾದ್ದರಿಂದ ಪುಕ್ಸಿಯೋ ತನ್ನಲ್ಲಿನ ಸಂಶಯಗಳ ನಿವಾರಣೆಗೆ ಡಾನ್‌ನಲ್ಲಿಗೆ ಹೋಗುತ್ತಿದ್ದ. ಹಾಗೆಯೇ ಅವರ ಗೆಳೆತನವಾಯ್ತು. ಪುಕ್ಸಿಯೋ ಆತನನ್ನು ಆಗಾಗ ತನ್ನ ಮನೆಗೆ ಊಟಕ್ಕೆ ಸಹ ಕರೆತರುತ್ತಿದ್ದ. ಪುಕ್ಸಿಯೋನ ಮನೆಯಲ್ಲಿ ಆತನ ಪತ್ನಿ ಮೋನಾಳನ್ನು ನೋಡಿದ ಚತುರ ಡಾನ್‌ನಿಗೆ ಆಕೆಗೆ ಯಾವುದರ ಕೊರತೆಯಿದೆ ಎಂಬುದು ಕೂಡಲೇ ಅರ್ಥವಾಯಿತು. ಪಾಪ, ದೈವ ಭಕ್ತ ಪುಕ್ಸಿಯೋನಿಗೇಕೆ ತೊಂದರೆ, ಆಕೆಯ ಕೊರತೆ ತಾನೇ ನಿವಾರಿಸಲು ಮುಂದಾಗುತ್ತೇನೆ ಎಂದುಕೊಂಡ. ಮೋನಾಳನ್ನು ಕಣ್ಣಿನಲ್ಲೇ ಮಾತನಾಡಿಸತೊಡಗಿದ. ಆಕೆಗೂ ಆತನ ಭಾಷೆ ಅರ್ಥವಾಯಿತು. ಆದರೆ ಅವರ ಇಷ್ಟಾರ್ಥ ಸಿದ್ಧಿಯಾಗುವುದು ಕಷ್ಟವಾಯಿತು, ಏಕೆಂದರೆ ಪುಕ್ಸಿಯೋನಂತೂ ಸದಾ ಮನೆಯಲ್ಲೇ, ಡಾನ್‌ನ ಜೊತೆಯೇ ಇರುತ್ತಿದ್ದ. ಅಲ್ಲದೆ ಆಕೆ ತನ್ನ ಕಾರ್ಯಸಾಧನೆಗೆ ಮನೆಬಿಟ್ಟು ಹೊರಗೆ ಬರಲು ತಯಾರಿರಲಿಲ್ಲ; ಏನೇ ನಡೆದರೂ ತನ್ನ ಮನೆಯಲ್ಲೇ



ನಡೆಸಬೇಕೆಂಬುದು ಆಕೆಯ ಅಭಿಮತವಾಗಿತ್ತು. ಕೊನೆಗೆ ಡಾನ್‌ನಿಗೆ ಪುಕ್ಸಿಯೋನ ಮನೆಯಲ್ಲೇ, ಆತ ಇರುವಾಗಲೇ ತನ್ನ ಕೆಲಸ ನಡೆಸಲು ಸಾಧ್ಯವಾಗುವಂತಹ ಆಲೋಚನೆಯೊಂದು ಹೊಳೆಯಿತು.

ಒಂದು ದಿನ ಡಾನ್, ಪುಕ್ಸಿಯೋನಿಗೆ, 'ಪುಕ್ಸಿಯೋ, ನೀನೊಬ್ಬ ಸಂನ್ಯಾಸಿಯಾಗಬೇಕೆಂದಿರುವೆಯಲ್ಲವೆ? ನಾನು ಬಂದ ದಿನದಿಂದ ನಿನ್ನ ಆಚರಣೆಗಳನ್ನು ಗಮನಿಸುತ್ತಿದ್ದೇನೆ. ನೀನು ಸಂನ್ಯಾಸಿಯಾಗಲು ಸುಲಭದ ದಾರಿ ಬಿಟ್ಟು ಸುತ್ತು ಬಳಸಿನ ಹಾಗೂ ಕಷ್ಟಕರವಾದ ದಾರಿ ಹಿಡಿದಿದ್ದೀಯೆ.

ಈ ಧರ್ಮಾಧಿಕಾರಿಗಳೇ ಹೀಗೆ. ನಿನ್ನಂತಹ ಭಕ್ತರಿಗೆ ಅಂಥವನ್ನೆಲ್ಲ ತಿಳಿಸಿಕೊಡುವುದಿಲ್ಲ; ಎಲ್ಲಿ ತಮಗೆ ಸಿಗುವ ಕಾಣಿಕೆಗಳು ತಪ್ಪಿಹೋಗುತ್ತವೆಯೋ ಎಂದು. ನೀನು ಯಾರಲ್ಲಿಯೂ ಹೇಳುವುದಿಲ್ಲವಾದರೆ ನೀನು ಸಂನ್ಯಾಸಿಯಾಗುವ ಸುಲಭದ ದಾರಿ ತೋರಿಸಿಕೊಡುತ್ತೇನೆ' ಎಂದ. ಪುಕ್ಸಿಯೋ ಸಂತೋಷದಿಂದ ಇನ್ನೇನು ತನಗೆ ಸ್ವರ್ಗಕ್ಕೇರುವ ಮೆಟ್ಟಿಲೇ ಸಿಕ್ಕಿಬಿಟ್ಟಿತು ಎಂದು ತಿಳಿದು, ಆ ವಿಷಯ ಯಾರಲ್ಲಿಯೂ ತಿಳಿಸುವುದಿಲ್ಲವೆಂದು ಪ್ರಮಾಣ ಮಾಡಿದ. ಅದಕ್ಕೆ ಡಾನ್, 'ಪುಕ್ಸಿಯೋ, ನೀನು ಸಂನ್ಯಾಸಿಯಾಗಬೇಕಾದರೆ ಮೊದಲಿಗೆ ನೀನು ಇದುವರೆಗೆ ಮಾಡಿರುವ ಎಲ್ಲಾ ಪಾಪಗಳ ಪರಿಹಾರವಾಗಬೇಕು. ನಾನು ಹೇಳಿಕೊಡುವ ನಿಯಮ, ಆಚರಣೆಗಳನ್ನು ನೀನು ಪಾಲಿಸಿದಲ್ಲಿ ನಿನ್ನ ಎಲ್ಲಾ ಪಾಪಗಳೂ ತೊಳೆದು ಹೋಗುತ್ತವೆ. ಅಷ್ಟೇ ಏಕೆ, ನೀನು ಮುಂದೆ ಮಾಡಬಹುದಾದ ಪಾಪಗಳೂ ಸಹ ನಿನಗೆ ಅಂಟಿಕೊಳ್ಳುವುದಿಲ್ಲ.

'ಮೊದಲಿಗೆ ನೀನು ಉಪವಾಸ ಮಾಡಬೇಕು ಹಾಗೂ ನಲವತ್ತೈದು ದಿನಗಳವರೆಗೆ ಹೆಂಗಸರಿಂದ, ನಿನ್ನ ಪತ್ನಿಯಿಂದಲೂ ಸಹ ದೂರವಿದ್ದು ಬ್ರಹ್ಮಚರ್ಯ ಆಚರಿಸಬೇಕು. ಜೊತೆಗೆ ನಲವತ್ತೈದು ದಿನಗಳವರೆಗೆ ಪ್ರತಿದಿನ ಕತ್ತಲಾಗುತ್ತಿರುವಂತೆ ನಿನ್ನ ಮನೆಯ ಅಟ್ಟದಲ್ಲಿ ಕೂತು, ಮಾಳಿಗೆಯ ಹೆಂಚು ತೆಗೆದು ತಲೆಯನ್ನು ಹೊರಹಾಕಿ ಎರಡೂ ಕೈಗಳನ್ನು ಮೇಲೆ ಚಾಚಿ, ಬೆಳಗಿನ ಜಾವದವರೆಗೂ ನಿದ್ದೆ ಮಾಡದೆ, ಅಲುಗಾಡದೆ ಆಕಾಶವನ್ನು ದಿಟ್ಟಿಸುತ್ತಿರಬೇಕು. ನಿನಗೆ ಕೆಲವೊಂದು ಮಂತ್ರಗಳನ್ನು ಹೇಳಿಕೊಡುತ್ತೇನೆ. ಅವನ್ನು ನೀನು ಪಠಿಸುತ್ತಿರಬೇಕು. ಬೆಳಗಿನ ಜಾವ ಅಲ್ಲಿಂದ ಎದ್ದು ಬಂದು ಬೇಕಿದ್ದರೆ ನಿದ್ದೆ ಮಾಡಬಹುದು. ಅನಂತರ ಎದ್ದು ದೇವಾಲಯಕ್ಕೆ ಹೋಗಿ ದೇವರ ಪೂಜೆ ಮಾಡಿದನಂತರ ನಿನ್ನ ದಿನನಿತ್ಯದ ಕೆಲಸಗಳಲ್ಲಿ ತೊಡಗಬಹುದು. ಮತ್ತೆ ರಾತ್ರಿಯಾಗುತ್ತಿರುವಂತೆ ಇದುವರೆಗೆ ಹೇಳಿದ ಎಲ್ಲಾ ಆಚರಣೆ, ನಿಯಮಗಳನ್ನು ಆರಂಭಿಸಬೇಕು. ಇದೇ ರೀತಿ ನಲವತ್ತೈದು ದಿನ ನಾನು ಹೇಳಿಕೊಟ್ಟ ನಿಯಮಾಚರಣೆಗಳನ್ನು ಪಾಲಿಸಿದಲ್ಲಿ ನೀನು ನನ್ನ ಹಾಗೆ ಮಹಾನ್ ಸಂನ್ಯಾಸಿಯಾಗುವುದರಲ್ಲಿ ಸಂಶಯವೇ ಇಲ್ಲ' ಎಂದ. ಪುಕ್ಸಿಯೋ ಸಂತೋಷದಿಂದ ತಾನು ಸಂನ್ಯಾಸಿಯಾಗಿ ಸ್ವರ್ಗಕ್ಕೆ ಹೋಗಲು ಏನು ಮಾಡಲೂ ಸಿದ್ಧ ಎಂದು ತಿಳಿಸಿದ.

ಪುಕ್ಸಿಯೋ ಕೂಡಲೇ ಮನೆಗೆ ಹೊರಟು ತನ್ನ ಪತ್ನಿಗೆ ಡಾನ್ ಹೇಳಿಕೊಟ್ಟ ಆಚರಣೆ, ನಿಯಮಗಳನ್ನು ತಿಳಿಸಿದ. ಆಕೆಗೆ ಕೂಡಲೇ ಚತುರ

ಸಂನ್ಯಾಸಿ ಡಾನ್‌ನ ಉಪಾಯ ಅರಿವಾಯಿತು. ಆಕೆಯೂ ಸಹ ಸಂತೋಷದಿಂದ ಆತನ ಆತ್ಮಕ್ಕೆ ಸಂತೋಷ ಸಿಗುವುದಾದಲ್ಲಿ ಏನು ಬೇಕಾದರೂ ಮಾಡು ಎಂದು ಹುರಿದುಂಬಿಸಿದಳು. ಜೊತೆಗೆ ಅವನ ನಿಯಮಾಚರಣೆಯಲ್ಲಿ ಬೆಂಬಲ ಸೂಚಿಸಲು ತಾನೂ ಸಹ ಆತನ ಜೊತೆಗೆ ಉಪವಾಸ ಇರುವುದಾಗಿ ತಿಳಿಸಿದಳು.

ಪುಕ್ಸಿಯೋ ತನ್ನ ಆಚರಣೆಗೆ ಅಟ್ಟದಲ್ಲಿ ಹುಡುಕಿಕೊಂಡ ಸ್ಥಳ ಅವನ ಪತ್ನಿ ಮೋನಾಳ ಕೋಣೆಯ ಪಕ್ಕದಲ್ಲೇ ಇತ್ತು ಹಾಗೂ ಆ ಎರಡೂ ಕೋಣೆಗಳ ನಡುವೆ ತೆಳುವಾದ ಗೋಡೆಯಿತ್ತು. ಮೊದಲ ರಾತ್ರಿ ಅತ್ತ ಪುಕ್ಸಿಯೋ ಅಟ್ಟ ಹತ್ತಿ ಅಲುಗಾಡದೆ ಆಕಾಶ ನೋಡುತ್ತಾ ಮಂತ್ರ ಪಠಿಸುತ್ತಿರುವಾಗ ಇತ್ತ ಸಂನ್ಯಾಸಿ ಡಾನ್ ಪುಕ್ಸಿಯೋನ ಪತ್ನಿ ಮೋನಾಳೊಂದಿಗೆ ಸರಸ ಸಲ್ಲಾಪ ನಡೆಸುತ್ತಿದ್ದ. ಪುಕ್ಸಿಯೋನಿಗೆ ಪಕ್ಕದ ತನ್ನ ಪತ್ನಿಯ ಕೋಣೆ ಅಲುಗಾಡುತ್ತಿರುವಂತೆ ಭಾಸವಾಯಿತು. ಅಲುಗಾಡದೆ ಅಲ್ಲಿಂದಲೇ ತನ್ನ ಪತ್ನಿಯನ್ನು ಕರೆದು ಆಕೆ ಏನು ಮಾಡುತ್ತಿದ್ದಾಳೆಂದು ಕೇಳಿದ. ಆಕೆ ಅಲ್ಲಿಂದಲೇ ನಿದ್ದೆ ಬರದೆ ಹಾಸಿಗೆಯಲ್ಲಿ ಆ ಕಡೆ ಈ ಕಡೆ ಉರುಳಾಡುತ್ತಿದ್ದೇನೆಂದು ತಿಳಿಸಿದಳು. ಪುಕ್ಸಿಯೋ ಏಕೆ ನಿದ್ದೆ ಬರುತ್ತಿಲ್ಲವೆಂದು ಕೇಳಿದ. ಅದಕ್ಕೆ ಆಕೆ, 'ನೀನೇ ಹೇಳಿಲ್ಲವೆ, ಉಪವಾಸ ಇದ್ದವರಿಗೆ ನಿದ್ದೆ ಬರುವುದಿಲ್ಲ ಎಂದು' ಎಂದಳು. ಆತನಿಗೆ ತನ್ನ ಪತ್ನಿಯ ಸ್ಥಿತಿಯ ಬಗ್ಗೆ ಕನಿಕರಗೊಂಡು, 'ನಾನು ನಿಗೆ ಮೊದಲೇ ಹೇಳಿದ್ದೆ, ನನ್ನ ಹಾಗೆ ನೀನು ಉಪವಾಸ ಇರಬೇಡವೆಂದು. ಈಗ ನೋಡು ಇಡೀ ಮನೆಯೇ ಅಲುಗಾಡುವ ಹಾಗೆ ಉರುಳಾಡುತ್ತಿದ್ದೀಯೆ. ಹಸಿವೆಂಬೋ ನಿನ್ನ ಸುಕೋಮಲ ದೇಹವನ್ನು ಆಲಂಗಿಸಿ ಅಲುಗಾಡಿಸುತ್ತಿರುವಂತಿದೆ' ಎಂದ. ಅದಕ್ಕೆ ಮೋನಾ, 'ನನ್ನ ಬಗ್ಗೆ ಆಲೋಚಿಸಬೇಡ. ನಾನೇನು ಮಾಡುತ್ತಿದ್ದೇನೆಂದು ನನಗೆ ಗೊತ್ತು. ನೀನು ಸುಮ್ಮನೆ ಅತ್ತ ಇತ್ತ ಗಮನ ಹರಿಸದೆ ದೇವರಧ್ಯಾನ ಮಾಡು' ಎಂದಳು.

ಮರು ದಿನ ರಾತ್ರಿ ಮೋನಾ ಹಾಗೂ ಡಾನ್ ಆ ಕೋಣೆ ಬಿಟ್ಟು ಮತ್ತೊಂದು ಕೋಣೆಗೆ ಹೋಗಿ ಪುಕ್ಸಿಯೋನ ಧ್ಯಾನಕ್ಕೆ ತೊಂದರೆ ಕೊಡದೆ ಅವನ ನಿಯಮಾಚರಣೆ ಮುಗಿಯುವಷ್ಟು ದಿವಸವೂ ತಮ್ಮ ಆಚರಣೆ ಮುಂದುವರೆಸಿದರು.

ಅತ್ತ ಪುಕ್ಸಿಯೋ ತನ್ನ ದೈವ ಭಕ್ತಿ, ಕಠಿಣ ನಿಯಮಾಚರಣೆಗಳಿಂದ ತಾನು ಸ್ವರ್ಗಕ್ಕೆ ಹೋಗುವ ಕನಸು ಕಾಣುತ್ತಿದ್ದರೆ, ಇತ್ತ ಅವನ ಪತ್ನಿ ಮೋನಾ ಹಾಗೂ ಸಂನ್ಯಾಸಿ ಡಾನ್ ಆಗಲೇ ಸ್ವರ್ಗ ತಲುಪಿಬಿಟ್ಟಿದ್ದರು.

ಪೀಪಾಯಿ ವ್ಯಾಪಾರ

ನೇಪಲ್ಸ್ ನಗರದಲ್ಲಿ ಒಬ್ಬ ಬಡ ಮನುಷ್ಯನಿಗೆ ಪೆರೋನೆಲ್ಲಾ ಎಂಬ ಸುಂದರ ಯುವ ಪತ್ನಿಯಿದ್ದಳು. ಆತ ಗಾರೆ ಕೆಲಸ ಮಾಡುತ್ತಿದ್ದ ಹಾಗೂ ಪೆರೋನೆಲ್ಲಾ ಮನೆಯಲ್ಲಿ ಉಣ್ಣೆ ಹಸನು ಮಾಡುವ ಕೆಲಸ ಮಾಡುತ್ತಿದ್ದಳು. ಅದೇ ಊರಿನ ಸ್ಟ್ರಿಗ್‌ನಾರಿಯೊ ಎಂಬ ಯುವಕ ಪೆರೋನೆಲ್ಲಾಳ ಸೌಂದರ್ಯಕ್ಕೆ ಮಾರು ಹೋಗಿ, ಪಟ್ಟು ಬಿಡದೆ ಅವಳ ಬೆನ್ನ ಹಿಂದೆ ಬಿದ್ದು ಅವಳ ಒಲವು ಗಳಿಸಿಕೊಂಡ. ಪೆರೋನೆಲ್ಲಾಳ ಗಂಡ ಕೆಲಸಕ್ಕೆ ಹೋದ ನಂತರ ಸ್ಟ್ರಿಗ್‌ನಾರಿಯೊ ಪೆರೋನೆಲ್ಲಾಳ ಮನೆಗೆ ಬಂದು ಸಂಜೆಯವರೆಗೂ ಆಕೆಯ ಸಂಗಡ ಇದ್ದು ಹೋಗುತ್ತಿದ್ದ. ಹೀಗೇ ಬಹಳಷ್ಟು ದಿನ ನಡೆಯಿತು.

ಒಂದು ದಿನ ಕೆಲಸಕ್ಕೆ ಹೋದ ಗಂಡ, ಪ್ರೇಮಿಗಳು ಇಬ್ಬರೂ ಮನೆಯಲ್ಲಿ ಸರಸ ಸಲ್ಲಾಪ ನಡೆಸುತ್ತಿರುವಾಗ ಆಕಸ್ಮಿಕವಾಗಿ ವಾಪಸ್ಸು ಬಂದ. ಬಾಗಿಲು ಚಿಲಕ ಹಾಕಿದ್ದುದರಿಂದ ಬಾಗಿಲು ತಟ್ಟಿದ. 'ಹೋ ದೇವರೇ! ನನಗೆ ಬಡತನ ಕೊಟ್ಟಿದ್ದರೂ ಎಂತಹ ಸಾಧ್ವಿ ಪತ್ನಿಯನ್ನು ಕೊಟ್ಟಿದ್ದೀಯೆ! ನಾನು ಕೆಲಸಕ್ಕೆ ಹೋದ ಕೂಡಲೆ ಬಾಗಿಲು ಭದ್ರಮಾಡಿ ಯಾರೂ ಒಳಬರದಂತೆ ಮಾಡಿದ್ದಾಳೆ!' ಎಂದು ತನಗೆ ಪುಣ್ಯ ಕೊಟ್ಟ ದೇವರನ್ನು ನೆನೆದ. ಪ್ರಿಯಕರನ ಅಪ್ಪುಗೆಯಲ್ಲಿದ್ದ ಪೆರೋನೆಲ್ಲಾಳಿಗೆ ಬಾಗಿಲು ತಟ್ಟಿದ ರೀತಿಯಿಂದಲೇ ತನ್ನ ಗಂಡ ಬಂದಿದ್ದಾನೆಂದು ತಿಳಿದು, 'ಹೋ ನಾನು ಸತ್ತೆ! ನನ್ನ ಗಂಡ ಕೆಲಸಕ್ಕೆ ಹೋದವ ಎಂದೂ ಈ ರೀತಿ ವಾಪಸ್ಸು ಬಂದವನಲ್ಲ. ಈ ದಿನ ನೀನು ಬಂದಿರುವುದನ್ನು ನೋಡಿಯೇ ನಮ್ಮನ್ನು ಈ ಅವಸ್ಥೆಯಲ್ಲಿ ಹಿಡಿಯಲು ಆತ ಬಂದಿರಬೇಕು. ಆದದ್ದಾಗಲಿ ನೀನು ಈ ದೊಡ್ಡ ಪೀಪಾಯಿಯಲ್ಲಿ ಅಡಗಿಕೊ' ಎಂದು ತನ್ನ ಪ್ರಿಯಕರ ಸ್ಟ್ರಿಗ್‌ನಾರಿಯೋನನ್ನು ಅಲ್ಲಿಯೇ ಇದ್ದ ದೊಡ್ಡ ಪೀಪಾಯಿಯೊಂದರಲ್ಲಿ ಅಡಗಿಸಿ ತನ್ನ ಬಟ್ಟೆ ಸರಿಪಡಿಸಿಕೊಂಡು ಬಾಗಿಲು ತೆರೆದಳು. ತನ್ನ ಪ್ರೇಮಿಯೊಂದಿಗೆ

ಕಳೆಯುತ್ತಿದ್ದ ಸುಮಧುರ ಕ್ಷಣಗಳನ್ನು ಹಾಳುಗೆಡವಿ ದ್ದಕ್ಕಾಗಿ ಸಿಟ್ಟಿನಿಂದ ಕುದಿಯುತ್ತಿದ್ದ ಆಕೆ ತನ್ನ ಗಂಡನ ಮೇಲೆ ಹರಿಹಾಯ್ದಳು. 'ಏನಿದು? ಕೆಲಸಕ್ಕೆ ಹೋಗುವುದರಲ್ಲಿ ಸೋಮಾರಿತನವಾದರೆ ನಾವು ಬದುಕುವುದು ಹೇಗೆ? ಹೀಗೇ ಆದರೆ, ಕೊನೆಗೆ ನನ್ನ ಒಳ ಉಡುಪುಗಳನ್ನೂ ಸಹ ಅಡವಿಡಲು ನೀನು ಹೇಸುವುದಿಲ್ಲ. ನಾನು ಮನೆಯಲ್ಲಿ ಉಣ್ಣೆ ಹಸನು ಮಾಡುತ್ತಾ ದನ ದುಡಿದ ಹಾಗೆ ದುಡಿಯುತ್ತಿರುತ್ತೇನೆ. ನೀನು ಕೆಲಸ ಮಾಡದೆ ಈ ರೀತಿ ಕೈ ಬೀಸಿಕೊಂಡು ಮನೆಗೆ ವಾಪಸ್ಸು ಬರುತ್ತಿರು. ಇದೇ ರೀತಿ ಆದಲ್ಲಿ ಈ ಬೀದಿಯ ಹೆಂಗಸರು ನನ್ನ ದುಡಿತವನ್ನು, ನಿನ್ನ ಸೋಮಾರಿತನವನ್ನು ಅಪಹಾಸ್ಯ ಮಾಡುತ್ತಾರೆ' ಎಂದಳು. ಅಲ್ಲದೆ ನಾಟಕೀಯವಾಗಿ ಕಣ್ಣೀರು ಸುರಿಸುತ್ತಾ, 'ಅಯ್ಯೋ ಗಂಡನೇ, ನನ್ನದೆಂಥಾ ದುರದೃಷ್ಟ. ಎಲ್ಲಾ ಹೆಂಗಸರು ಒಬ್ಬರಲ್ಲ, ಇಬ್ಬರಲ್ಲ, ಹಲವಾರು ಮಂದಿ ಪ್ರಿಯಕರರನ್ನಿಟ್ಟುಕೊಂಡು, ತಮ್ಮ ಗಂಡಂದಿರಿಗೆ ಸೂರ್ಯನನ್ನು ತೋರಿಸಿ ಚಂದಿರನೆಂದು ಹೇಳುತ್ತಾ ಸುಖ ಸಂತೋಷದಿಂದಿರುವಾಗ, ಇಲ್ಲಿ ನಾನು ಅಂಥವುಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ದುಡಿಯುತ್ತಿದ್ದೇನೆ. ಬೇಕಿದ್ದಲ್ಲಿ ನಾನೂ ಸಹ ಆ ರೀತಿ ಪ್ರಿಯಕರರನ್ನಿಟ್ಟುಕೊಳ್ಳಬಹುದಿತ್ತು. ಈ ಊರಿನಲ್ಲಿ ನನಗಾಗಿ ಬಾಯಿಬಿಡುವ ಎಷ್ಟು ಮಂದಿ ಯುವಕರಿದ್ದಾರೆಂದು ನನಗೆ ಗೊತ್ತು. ಆದರೆ ನಾನು ಅಂತಹ ಕುಲದವಳಲ್ಲ. ನನ್ನಂಥ ಹೆಣ್ಣಿಗೆ ನಿನ್ನಂಥ ಸೋಮಾರಿ ಗಂಡ ಸಿಕ್ಕನಲ್ಲಾ' ಎಂದು ಗೋಳಾಡುತ್ತ ತನ್ನ ಸಿಟ್ಟನ್ನೆಲ್ಲಾ ಅವನ ಮೇಲೆ ಕಾರಿದಳು.

ಹೆಂಡತಿಯ ಸಿಟ್ಟು, ಗೋಳಾಟ ಕಂಡ ಗಂಡ, ಆಕೆಯನ್ನು ಸಾಂತ್ವನಗೊಳಿಸಲು, 'ಸಿಟ್ಟಾಗಬೇಡ, ನೀನೆಷ್ಟು ಒಳ್ಳೆಯವಳೆಂದು ನನಗೆ ಗೊತ್ತಿಲ್ಲವೆ. ನಿನ್ನಂಥ ಸಾಧ್ವಿ, ಪತಿವ್ರತೆ ನನ್ನ ಪತ್ನಿಯಾಗಿರುವುದು ನನ್ನ ಅದೃಷ್ಟ. ನಾನು ಕೆಲಸಕ್ಕೆ ಹೋಗದಂಥ ಸೋಮಾರಿಯಲ್ಲ. ಈ ದಿನ ಸಂತ ಗೆಲೆನೋನ ಪುಣ್ಯ ತಿಥಿಯಲ್ಲವೆ? ನನಗೂ ಕೆಲಸಕ್ಕೆ ಹೋದನಂತರ ಈ ವಿಷಯ ತಿಳಿಯಿತು. ಈ ದಿನ ಎಲ್ಲೂ ಕೆಲಸವಿಲ್ಲ. ಆದ್ದರಿಂದ ನಾನು ವಾಪಸ್ಸು ಬಂದೆ. ಯೋಚನೆ ಮಾಡಬೇಡ, ಈ ದಿನಕ್ಕೆ ಮಾತ್ರವಲ್ಲ, ಇಡೀ ತಿಂಗಳಿಗೆ ಊಟ ಸಿಗುವಂಥ ವ್ಯವಸ್ಥೆ ಮಾಡಿದ್ದೇನೆ. ಅಲ್ಲಿ ನೋಡು, ಆ ಮೂಲೆಯಲ್ಲಿ ಒಂದು ದೊಡ್ಡ ಪೀಪಾಯಿ ಇದೆಯೆಲ್ಲಾ, ನಮಗೆ ಅದರ ಪ್ರಯೋಜನವೇನೂ ಇಲ್ಲ. ಅದನ್ನು ಐದು ಫ್ಲೋರಿನ್‌ಗೆ ಮಾರಾಟ ಮಾಡಲು ಹೇಳಿ ಬಂದಿದ್ದೇನೆ' ಎಂದ.



'ಹೋ! ನಾನು ಸಿಕ್ಕಿಬಿದ್ದೆ' ಎಂದುಕೊಂಡ ಚತುರ ಪೆರೋನೆಲ್ಲಾಳಿಗೆ ತಕ್ಷಣ ಉಪಾಯವೊಂದು ಹೊಳೆಯಿತು. ಕೂಡಲೇ, 'ಏನು? ಐದು ಫ್ಲೋರಿನ್‌ಗೆ? ಹೊರಗಡೆ ಓಡಾಡಿ ಪ್ರಪಂಚ ನೋಡಿರುವ ನಿನಂಥ ಗಂಡಸಿಗೇ ವ್ಯಾಪಾರ ತಿಳಿಯುವುದಿಲ್ಲವಲ್ಲ! ಮನೆಯಲ್ಲಿರುವಂತಹ ನಾನೇ ನಿನಗಿಂತ ವಾಸಿ. ನೋಡು ಆ ಪೀಪಾಯಿಯನ್ನು ಏಳು ಫ್ಲೋರಿನ್‌ಗೆ ಕೊಳ್ಳಲು ಒಬ್ಬಾತ ಬಂದಿದ್ದಾನೆ. ನೀನು ಬಂದಾಗಷ್ಟೆ ಅದರ ಒಳಗೆ ಇಳಿದು ಪೀಪಾಯಿ ಹೇಗಿದೆಯೆಂದು ಪರೀಕ್ಷಿಸುತ್ತಿದ್ದಾನೆ' ಎಂದಳು. ತನ್ನ ಪತ್ನಿ ತನಗಿಂತ ಜಾಣಳೆಂದು ತಿಳಿದು ಗಂಡನಿಗೆ ಸಂತೋಷವಾಯಿತು.

ಅಷ್ಟರಲ್ಲಿ ಪೀಪಾಯಿಯೊಳಗೆ ಎಲ್ಲಾ ಕೇಳಿಸಿಕೊಂಡು ಕೂತಿದ್ದ ಸ್ಪ್ರಿಗ್‌ನಾರಿಯೊ ಪೀಪಾಯಿಯಿಂದ ಹೊರಬಂದು, ಅಲ್ಲಿ ನಿಂತಿದ್ದ ಗಂಡನನ್ನು ಗಮನಿಸದೆ, 'ಎಲ್ಲಿ ಈ ಪೀಪಾಯಿಯನ್ನು ಮಾರುತ್ತೇನೆಂದು ಹೇಳಿದ ಹೆಂಗಸೆಲ್ಲಿ?' ಎಂದ. ಅದಕ್ಕೆ ಗಂಡ ಮುಂದೆ ಬಂದು, 'ನಾನೇ ಆಕೆಯ ಗಂಡ. ಹೇಳು ಪೀಪಾಯಿ ಹೇಗಿದೆ?' ಎಂದು ಕೇಳಿದ. 'ಪೀಪಾಯಿಯೇನೋ ಚೆನ್ನಾಗಿದೆ. ಆದರೆ ಅದರೊಳಗೆ ನೀವು ವೈನ್ ತುಂಬಿಸಿ ಬಹಳ ದಿನ ಬಿಟ್ಟಿದ್ದರೆನ್ನಿಸುತ್ತದೆ. ಒಳಗೆ ಬಹಳಷ್ಟು ಗಲೀಜಿದೆ. ಅದನ್ನು ಶುಚಿಗೊಳಿಸದೆ ನಾನು ಕೊಂಡೊಯ್ಯುವುದಿಲ್ಲ' ಎಂದ ಸ್ಪ್ರಿಗ್‌ನಾರಿಯೊ. ಅಷ್ಟರಲ್ಲಿ ಪೆರೋನೆಲ್ಲಾ ಮುಂದೆ ಬಂದು, 'ದಯವಿಟ್ಟು ವ್ಯಾಪಾರ ನಿಲ್ಲಿಸಬೇಡಿ. ಆ ಪೀಪಾಯಿಯನ್ನು ನನ್ನ ಗಂಡ ಶುಚಿಗೊಳಿಸಿಕೊಡುತ್ತಾನೆ' ಎಂದಳು. ಆಯಿತೆನ್ನುತ್ತಾ ಗಂಡ ಪೀಪಾಯಿಯೊಳಗೆ ಇಳಿದು ಅದನ್ನು ಶುಚಿಗೊಳಿಸತೊಡಗಿದ. ಪೆರೋನೆಲ್ಲಾ ಪೀಪಾಯಿಯ ಅಗಲ ಬಾಯಿಯಲ್ಲಿ ಇಣುಕಿ, ತನ್ನ ಗಂಡನಿಗೆ 'ಅಲ್ಲಿ ಶುಚಿ ಮಾಡು, ಇಲ್ಲಿ ಶುಚಿ ಮಾಡು' ಎಂದು ತೋರಿಸಿದಳು.

ಗಂಡ ವಾಪಸ್ಸು ಬಂದಾಗ ಪೆರೋನೆಲ್ಲಾ ಹಾಗೂ ಸ್ಪ್ರಿಗ್‌ನಾರಿಯೊ ತಾವು ಹತ್ತುತ್ತಿದ್ದ ಸುಖದ ಮೆಟ್ಟಿಲ ಅರ್ಧದಲ್ಲಿಯೇ ನಿಂತುಬಿಟ್ಟಿದ್ದರು. ಈಗ ಗಂಡ ಪೀಪಾಯಿ ಶುಚಿಗೊಳಿಸುವಷ್ಟರಲ್ಲಿ ಅವರಿಬ್ಬರೂ ಬೆದೆಗೆ ಬಂದ ಪಾರ್ಥಿಯನ್ ಕುದುರೆಗಳ ಹಾಗೆ ತಮ್ಮ ಇಚ್ಛೆ ಈಡೇರಿಸಿಕೊಂಡರು. ಗಂಡ ಪೀಪಾಯಿ ಶುಚಿಗೊಳಿಸಿದ. ಪೀಪಾಯಿಯ ಬಾಯಿಯಲ್ಲಿ ಬಗ್ಗಿ ಇಣುಕಿದ್ದ ಪೆರೋನೆಲ್ಲಾ ಮೇಲೆದ್ದು ಸ್ಪ್ರಿಗ್‌ನಾರಿಯೋಗೆ ಪೀಪಾಯಿ ಶುಚಿಯಾಗಿದೆಯೆಂದು ತಿಳಿಸಿದಳು. ಆತ ಏಳು ಫ್ಲೋರಿನ್ ಕೊಟ್ಟು ಪೀಪಾಯಿ ಹೊತ್ತು ತನ್ನ ಮನೆಗೆ ನಡೆದ.

ಮಾಸೆಟ್ಟೋ ಎಂಬ ಮಾಲಿ

ಒಂದು ಹಳ್ಳಿಗಾಡಿನ ಪ್ರದೇಶದಲ್ಲಿ ಸಂನ್ಯಾಸಿನಿಯರ ಸುಪ್ರಸಿದ್ಧವಾದ ಆಶ್ರಮವೊಂದಿತ್ತು. ಅಲ್ಲಿ ಎಂಟು ಜನ ಸಂನ್ಯಾಸಿನಿಯುರು, ಒಬ್ಬ ಮುಖ್ಯಾಧಿಕಾರಿಣಿ ಹಾಗೂ ಒಬ್ಬ ವೃದ್ಧ ಮೇಲ್ವಿಚಾರಕನಿದ್ದ. ಆ ಎಂಟು ಜನ ಸಂನ್ಯಾಸಿನಿಯರೂ ಹಾಗೂ ಮುಖ್ಯಾಧಿಕಾರಿಣಿ ಯುವತಿಯರಾಗಿದ್ದರು. ಆ ಆಶ್ರಮದ ಹೂದೋಟ ನೋಡಿಕೊಳ್ಳಲು ಒಬ್ಬ ಮಾಲಿಯಿದ್ದು ಆತ ಕೆಲಸ ತೀರಾ ಹೆಚ್ಚಾಯಿತೆಂದೂ ಹಾಗೂ ಅವರು ಕೊಡುವ ಸಂಬಳ ಯಾತಕ್ಕೂ ಸಾಲದೆಂದು ಗೊಣಗಿ ಒಂದು ದಿನ ಕೆಲಸ ಬಿಟ್ಟು ತನ್ನ ಸ್ವಂತ ಊರಿಗೆ ಹಿಂದಿರುಗಿದ. ಊರಿನಲ್ಲಿ ಆತನಿಗೆ ಮಾಸೆಟ್ಟೋ ಎಂಬ ಗೆಳೆಯನಿದ್ದು, ಆತ ಮಾಲಿಯನ್ನು ಕೆಲಸ ಬಿಟ್ಟು ಬರಲು ಕಾರಣವೇನೆಂದು ಕೇಳಿದ. ಅದಕ್ಕೆ ಮಾಲಿ, “ಅಲ್ಲಿ ನಾನು ಬಹು ದೊಡ್ಡ ಹೂದೋಟದಲ್ಲಿ ಕೆಲಸ ಮಾಡಬೇಕಿತ್ತು, ಆಗಾಗ ಕಾಡಿಗೆ ಹೋಗಿ ಸೌದೆ ತರಬೇಕಿತ್ತು, ಬಾವಿಯಿಂದ ನೀರು ಸೇದಬೇಕಿತ್ತು, ಅಲ್ಲದೆ ಇನ್ನೂ ಹಲವಾರು ಸಣ್ಣಪುಟ್ಟ ಕೆಲಸ ಮಾಡಬೇಕಿತ್ತು. ಅಷ್ಟು ಮಾಡಿದರೂ ಅವರು ಕೊಡುತ್ತಿದ್ದ ಸಂಬಳ ತೀರಾ ಕಡಿಮೆ; ಒಂದು ಜೊತೆ ಚಪ್ಪಲಿ ಕೊಳ್ಳಲೂ ಸಾಧ್ಯವಾಗುತ್ತಿರಲಿಲ್ಲ. ಜೊತೆಗೆ ಅಲ್ಲಿದ್ದ ಪಡ್ಡೆ ಸಂನ್ಯಾಸಿನಿಯರು ತುಂಬಾ ಕಿರುಕುಳ ಕೊಡುತ್ತಿದ್ದರು. ಕೆಲಸ ಹೇಗೆ ಮಾಡಿದರೂ ಅವರಿಗೆ ತೃಪ್ತಿಯಾಗುತ್ತಿರಲಿಲ್ಲ. ಒಬ್ಬಾಕೆ ಬಂದು ‘ಅದನ್ನು ಇಲ್ಲಿಡು’ ಎನ್ನುತ್ತಿದ್ದಳು. ಮತ್ತೊಬ್ಬಾಕೆ ಬಂದು ‘ಅದನ್ನು ಇಲ್ಯಾಕೆ ಇಟ್ಟೆ?’ ಎನ್ನುತ್ತಿದ್ದಳು. ನನಗಂತೂ ಇವರ ಬಳಿ ಏಗಿಏಗಿ ಸಾಕಾಗಿಹೋಯಿತು. ಅದಕ್ಕೇ ಬಿಟ್ಟು ಬಂದೆ. ಬರುವಾಗ, ‘ನಿಮ್ಮೂರಿನಲ್ಲೇ ಬೇರೆ ಯಾರ್‍ಯಾದರೂ ಇದ್ದರೆ ಮಾಲಿಯ ಕೆಲಸಕ್ಕೆ ಕಳುಹಿಸು’ ಎಂದು ಮೇಲ್ವಿಚಾರಕ ಹೇಳಿದ. ನಾನು ಆಯಿತೆಂದು ಹೇಳಿ ಬಂದೆ. ಆದರೆ ಅಲ್ಲಿಗೆ ಹೋಗುವಂತೆ ಯಾರಿಗೂ ನಾನು ಸಲಹೆ ನೀಡುವುದಿಲ್ಲ” ಎಂದ ಮಾಲಿ.

ಆ ಯುವ ಸಂನ್ಯಾಸಿನಿಯರ ವಿಷಯ ಕೇಳಿಸಿಕೊಂಡ ಮಾಸೆಟ್ಟೋ ಹೇಗಾದರೂ ಅಲ್ಲಿಗೆ ಹೋಗಿ ಆ ಸಂನ್ಯಾಸಿನಿಯರನ್ನು ಒಂದು ಕೈ ನೋಡಿಕೊಳ್ಳಬೇಕೆಂದು ತೀರ್ಮಾನಿಸಿದ. ಯುವ ಸಂನ್ಯಾಸಿನಿಯರ ವಿಷಯ ಕೇಳಿಯೇ ಅವನ ಮೈ ಬೆಚ್ಚಗಾಗತೊಡಗಿತ್ತು. ಆದರೆ ಈ ಯಾವ ವಿಷಯವೂ ಮಾಲಿಗೆ ತಿಳಿಸದೆ ಆ ಆಶ್ರಮಕ್ಕೆ ಹೋಗುವ ಉಪಾಯವೊಂದನ್ನು ಹುಡುಕತೊಡಗಿದ. ತಾನು ಇನ್ನೂ ಯುವಕ ಹಾಗೂ ಸ್ಫುರದ್ರೂಪಿ ಆಗಿರುವುದರಿಂದ ಅವರು ತನ್ನನ್ನು ಕೆಲಸಕ್ಕೆ ಸೇರಿಸಿಕೊಳ್ಳದೇ ಇರಬಹುದು ಎಂದು ಆಲೋಚಿಸಿದ ಮಾಸೆಟ್ಟೋ, ‘ಆಶ್ರಮ ಹೇಗೂ ಈ ಊರಿನಿಂದ ದೂರದಲ್ಲಿದೆ. ನಾನು ಒಬ್ಬ ಕಿವುಡ, ಮೂಕನ ಹಾಗೆ ಹೋದಲ್ಲಿ ಯಾರಿಗೂ ತಿಳಿಯುವುದಿಲ್ಲ ಹಾಗೂ ಅವರು ನನ್ನನ್ನು ಮಾಲಿಯ ಕೆಲಸಕ್ಕೆ ಸೇರಿಸಿಕೊಳ್ಳಬಹುದು’ ಎಂದು ಯೋಚಿಸಿ, ತಕ್ಷಣವೇ ತೀರ್ಮಾನಿಸಿ, ಹರಕು ಬಟ್ಟೆ ಧರಿಸಿ, ಹೆಗಲಿಗೆ ಕೊಡಲಿಯೊಂದನ್ನು ಏರಿಸಿ ಆ ಸಂನ್ಯಾಸಿನಿಯರ ಆಶ್ರಮದ ದಾರಿ ಹಿಡಿದು ಹೊರಟ.

ಮಾಸೆಟ್ಟೋ ಆಶ್ರಮ ತಲುಪಿದಾಗ ಅಲ್ಲಿ ಆಶ್ರಮದ ಆವರಣದಲ್ಲಿ ವೃದ್ಧ ಮೇಲ್ವಿಚಾರಕ ನಿಂತಿದ್ದ. ಆತನನ್ನು ಕಂಡು ಮಾಸೆಟ್ಟೋ, ತನಗೆ ಹಸಿವಾಗಿದೆಯೆಂದೂ, ಆಹಾರ ಬೇಕೆಂದೂ ಹಾಗೂ ಆಹಾರ ಕೊಟ್ಟಲ್ಲಿ ಸೌದೆ ಸೀಳಿಕೊಡುತ್ತೇನೆಂದು ಸಂಜ್ಞೆಗಳ ಮೂಲಕ ತಿಳಿಸಿದ. ಮೇಲ್ವಿಚಾರಕ ಆಹಾರ ಕೊಟ್ಟು ಮಾಸೆಟ್ಟೋನ ಕೈಲಿ ಸೌದೆ ಸೀಳಿಸಿಕೊಂಡ ಹಾಗೂ ಕಾಡಿನಿಂದ ಸೌದೆ ಸಹ ತರಿಸಿಕೊಂಡ. ಮಾಸೆಟ್ಟೋ ಇನ್ನೂ ಬಿಸಿರಕ್ತದ ಯುವಕನಾದುದರಿಂದ ಇಂಥ ಕೆಲಸಗಳನ್ನು ಲೀಲಾಜಾಲವಾಗಿ ಮಾಡುತ್ತಿದ್ದ. ಒಂದು ದಿನ ಮಾಸೆಟ್ಟೋನನ್ನು ನೋಡಿದ ಆಶ್ರಮದ ಮುಖ್ಯಾಧಿಕಾರಿಣಿ ಆತ ಯಾರೆಂದು ವಿಚಾರಿಸಿದಳು.

ಅದಕ್ಕೆ ಮೇಲ್ವಿಚಾರಕ, ‘ಆತ ಒಬ್ಬ ಬಡ ಕಿವುಡ ಹಾಗೂ ಮೂಕ. ಇಲ್ಲಿಗೆ ಭಿಕ್ಷೆ ಬೇಡಲು ಬಂದ. ಚೆನ್ನಾಗಿ ದುಡಿಯುತ್ತಾನೆ. ತೋಟದ ಮಾಲಿಯ ಕೆಲಸ ಬರುತ್ತದೇನೋ ವಿಚಾರಿಸುತ್ತೇನೆ. ಬರುವ ಹಾಕಿದ್ದರೆ ಹಾಗೂ ಇಲ್ಲಿಯೇ ಇರಲು ಒಪ್ಪಿದರೆ ಒಳ್ಳೆಯ ಕೆಲಸಗಾರ ಸಿಕ್ಕಂತಾಗುತ್ತದೆ. ಅಲ್ಲದೆ ಅವನು ಕಿವುಡ ಹಾಗೂ ಮೂಕನಾಗಿರುವುದರಿಂದ ನಿಮ್ಮ ಹೆಂಗಸರ ಬಗ್ಗೆ ಅವನ ಕೈಲಿ ಲೇವಡಿ ಮಾಡುವುದೂ ಸಾಧ್ಯವಾಗುವುದಿಲ್ಲ’ ಎಂದ. ‘ಹೌದು, ನೀನು ಹೇಳುವುದು ಸರಿ. ಅವನಿಗೆ ತೋಟದಲ್ಲಿ ಕೆಲಸ ಮಾಡಲು ಬರುತ್ತದೆಯೋ ವಿಚಾರಿಸು. ಅವನಿಗೆ ಹಳೆ ಬಟ್ಟೆ, ಒಂದು ಜೊತೆ ಚಪ್ಪಲಿಯೂ ಕೊಡು

ಸಾಕಷ್ಟು ಆಹಾರವನ್ನೂ ಕೊಡು' ಎಂದು ಮುಖ್ಯಾಧಿಕಾರಿಣಿ. ಅಲ್ಲೇ ಕಸ ಗುಡಿಸುತ್ತಿದ್ದ ಮಾಸೆಟ್ಟೊ ಇದನ್ನೆಲ್ಲಾ ಕೇಳಿಸಿಕೊಂಡು, 'ನೀವು ನನಗೆ ಇಲ್ಲಿ ಇರಲು ಅವಕಾಶ ಕೊಡಿ. ನೋಡುತ್ತಿರಿ, ಹಿಂದೆ ಯಾರು ದುಡಿದಿರಬಾರದು ಆ ರೀತಿ ನಿಮ್ಮ ತೋಟಗಳಲ್ಲಿ ದುಡಿಯುತ್ತೇನೆ' ಎಂದು ಖುಷಿಯಿಂದ ತನ್ನಲ್ಲೇ ಹೇಳಿಕೊಂಡ.

ಮಾಸೆಟ್ಟೊ ಅಲ್ಲೇ ಮಾಲಿಯಾಗಿ ಕೆಲಸಕ್ಕೆ ಸೇರಿಕೊಂಡ. ಸಂನ್ಯಾಸಿನಿಯರು ಹೇಳುವ ಕೆಲಸಗಳನ್ನೆಲ್ಲಾ ಮಾಡುತ್ತಾ ಹೋದ. ದಿನಕಳೆದಂತೆ ಅಲ್ಲಿನ ಯುವ ಸಂನ್ಯಾಸಿನಿಯರು ಅವನು ಕಿವುಡ–ಮೂಕನೆಂದು ತಿಳಿದು ಅವನ ಬಗ್ಗೆ ತಮಾಷೆ ಮಾಡತೊಡಗಿದರು ಹಾಗೂ ಅವನಿಗೇನೂ ಕೇಳಿಸುವುದಿಲ್ಲವೆಂದು ನಂಬಿ ಅವನ ಮುಂದೆ ಅಶ್ಲೀಲವಾಗಿಯೂ ಮಾತನಾಡತೊಡಗಿದರು. ಅದರ ಬಗ್ಗೆ ತಲೆಕೆಡಿಸಿಕೊಳ್ಳದ ಮುಖ್ಯಾಧಿಕಾರಿಣಿ, 'ಆ ದಡ್ಡನಿಗೆ ಮಾತೂ ಇಲ್ಲ, ಬಹುಶಃ ಅವನಿಗೆ ಮುಂಭಾಗದ ಬಾಲವೂ ಇಲ್ಲವೆನ್ನಿಸುತ್ತದೆ' ಎಂದುಕೊಂಡು ಸುಮ್ಮನಿದ್ದಳು.

ಒಂದು ದಿನ ಮಧ್ಯಾಹ್ನ ದುಡಿದು ಆಯಾಸವಾಗಿದ್ದುದರಿಂದ ಮಾಸೆಟ್ಟೊ ಅಲ್ಲೇ ತೋಟದ ಮರದ ನೆರಳಿನಲ್ಲಿ ಮಲಗಿದ್ದ. ಅಲ್ಲಿಗೆ ಬಂದ ಇಬ್ಬರು ಯುವ ಸಂನ್ಯಾಸಿನಿಯರಲ್ಲಿ ಒಬ್ಬಾಕೆ ಅವನನ್ನು ನೋಡುತ್ತಾ ಮತ್ತೊಬ್ಬಾಕೆಗೆ, 'ನೀನು ಯಾರಿಗೂ ಹೇಳುವುದಿಲ್ಲವಾದರೆ ನಿನಗೆ ನನ್ನ ಆಲೋಚನೆ ತಿಳಿಸುತ್ತೇನೆ. ಬಹುಶಃ ಅದು ಇಬ್ಬರಿಗೂ ಖುಷಿಕೊಡಬಹುದು' ಎಂದಳು. ಮತ್ತೊಬ್ಬಾಕೆ 'ಹ್ಞೂಂ'ಗುಟ್ಟಿದ ಮೇಲೆ, 'ನಿನಗೇ ಗೊತ್ತಿದೆ ಈ ಆಶ್ರಮದಲ್ಲಿ ನಾವು ಹೇಗೆ ಬಂಧಿಗಳಾಗಿದ್ದೇವೆ ಎಂದು. ಆ ಮುದುಕ ಮೇಲ್ವಿಚಾರಕ ಹಾಗೂ ಈ ಕಿವುಡ–ಮೂಕನನ್ನು ಬಿಟ್ಟರೆ ಮತ್ತಾವ ಗಂಡಸೂ ಇಲ್ಲಿಲ್ಲ ಹಾಗೂ ಮತ್ತಾವ ಗಂಡಸೂ ಇಲ್ಲಿಗೆ ಬರುವ ಹಾಗಿಲ್ಲ. ನಾನು ಬಹಳ ಹೆಂಗಸರಿಂದ ಕೇಳಿದ್ದೇನೆ, ಪ್ರಪಂಚದ ಎಲ್ಲ ಸುಖಗಳು ಗಂಡಿನಿಂದ ಪಡೆಯುವ ಸುಖದ ಮುಂದೆ ಸೊನ್ನೆ ಎಂದು. ನಮಗೆ ಈ ಕಿವುಡ–ಮೂಕನನ್ನು ಬಿಟ್ಟರೆ ಬೇರೆ ಗತಿಯಿಲ್ಲ. ಆ ಸುಖ ಇವನಿಂದಲೇ ಏಕೆ ಪಡೆಯಬಾರದು ಎಂದು ನನಗನ್ನಿಸಿದೆ. ಅಲ್ಲದೆ ಮೂಕನಾಗಿರುವುದರಿಂದ ಬೇರೆ ಯಾರಿಗೂ ಅವನು ಇದರ ಬಗ್ಗೆ ಹೇಳಲು ಸಾಧ್ಯವಾಗುವುದಿಲ್ಲ. ಅಷ್ಟೇ ಅಲ್ಲ, ಅವನೊಬ್ಬ ದಡ್ಡ; ಮೈ ಬೆಳೆದಿದೆಯೇ ಹೊರತು ತಲೆ ಬೆಳೆದಿಲ್ಲ. ನಿನಗೇನನ್ನಿಸುತ್ತೆ ಹೇಳು' ಎಂದಳು. ಆ ಮತ್ತೊಬ್ಬಾಕೆ ಕೊಂಚ ಹೆದರಿದಂತೆ ಕಂಡು, 'ನೀನು ಏನು ಹೇಳುತ್ತಿದ್ದೀಯೆ? ನಾವು ಬ್ರಹ್ಮಚರ್ಯ ಪಾಲಿಸುತ್ತೇವೆಂದು

ದೇವರ ಮುಂದೆ ಪ್ರಮಾಣ ಮಾಡಿಲ್ಲವೆ? ಎಂದು ಕೇಳಿದಳು. 'ಹೇ, ಬಿಡು. ನಾವು ನೂರಾರು ಪ್ರಮಾಣ ಮಾಡಿದ್ದೇವೆ. ಎಲ್ಲವನ್ನೂ ನಾವೆಲ್ಲಿ


1552ರ ಫ್ರೆಂಚ್ ಆವೃತ್ತಿಯ ಮುದ್ರಣ ಚಿತ್ರ)

ಪರಿಪಾಲಿಸುತ್ತಿದ್ದೇವೆ?' ಎಂದು ಮರುಪ್ರಶ್ನಿಸಿದಳು ಈಕೆ. ಕೊಂಚ ದಾರಿಗೆ ಬಂದ ಆ ಮತ್ತೊಬ್ಬಾಕೆ, 'ನಾವು ಬಸಿರಾದರೆ ಏನು ಮಾಡುವುದು?' ಎಂದು ತನ್ನ ಆತಂಕ ವ್ಯಕ್ತಪಡಿಸಿದಳು. 'ತೊಂದರೆ ಬರುವುದರ ಮೊದಲಿಗೇ ಅದರ ಬಗ್ಗೆ ಯೋಚನೆಯೇಕೆ. ಅದು ಆದಾಗ ನೋಡಿಕೊಳ್ಳೋಣ. ಅಲ್ಲದೆ ಅದನ್ನು ರಹಸ್ಯವಾಗಿಡಲು ಸಾವಿರಾರು ದಾರಿಗಳಿವೆ' ಎಂದು ಈಕೆ ಹೇಳಿ ಮಲಗಿದ್ದ ಮಾಸೆಟ್ಟೋನನ್ನು ಎಬ್ಬಿಸಿ ಕೈ ಹಿಡಿದು ಅಲ್ಲೇ ಇದ್ದ ಅವನ ಪುಟ್ಟ ಗುಡಿಸಲಿಗೆ ಕರೆದೊಯ್ದರು. ಇದೇ ಅವಕಾಶಕ್ಕಾಗಿ ಕಾಯುತ್ತಿದ್ದ ಮಾಸೆಟ್ಟೋನಿಗೆ ಆಮಂತ್ರಣವೇ ಬೇಕಿರಲಿಲ್ಲ. ಒಬ್ಬಾಕೆ ಹೊರಗೆ ಕಾವಲು ಕೂತಳು. ಮತ್ತೊಬ್ಬಾಕೆ ಒಳಗೆ, ಅವನು ದಡ್ಡನೆಂದು ತಿಳಿದು, ಏನೇನು ಮಾಡಬೇಕೆಂದು ತಿಳಿಸಿದಳು. ಅವನು ದಡ್ಡನಂತೆ ನಟಿಸಿ ಆಕೆ ಹೇಳಿದ್ದನ್ನೆಲ್ಲ ಶಿರಸಾವಹಿಸಿ ಮಾಡಿದ. ನಂತರ ಆಕೆ ಹೊರಗೆ ತಾನು ಕಾವಲು ಕೂತು, ಹೊರಗಿದ್ದಾಕೆಯನ್ನು ಒಳಗೆ ಕಳುಹಿಸಿದಳು. ಆ ಯುವ ಸಂನ್ಯಾಸಿನಿಯರಿಗೆ ತಾವು ಊಹಿಸಿದ್ದುದಕ್ಕಿಂತ ಚೆನ್ನಾಗಿದೆಯೆನ್ನಿಸಿ ಮತ್ತೊಮ್ಮೆ ಕಿವುಡ–ಮೂಕನಿಂದ ಸವಾರಿ ಮಾಡಿಸಿಕೊಂಡರು. ಅದಾದ ನಂತರ ಸಮಯ ಸಿಕ್ಕಾಗಲೆಲ್ಲಾ ಅವನೊಟ್ಟಿಗೆ ಕಾಲಕಳೆಯುತ್ತಿದ್ದರು.

ಕ್ರಮೇಣ ಇದು ಬೇರೆ ಸಂನ್ಯಾಸಿನಿಯರಿಗೆ ತಿಳಿದು ಎಲ್ಲರೂ ಸೇರಿ ಆ ಇಬ್ಬರು ದಾರಿತಪ್ಪಿದ ಸಂನ್ಯಾಸಿನಿಯರನ್ನು ಮುಖ್ಯಾಧಿಕಾರಿಣಿಗೆ ಹಿಡಿದುಕೊಡೋಣವೇ ಎಂದು ಆಲೋಚಿಸಿದರು. ನಂತರ ಮನಸ್ಸು ಬದಲಾಯಿಸಿ ಈ ಇಬ್ಬರು ಸಂನ್ಯಾಸಿನಿಯರೊಂದಿಗೆ ಒಪ್ಪಂದವೊಂದು ಮಾಡಿಕೊಂಡು ಮಾಸೆಟ್ಟೋನನ್ನು ಇವರೂ ಹಂಚಿಕೊಂಡರು. ಇದ್ಯಾವುದೂ ಮುಖ್ಯಾಧಿಕಾರಿಣಿಯ ಗಮನಕ್ಕೇ ಬರಲಿಲ್ಲ.



ಒಂದು ದಿನ ಮುಖ್ಯಾಧಿಕಾರಿಣಿ ಹೂದೋಟದಲ್ಲಿ ನಡೆದು ಹೋಗುತ್ತಿದ್ದಾಗ, ಹಗಲು ಹಾಗೂ ರಾತ್ರಿಯೂ ದುಡಿಯುತ್ತಿದ್ದ ಮಾಸೆಟ್ಟೊ ಆಯಾಸದಿಂದ ಮರವೊಂದರ ಕೆಳಗೆ ಮಲಗಿದ್ದ. ಗಾಳಿ ಅವನ ಬಟ್ಟೆಗಳನ್ನೆಲ್ಲಾ ಅಸ್ತವ್ಯಸ್ತಗೊಳಿಸಿದ್ದರೂ ಅದ್ಯಾವುದರ ಪರಿವೆಯೇ ಇಲ್ಲದಂತೆ ನಿದ್ರಿಸುತ್ತಿದ್ದ. ಅವನನ್ನು ಆ ಅವಸ್ಥೆಯಲ್ಲಿ ನೋಡಿದ ಮುಖ್ಯಾಧಿಕಾರಿಣಿಗೆ ಇತರ ಸಂನ್ಯಾಸಿನಿಯರಮತೆ ಆಕೆಯಲ್ಲಿಯೂ ಆಸೆ ಮೂಡಿತು. ಅವನನ್ನು ಎಬ್ಬಿಸಿ ಯಾರಿಗೂ ತಿಳಿಯದಂತೆ ತನ್ನ ಕೋಣೆಗೆ ಕರೆದೊಯ್ದಳು. ಅವಳಿಗೆಷ್ಟು ಸಂತೋಷವಾಯಿತೆಂದರೆ, ಹಲವಾರು ದಿನಗಳವರೆಗೆ ಅವನನ್ನು ಹೊರಗೇ ಬಿಡಲಿಲ್ಲ.

ಇತ್ತ ಇತರ ಸಂನ್ಯಾಸಿನಿಯರು ಮಾಸೆಟ್ಟೊ ಎಲ್ಲಿಯೂ ಕಾಣದೆ ಹೂದೋಟದಲ್ಲಿ ದುಡಿಯಲು ಮಾಲಿ ಬರುತ್ತಿಲ್ಲವೆಂದು ಮೇಲ್ವಿಚಾರಕನಲ್ಲಿ ದೂರಿತ್ತರು. ಮುಖ್ಯಾಧಿಕಾರಿಣಿ ಯಾರಿಗೂ ತಿಳಿಯದಂತೆ ಅವನನ್ನು ಹೊರಗೆ ಕಳುಹಿಸಿದಳಾದರೂ, ಇತರರಿಗಿಂತ ಹೆಚ್ಚಿಗೆ ಅವನನ್ನು ತನ್ನ ಕೋಣೆಗೆ ಬರುವಂತೆ ಮಾಡಿಕೊಂಡಳು. ಹಾಗಾಗಿ ಮಾಸೆಟ್ಟೋನಿಗೆ ಎಲ್ಲರನ್ನೂ ತೃಪ್ತಿಪಡಿಸುವುದು ಕಷ್ಟವಾಯಿತು. ಹೀಗೆ ನಾನು ಕಿವುಡ–ಮೂಕನ ಹಾಗಿದ್ದರೆ ಈ ಕಷ್ಟ ನನಗೆ ತಪ್ಪಿದ್ದಲ್ಲ ಎಂದು ಯೋಚಿಸಿ ಅವರ ಮುಂದೆ ಮಾತನಾಡಿಬಿಡಲು ನಿರ್ಧರಿಸಿದ.

ಒಂದು ದಿನ ಮುಖ್ಯಾಧಿಕಾರಿಣಿಯ ಜೊತೆಗಿದ್ದಾಗ, 'ಒಂದು ಹುಂಜ ಹತ್ತು ಕೋಳಿಗಳಿಗೆ ಸಾಕು, ಆದರೆ ಹತ್ತು ಜನ ಗಂಡಸರು ಒಂದು ಹೆಣ್ಣನ್ನು ತೃಪ್ತಿಪಡಿಸಲಾರರು ಎಂದು ಕೇಳಿದ್ದೇನೆ. ಇಲ್ಲಿ ನಾನು ಒಂಬತ್ತು ಹೆಂಗಸರನ್ನು ತೃಪ್ತಿಪಡಿಸಬೇಕಾಗಿದೆ. ಇಷ್ಟು ದಿನ ಹೇಗೋ ನಡೆಯಿತು. ಇದನ್ನು ಹೀಗೇ ಮುಂದುವರಿಸಲಾರದ ಪರಿಸ್ಥಿತಿ ನಾನು ತಲುಪಿಬಿಟ್ಟಿದ್ದೇನೆ. ನನಗೆ ಸಾಕುಸಾಕಾಗಿದೆ. ನನ್ನನ್ನು ಹೋಗಲು ಬಿಟ್ಟುಬಿಡಿ ಅಥವಾ ಬೇರೆ ದಾರಿ ಹುಡುಕಿ' ಎಂದ.

ಈ ಕಿವುಡ–ಮೂಕ ಮಾತನಾಡಿದ್ದು ಕೇಳಿ ಆವಾಕ್ಕಾದ ಮುಖ್ಯಾಧಿಕಾರಿಣಿ, 'ಏನಿದು? ನೀನು ಮೂಕನೆಂದು ನಾನು ತಿಳಿದಿದ್ದೆ!' ಎಂದಳು ಆಶ್ಚರ್ಯದಿಂದ. 'ಹೌದು, ನಾನು ಮೂಕನಾಗಿದ್ದೆ, ಆದರೆ ನಾನು ಹುಟ್ಟು ಮೂಕನಲ್ಲ. ಯಾವುದೋ ಖಾಯಿಲೆಯಿಂದ ನನ್ನ ಮಾತು ಹೋಗಿತ್ತು. ಈ ರಾತ್ರಿ ನನಗೆ ಮಾತು ಮರಳಿಬಂದಿದೆ. ಅದಕ್ಕಾಗಿ ಆ ದೇವರನ್ನು ನಾನು ವಂದಿಸಬೇಕು' ಎಂದ ಮಾಸೆಟ್ಟೊ. ಅವನ ಮಾತು ನಂಬಿದ ಮುಖ್ಯಾಧಿಕಾರಿಣಿ, 'ಒಂಬತ್ತು ಹೆಂಗಸರನ್ನು ತೃಪ್ತಿಪಡಿಸಬೇಕಾಗಿದೆ' ಎಂದ ಅವನ ಮಾತಿನ ಅರ್ಥವೇನೆಂದು ಕೇಳಿದಳು. ಮಾಸೆಟ್ಟೊ ಎಲ್ಲವನ್ನೂ ವಿವರವಾಗಿ ಹೇಳಿದ. ಪ್ರತಿಯೊಬ್ಬ ಸಂನ್ಯಾಸಿನಿಗೂ ತನಗಿಂತ ಹೆಚ್ಚಿಗೇ ತಿಳಿದಿದೆಯೆಂದು ಮುಖ್ಯಾಧಿಕಾರಿಣಿಗೆ ಅನ್ನಿಸಿತು. ಮಾಸೆಟ್ಟೋನನ್ನು ಹೋಗಲು ಬಿಟ್ಟರೆ ಆಶ್ರಮದ ಸಂನ್ಯಾಸಿನಿಯರ ಬಗ್ಗೆ ಎಲ್ಲರಿಗೂ ಹೇಳಿಕೊಳ್ಳಬಹುದೆಂದು ಹೆದರಿ ಅವನನ್ನು ಅಲ್ಲೇ ಇರಿಸಿಕೊಳ್ಳಬೇಕೆಂದು ತೀರ್ಮಾನಿಸಿದಳು. ಎಲ್ಲ ಸಂನ್ಯಾಸಿನಿಯರನ್ನು ಕರೆಯಿಸಿ, ಅವರೊಂದಿಗೆ ಚರ್ಚಿಸಿ ಮಾಸೆಟ್ಟೋನಿಗೆ ಆಯಾಸವಾಗದಂತೆ ಅವನಿಂದ ದುಡಿಸಿಕೊಳ್ಳಬೇಕೆಂಬ ತೀರ್ಮಾನಕ್ಕೆ ಬಂದರು. ಅಲ್ಲದೆ ತಮ್ಮೆಲ್ಲರ ಪ್ರಾರ್ಥನೆಯಿಂದಲೇ ಮಾಸೆಟ್ಟೋನ ಕಿವುಡು–ಮೂಕತನ ವಾಸಿಯಾಗಿದೆಯೆಂದು ಊರಿನಲ್ಲೆಲ್ಲಾ ಪ್ರಚುರಪಡಿಸಿದರು.

ಹೆಗಲಿಗೆ ಕೊಡಲಿಯೇರಿಸಿ ಬರಿಗೈಲಿ ಬಂದ ಮಾಸೆಟ್ಟೊ ಅಲ್ಲೇ ಮೇಲ್ವಿಚಾರಕನಾಗಿ ಕೊನೆಗೆ ಮುದುಕನಾಗಿ ತನ್ನ ಸ್ವಂತ ಊರಿಗೆ ಹಿಂದಿರುಗಿದಾಗ ಸಾಕಷ್ಟು ಹಣವಂತನೂ, ಹಲವಾರು ಮರಿಸಂನ್ಯಾಸಿಗಳ ತಂದೆಯೂ ಆಗಿದ್ದನು.

ಕಿಲಾಡಿ ಸೇವಕ

ಲೊಂಬಾರ್ಡ ರಾಜ್ಯದ ರಾಜ ಎಜಿಲುಲ್ಫನಿಗೆ ಟ್ಯೂಡೆಲಿಂಗ ಎನ್ನುವ ಸುರಸುಂದರಿ ರಾಣಿಯಿದ್ದಳು. ಎಜಿಲುಲ್ಫ ವೀರನೂ, ರಾಜ್ಯಭಾರದಲ್ಲಿ ನುರಿತವನೂ ಆಗಿದ್ದುದರಿಂದ ಲೊಂಬಾರ್ಡ ಅತ್ಯಂತ ಸುಭಿಕ್ಷ ರಾಜ್ಯವಾಗಿತ್ತು ಹಾಗೂ ಪ್ರಜೆಗಳು ಶಾಂತಿಯುತ ಬಾಳುವೆ ನಡೆಸಿದ್ದರು.

ರಾಣಿಗೆ ಹಲವಾರು ಸೇವಕರಿದ್ದು ಅದರಲ್ಲಿ ಆಕೆಯ ಕುದುರೆಯ ಲಾಯದಲ್ಲಿ ರಾಜನ ಹಾಗೆಯೇ ದಷ್ಟಪುಷ್ಟ ಮೈಕಟ್ಟಿನ, ಆದರೆ ಕೆಳಜಾತಿಯ ಒಬ್ಬ ಸೇವಕನಿದ್ದ. ಆತನಿಗೆ ತನ್ನ ಹುದ್ದೆ ಅಂತಸ್ತು ಮೀರಿ ರಾಣಿ ಟ್ಯೂಡೆಲಿಂಗಳ ಮೇಲೆ ಅತೀವ ವ್ಯಾಮೋಹವಿತ್ತು. ಆದರೆ ಅದನ್ನು ಅವನು ಯಾರ ಬಳಿಯೂ ವ್ಯಕ್ತಪಡಿಸಿ ಕೊಂಡಿರಲಿಲ್ಲ. ಒಂದಲ್ಲ ಒಂದು ದಿನ ಸುರಸುಂದರಿ ರಾಣಿಯೊಡನೆ ಮಲಗುವ ಅವಕಾಶ ಸಿಕ್ಕೇಸಿಗುತ್ತದೆ ಎನ್ನುವ ಕನಸುಕಾಣುತ್ತಾ ಕಾಲತಳ್ಳುತ್ತಿದ್ದ. ಆ ಅವಕಾಶ ಸಿಗುವ ಸಾಧ್ಯತೆ ತೀರಾ ಕಡಿಮೆಯಿದ್ದರೂ ಸಹ ತನ್ನ ಉನ್ನತ ಮಟ್ಟದ ಮಹದಾಸೆಯಿಂದ ತನಗೇ ಹೆಮ್ಮೆಯೆನ್ನಿಸುತ್ತಿತ್ತು. ರಾಣಿಯ ಉಪಚಾರಕ್ಕೆ ಅವಕಾಶ ಸಿಕ್ಕಾಗಲೆಲ್ಲಾ ತಾನೇ ಮುಂದೆ ಹೋಗಿ ಅವಳ ಸೇವೆ ಮಾಡುತ್ತಿದ್ದ. ರಾಣಿಗೆ ಕುದುರೆ ಸವಾರಿ ಮಾಡಬೇಕಾದಾಗಲೆಲ್ಲ ತನ್ನದೇ ಕುದುರೆ ಕೊಂಡೊಯ್ದು, ರಾಣಿ ಹತ್ತುವಾಗ ಇಳಿಯುವಾಗ ಆಕೆಯ ಬಟ್ಟೆ ತನ್ನ ಮೈಗೆ ತಗುಲಿದರೆ ಅದರಿಂದಲೇ ಪುಳಕಿತನಾಗುತ್ತಿದ್ದ. ಅವನ ಆಸೆ ಈಡೇರುವ ಸಾಧ್ಯತೆ ಕಡೆಮೆಯಾದಂತೆಲ್ಲಾ ಅವನ ಪ್ರೀತಿ, ವ್ಯಾಮೋಹ ಬೆಳೆಯುತ್ತಾ ಹೋಯಿತು. ಆ ವ್ಯಾಮೋಹದ ದಳ್ಳುರಿ ತಡೆಯಲಾಗದೆ ಎಷ್ಟೋ ಸಾರಿ ಆತ್ಮಹತ್ಯೆ ಮಾಡಿಕೊಳ್ಳಲೂ ಆಲೋಚಿಸಿದ್ದ ಹಾಗೂ ತಾನು ಸತ್ತರೂ ಅದು ರಾಣಿಯ ಮೇಲಿನ ಪ್ರೀತಿ ವ್ಯಾಮೋಹದಿಂದಾಗಿ ಎಂಬುದು ಆಕೆಗೆ ತಿಳಿಯಬೇಕೆಂದುಕೊಂಡಿದ್ದ. ರಾಣಿಯೊಂದಿಗೆ ಮಲಗಬೇಕೆನ್ನುವ ತನ್ನ ಮಹದಾಸೆಯನ್ನು ಆಕೆಯಲ್ಲಿ ವ್ಯಕ್ತಪಡಿಸಲೇ ಅಥವಾ ಪತ್ರ ಬರೆದು ತಿಳಿಸಲೇ

ಎಂದೂ ಸಹ ಆಲೋಚಿಸಿದ. ಅದರಿಂದಾಗಿ ತನಗೆ ಕೇಡು ತಪ್ಪಿದ್ದಲ್ಲ ಎಂದುಕೊಂಡ ಅವನಿಗೆ ರಾಣಿಯನ್ನು ಮರೆಯಲು ಸಾಧ್ಯವಾಗಲೇ ಇಲ್ಲ. ರಾಣಿಯ ನೆನಪು ಅವನನ್ನು ಹಗಲೂ ರಾತ್ರಿ ಕಾಡತೊಡಗಿತು. ಹೇಗಾದರೂ, ಕಪಟದಿಂದಾದರೂ ಸರಿ ಆಕೆಯೊಂದಿಗೆ ಮಲಗಬೇಕೆಂಬ ತೀರ್ಮಾನಕ್ಕೆ ಬಂದ. ಸಿಕ್ಕಿಹಾಕಿಕೊಂಡು ತನ್ನ ಪ್ರಾಣ ಹೋದರೂ ಪರವಾಗಿಲ್ಲ, ಆದರೆ ಸಾಯುವ ಮೊದಲು ತನ್ನ ಆಸೆ ಈಡೇರಿಸಿಕೊಳ್ಳಬೇಕೆಂದು ನಿರ್ಧರಿಸಿದ. ಕಪಟದಿಂದ, ಎಂದರೆ ತಾನು ರಾಜನಂತೆ ವೇಷ ಧರಿಸಿ ರಾಣಿಯ ಬಳಿ ಹೋದರೆ ಮಾತ್ರ ಅದು ಸಾಧ್ಯ ಎಂದುಕೊಂಡ ಅವನು ರಾಜನ ಹಾಗೂ ರಾಣಿಯ ಕೊಠಡಿಗಳ ನಡುವೆ ಇದ್ದ ನಡುಮನೆಯಲ್ಲಿ ಅವಿತು ಕೂತು ದಿನಾ ರಾತ್ರಿ ರಾಜನ ಚಲನವಲನ ಗಮನಿಸತೊಡಗಿದ.

ಅವನು ಗಮನಿಸಿದಂತೆ, ರಾಜ ಪ್ರತಿ ರಾತ್ರಿ ರಾಣಿಯ ಕೊಠಡಿಗೆ ಹೋಗುತ್ತಿರಲಿಲ್ಲ. ಆದರೆ, ಹೋಗುವಾಗ ಒಂದು ಹೊದಿಕೆ ಹೊದ್ದಿರುತ್ತಿದ್ದ, ಒಂದು ಕೈಲಿ ಸಣ್ಣ ದೀಪವೊಂದನ್ನು ಹಿಡಿದು ಹಾಗೂ ಮತ್ತೊಂದು ಕೈಯಲ್ಲಿ ಒಂದು ಸಣ್ಣ ಕೋಲೊಂದನ್ನು ಹಿಡಿದು ಹೋಗುತ್ತಿದ್ದ. ಏನೂ ಮಾತಾಡದೆ ರಾಜ ಆ ಕೋಲಿನಿಂದ ರಾಣಿಯ ಕೊಠಡಿಯ ಬಾಗಿಲು ತಟ್ಟುತ್ತಿದ್ದ. ಕೂಡಲೇ ಕೊಠಡಿಯ ಬಾಗಿಲು ತೆರೆದುಕೊಳ್ಳುತ್ತಿತ್ತು ಹಾಗೂ ರಾಜ ಒಳಹೋದ ಕೂಡಲೇ ಬಾಗಿಲು ಹಾಕಿಕೊಳ್ಳುತ್ತಿತ್ತು. ಇದನ್ನೆಲ್ಲಾ ಗಮನಿಸಿದ ಸೇವಕ ತಾನೂ ರಾಜನಂತೆ ವೇಷಧರಿಸಿ ಹೋದರೆ ತನ್ನ ಆಸೆ ಈಡೇರಿಸಿಕೊಳ್ಳಬಹುದು ಎಂದುಕೊಂಡ.

ಅದರಂತೆಯೇ ರಾಜನಂತಹುದೇ ಹೊದಿಕೆ, ಸಣ್ಣ ದೀಪ ಹಾಗೂ ಕೋಲೊಂದನ್ನು ಸಂಪಾದಿಸಿ, ತನ್ನಲ್ಲಿನ ಕುದುರೆಲದ್ದಿ ವಾಸನೆ ಹೋಗಲೆಂದು ಚೆನ್ನಾಗಿ ಸ್ನಾನಮಾಡಿ ರಾಜನರಮನೆಯ ನಡುಮನೆಯಲ್ಲಿ ರಾತ್ರಿ ಅಡಗಿ ಕಾಯುತ್ತಾ ಕೂತ. ರಾತ್ರಿ ಎಲ್ಲರೂ ಮಲಗಿದ ಮೇಲೆ, ಸಾಮಾನ್ಯವಾಗಿ ರಾಜ ಹೋಗುತ್ತಿದ್ದ ಸಮಯಕ್ಕಿಂತ ಮೊದಲೇ ದೀಪ ಹೊತ್ತಿಸಿ, ಹೊದಿಕೆ ಹೊದ್ದು ರಾಣಿಯ ಕೊಠಡಿಯೆಡೆಗೆ ನಡೆದ. ತನ್ನಲ್ಲಿದ್ದ ಕೋಲಿನಿಂದ ಬಾಗಿಲು ತಟ್ಟಿದ. ನಿದ್ದೆಗಣ್ಣಿನಲ್ಲಿದ್ದ ರಾಣಿಯ ಆಪ್ತ ಸೇವಕಿ ಬಾಗಿಲು ತೆರೆದು ರಾಜನೆಂದೇ ತಿಳಿದು ಸೇವಕನ ಹೊದಿಕೆ, ದೀಪ ತೆಗೆದು ಬದಿಗಿರಿಸಿದಳು. ಆತ ಮಾತನಾಡದೆ ಮಬ್ಬುಗತ್ತಲಿನಲ್ಲಿ ನಿದ್ದೆ ಮಾಡುತ್ತಿದ್ದ ರಾಣಿಯ ಹಾಸಿಗೆ ಸೇರಿದ. ರಾಜ ಸಿಟ್ಟುಗೊಂಡಾಗ ಯಾರೊಂದಿಗೂ ಮಾತನಾಡುತ್ತಿರಲಿಲ್ಲ ಹಾಗೂ ಯಾರ ಮಾತೂ ಕೇಳುತ್ತಿರಲಿಲ್ಲ. ಆದ್ದರಿಂದ ತಾನು ಕೋಪಗೊಂಡವನಂತೆ ನಟಿಸುತ್ತ ರಾಣಿಯನ್ನು ಬಿಗಿದಪ್ಪಿ ತನ್ನ ಹಲವಾರು ವರುಷಗಳ ಆಸೆ ಆಕಾಂಕ್ಷೆಗಳನ್ನು



ಹಲವಾರು ಬಾರಿ ತೀರಿಸಿಕೊಂಡ. 'ರಾಜ್ಯಭಾರದ ಯಾವುದೋ ಸಿಟ್ಟನ್ನು ರಾಜ ಈ ರೀತಿ ತೀರಿಸಿಕೊಳ್ಳುತ್ತಿದ್ದಾನೆ. ಇರಲಿ, ಚೆನ್ನಾಗಿಯೇ ಇದೆ' ಎಂದುಕೊಂಡ ರಾಣಿ ಒಳಗೊಳಗೇ ಸಂತೋಷ ಪಟ್ಟಳು. ಸೇವಕನಿಗೆ ರಾಣಿಯನ್ನು ಬಿಟ್ಟುಹೋಗಲು ಮನಸ್ಸಿಲ್ಲದಿದ್ದರೂ ಸಹ, ಬಿಟ್ಟುಹೋಗದಿದ್ದಲ್ಲಿ ಸತ್ಯ ಬಯಲಾಗಿ ಇಷ್ಟು ಹೊತ್ತೂ ಪಡೆದ ಸುಖವೆಲ್ಲಾ ಮಣ್ಣುಪಾಲಾಗುವುದೆಂದು ಹೆದರಿ ಒಲ್ಲದ ಮನಸ್ಸಿನಿಂದ ಎದ್ದು ಹೊದಿಕೆ ಹೊದ್ದು, ದೀಪ, ಕೋಲು ಹಿಡಿದು ಸದ್ದಿಲ್ಲದೆ ಹೋಗಿ ತನ್ನ ಕುದುರೆ ಲಾಯದಲ್ಲಿ ಮಲಗಿದ.

ಸೇವಕ ಅತ್ತ ಹೋದ ಸ್ವಲ್ಪ ಸಮಯದ ನಂತರ, ರಾಜ ಮಾಮೂಲಿನಂತೆ ರಾಣಿಯ ಕೊಠಡಿಗೆ ಆಗಮಿಸಿದ. ಸಂತೋಷದ ಬಳಲಿಕೆಯಿಂದ ಮಲಗಿದ್ದ ರಾಣಿಯನ್ನು ಬಿಗಿದಪ್ಪಿ ಸಂತೋಷದಿಂದ ಮಾತನಾಡಿಸಿದ. ರಾಜ ಸಂತೋಷದಿಂದಿರುವುದನ್ನು ಕಂಡು ಧೈರ್ಯ ತಂದುಕೊಂಡು ರಾಣಿ, 'ಏನಿದು ಮಹಾರಾಜ, ಎಂದಿಲ್ಲದ ಹಾಗೆ ಸುಖಸಂತೋಷ ಪಡೆದು ಕೆಲಕ್ಷಣಗಳ ಹಿಂದಷ್ಟೆ ಇಲ್ಲಿಂದ ಹೋದಿರಿ. ಆಗಲೇ ವಾಪಸ್ಸು ಬಂದು ಮತ್ತೆ ಪ್ರಾರಂಭಿಸುತ್ತಿದ್ದೀರಿ! ನಿಮ್ಮ ಆರೋಗ್ಯದ ಬಗ್ಗೆ ಎಚ್ಚರವಿರಲಿ ಮಹಾರಾಜ' ಎಂದಳು. ರಾಣಿಯ ಮಾತು ಕೇಳಿ ಆವಾಕ್ಕಾದ ರಾಜನಿಗೆ ಇಲ್ಲಿ ಏನೋ ನಡೆಯಬಾರದ್ದು ನಡೆದುಹೋಗಿದೆ ಎಂದು ಕ್ಷಣದಲ್ಲಿ ಅರಿವಾಯಿತು. 'ಯಾವನೋ ಧೂರ್ತ ನನ್ನ ಹಾಗೆ ವೇಷ ಧರಿಸಿ, ನನ್ನ ಹಾಗೆಯೇ ನಟಿಸಿ ರಾಣಿಯ ಬಳಿ ಬಂದು ಮಲಗಿ ಹೋಗಿದ್ದಾನೆ. ಅವನ್ಯಾವನೋ ಮಹಾ ಚತುರನಿರಬೇಕು' ಎಂದುಕೊಂಡ ರಾಜ,

'ಯಾರವನು? ನಾನಂತೂ ಬಂದೇ ಇರಲಿಲ್ಲ! ಬಂದವನು ಯಾರು? ಅವನ್ಹೇಗೆ ಒಳಗೆ ಬಂದ?' ಎಂದು ಮೂರ್ಖನಂತೆ ಕೇಳಲಿಲ್ಲ. ಆ ರೀತಿ ಕೇಳಿದ್ದಿದ್ದರೆ ರಾಣಿಗೆ ಅತೀವ ದುಃಖವಾಗುತ್ತಿತ್ತೇನೋ; ಅಲ್ಲದೆ ಅವನೊಟ್ಟಿಗಿನ ಅನುಭವ ತುಂಬಾ ಚೆನ್ನಾಗಿದ್ದಿದ್ದಲ್ಲಿ, ರಾಣಿ ಮುಂದೆ ಅಂಥದೇ ಸುಖ ಅರಸಿಹೋದರೆ ಕಷ್ಟ ಎಂದು ಆಲೋಚಿಸಿದ ರಾಜ ಸುಮ್ಮನಾದ. ತಕ್ಷಣ ಸಿಟ್ಟುಗೊಂಡವನಂತೆ ನಟಿಸಿ ಮುಖದಲ್ಲಿ ರಾಜಗಾಂಭೀರ್ಯ ತಂದುಕೊಂಡು, 'ಏನು? ಮತ್ತೊಮ್ಮೆ ನಿನ್ನನ್ನು ಅನುಭವಿಸುವ ತಾಕತ್ತು ನನ್ನಲಿಲ್ಲವೆಂದು ತಿಳಿದಿದ್ದೀಯೇನು?' ಎಂದ. ರಾಜನ ಸಿಟ್ಟು ಕಂಡು ಬೆದರಿದ ರಾಣಿ, 'ಹಾಗಲ್ಲ ಮಹಾರಾಜ, ನಿಮ್ಮ ಆರೋಗ್ಯದ ಬಗ್ಗೆ ಎಚ್ಚರವಿರಲಿ ಎಂದಷ್ಟೇ ನಾನು ಕೇಳಿದ್ದು' ಎಂದಳು. 'ಆಯಿತು, ನನ್ನ ಆರೋಗ್ಯದ ದೃಷ್ಟಿಯಿಂದ ನಿನ್ನ ಮಾತು ಕೇಳಿ ಆಯಾಸಮಾಡಿಕೊಳ್ಳದೆ ಈಗ ಹೋಗುತ್ತೇನೆ' ಎಂದು ಹೇಳಿ ರಾಜ ಎದ್ದು ಹೊರಟ.

ಹೊರಗೆ ಬಂದ ರಾಜ ಸಿಟ್ಟಿನಿಂದ ಕುದಿಯುತ್ತ, 'ಆ ಧೂರ್ತನನ್ನು ಕಂಡು ಹಿಡಿದೇ ಹಿಡಿಯುತ್ತೇನೆ. ಅವನ್ಯಾರೋ ಅರಮನೆಯವನೇ ಆಗಿರಬೇಕು. ಅವನು ಹೊರಗೆ ತಪ್ಪಿಸಿಕೊಂಡು ಹೋಗಲು ಆಗಿರುವುದಿಲ್ಲ. ಅಲ್ಲದೆ ಅವನು ಈಗಷ್ಟೇ ರಾಣಿಯ ಬಳಿಯಿಂದ ಹೋಗಿರುವುದರಿಂದ ಅವನ ಎದೆಬಡಿತ ಇನ್ನೂ ಜೋರಾಗಿರುತ್ತದೆ. ಮೊದಲಿಗೆ ಹತ್ತಿರದಲ್ಲೇ ಮಲಗಿರುವ ಸೇವಕರನ್ನು ಪರೀಕ್ಷಿಸೋಣವೆಂದು ಸದ್ದುಮಾಡದೆ ಮಲಗಿದ್ದ ಸೇವಕರ ಬಳಿ ಹೋಗಿ ಅವರ ಎದೆಯ ಮೇಲೆ ಕೈಯಿಟ್ಟು ಅವರ ಎದೆ ಬಡಿತ ಪರೀಕ್ಷಿಸತೊಡಗಿದ. ರಾಣಿಯೊಂದಿಗೆ ಸ್ವರ್ಗಸುಖ ಕಂಡಿದ್ದ ಸೇವಕನೊಬ್ಬನನ್ನು ಬಿಟ್ಟು ಎಲ್ಲರೂ ಆರಾಮಾಗಿ ಮಲಗಿ ನಿದ್ರಿಸುತ್ತಿದ್ದರು. ರಾಜ ತನ್ನ ಲಾಯದೊಳಗೆ ಬಂದುದನ್ನು ಕಂಡ ಈ ಸೇವಕ, ರಾಜ ತನ್ನನ್ನು ಕೊಲ್ಲಲೇ ಬಂದಿದ್ದಾನೆಂದು ಹೆದರಿದ. ಆಯಾಸದಿಂದಾಗಿ ಮೊದಲೇ ತೀವ್ರವಾಗಿದ್ದ ಅವನ ಎದೆಬಡಿತ ಈಗ ರಾಜನನ್ನು ಕಂಡು ಹೆದರಿಕೆಯಿಂದ ಢಮರಿನ ಹಾಗೆ ಹೊಡೆದುಕೊಳ್ಳತೊಡಗಿತು. ಆದರೆ ರಾಜನ ಬಳಿ ಯಾವುದೇ ಆಯುಧ ಇಲ್ಲದಿದ್ದುದು ಕಂಡು ಧೈರ್ಯ ತಂದುಕೊಂಡು ನಿದ್ದೆ ಹೋಗುವವನಂತೆ ನಟಿಸಿದ. ರಾಜನಿಗೆ ಈ ಸೇವಕನ ಎದೆ ಮುಟ್ಟಿದ ಕೂಡಲೇ ಅವನೇ ಕಳ್ಳನೆಂಬುದು ತಿಳಿಯಿತು. 'ನನ್ನ ಪ್ರಿಯ ಪತ್ನಿಯಾದ ಮಹಾರಾಣಿಯೊಂದಿಗೇ ಮಲಗಿ ಇಲ್ಲಿ ಬಂದು ಮಳ್ಳನಂತೆ ಮಲಗಿದ್ದಾನೆ' ಎಂದು ಕ್ರೋಧದಿಂದ ಹಲ್ಲುಕಡಿದ ರಾಜ ಮುಂಜಾನೆ ಅವನನ್ನು ಗುರುತು ಹಿಡಿಯಲು ಸಾಧ್ಯವಾಗಲೆಂದು ತನ್ನಲಿದ್ದ ಚಾಕುವಿನಿಂದ

ಅವನ ತಲೆಯ ಒಂದು ಭಾಗದ ಕೂದಲನ್ನು ಕತ್ತರಿಸಿ ಸದ್ದಾಗದಂತೆ ತನ್ನ ಕೋಣೆಗೆ ಹಿಂದಿರುಗಿದ.

ಆದರೆ ಕಪಟ ಸೇವಕನಿಗೆ ರಾಜನ ಯೋಜನೆ ಅರ್ಥವಾಗಿ ಕೂಡಲೇ, ತನ್ನಲಿದ್ದ ಕುದುರೆಯ ಕೂದಲು ಕತ್ತರಿಸುವ ಕತ್ತರಿಯಿಂದ ನಿದ್ರಿಸುತ್ತಿದ್ದ ಎಲ್ಲ ಸೇವಕರ ಕೂದಲನ್ನು ರಾಜ ತನಗೆ ಕತ್ತರಿಸಿದ ರೀತಿಯಲ್ಲಿಯೇ ಕತ್ತರಿಸಿದ.

ಮರುದಿನ ಬೆಳಿಗ್ಗೆ ರಾಜ ಎದ್ದ ಕೂಡಲೇ ಎಲ್ಲಾ ಅರಮನೆಯ ಸೇವಕರು ಬಂದು ಸಾಲಾಗಿ ನಿಲ್ಲುವಂತೆ ಆಜ್ಞಾಪಿಸಿದ. ಎಲ್ಲ ಸೇವಕರೂ ಬಂದು ನಿಂತರು. ಎಲ್ಲರ ಕೂದಲೂ ಒಂದೇ ರೀತಿ ಕತ್ತರಿಸಿದ್ದುದನ್ನು ಕಂಡ ರಾಜ ನಿಬ್ಬೆರಗಾಗಿಹೋದ. 'ಅವನ್ಯಾರೋ ಕಳ್ಳ ಮಹಾಚತುರನಿದ್ದಾನೆ. ಎಲ್ಲರಿಗೂ ವಿಷಯ ತಿಳಿಸಿ ಅವನನ್ನು ಹುಡಕಲೇಬೇಕೆಂಬ ಛಲ ಮಾಡಿದರೆ ತನ್ನ ಹಾಗೂ ರಾಣಿಯ ಮಾನವೇ ಹೋಗುವುದೆಂದು ಆಲೋಚಿಸಿದ ರಾಜ ಆ ಸೇವಕರನ್ನುದ್ದೇಶಿಸಿ, 'ನಿನ್ನೆ ಮಾಡಬಾರದ ತಪ್ಪು ಮಾಡಿದವನೊಬ್ಬ ನಿಮ್ಮಲ್ಲಿದ್ದಾನೆ. ಆ ತಪ್ಪು ಏನೆಂಬುದು ಅವನಿಗೆ ಗೊತ್ತು. ಆದರೆ ಅವನು ಇನ್ನು ಮುಂದೆ ಅಂತಹ ತಪ್ಪು ಎಂದಿಗೂ ಮಾಡದಿರಲಿ' ಎಂದು ಹೇಳಿ ಅವರನ್ನು ತಮ್ಮ ತಮ್ಮ ಕೆಲಸಗಳಿಗೆ ವಾಪಸ್ಸು ಕಳುಹಿಸಿದ. ಆ ಒಬ್ಬ ಸೇವಕನ ಹೊರತು ಇತರ ಸೇವಕರಿಗೆ ರಾಜನ ಮಾತು ಅರ್ಥವಾಗಲಿಲ್ಲ. ಮುಖಮುಖ ನೋಡಿಕೊಂಡು ಹೊರಟರು. ಕಪಟ ಸೇವಕ ಸಹ ಅದೇ ರೀತಿ ಸಭ್ಯನಂತೆ ನಟಿಸಿ ಹಿಂದಿರುಗಿದ. ತನ್ನ ಮಧ್ಯರಾತ್ರಿಯ ಸಾಹಸ ಯಾರಲ್ಲಿಯೂ ಹೇಳಿಕೊಳ್ಳಲಿಲ್ಲ ಹಾಗೂ ತನ್ನ ಆಸೆ ಈಡೇರಿದ್ದುದರಿಂದ ಮತ್ತೆಂದೂ ಅಂತಹ ಸಾಹಸಕ್ಕೆ ಕೈ ಹಾಕಲಿಲ್ಲ.

ಗಂಡನಿಗೆ ನರಕ, ಸಂನ್ಯಾಸಿಗೆ ಸ್ವರ್ಗ

ಟಸ್ಕನಿ ಎಂಬಲ್ಲಿ ಆಶ್ರಮವೊಂದಿದ್ದು ಅಲ್ಲಿಗೆ ಒಬ್ಬ ಸಂನ್ಯಾಸಿ ಮುಖ್ಯಾಧಿಕಾರಿಯಾಗಿ ಬಂದನು. ಕಚ್ಚೆಹರುಕ ಎನ್ನುವುದನ್ನು ಬಿಟ್ಟರೆ ಆತ ಮಿಕ್ಕೆಲ್ಲ ವಿಷಯಗಳಲ್ಲಿ ಪವಿತ್ರಾತ್ಮವಾಗಿದ್ದನು. ಆತ ಅತ್ಯಂತ ಚಾಣಾಕ್ಷನೂ ಆಗಿದ್ದುದರಿಂದ ಯಾರಿಗೂ ತಿಳಿಯದೆ, ಗುಮಾನಿ ಬರದೆ ಹೆಂಗಸರನ್ನು ಬಲೆಗೆ ಹಾಕಿಕೊಳ್ಳುವ ಕಲೆಯಲ್ಲಿ ನುರಿತಿದ್ದನು. ಜನರೆಲ್ಲಾ ಆತನನ್ನು ಅತ್ಯಂತ ಪೂಜ್ಯ ಭಾವನೆಯಿಂದ ಗೌರವಿಸುತ್ತಿದ್ದರು.

ಆ ಆಶ್ರಮದ ಬಳಿಯಲ್ಲೇ ಫೆರೊಂಡೊ ಎಂಬ ಧಡೂತಿ ಶ್ರೀಮಂತ ರೈತನಿದ್ದನು. ಫೆರೊಂಡೋನ ದಡ್ಡತನ ಆ ಪ್ರಾಂತ್ಯದಲ್ಲೆಲ್ಲ ಪ್ರಖ್ಯಾತಿಯಾಗಿದ್ದಿತು. ಸಂನ್ಯಾಸಿಗೆ ಫೆರೊಂಡೊ ಗೆಳೆಯನಾಗಿದ್ದ ಹಾಗೂ ಆತನ ದಡ್ಡತನವನ್ನು ಲೇವಡಿ ಮಾಡುವುದು ಸಂನ್ಯಾಸಿಗೆ ಇಷ್ಟದ ಕೆಲಸವಾಗಿತ್ತು. ಫೆರೊಂಡೋನಿಗೆ ಅತ್ಯಂತ ಸುಂದರಿ ಹೆಂಡತಿಯಿದ್ದು ಆಕೆಯನ್ನು ನೋಡಿದಾಗಿನಿಂದ ಸಂನ್ಯಾಸಿ ಅವಳ ವ್ಯಾಮೋಹದಲ್ಲಿ ಬಿದ್ದು ಅವಳನ್ನು ಹೇಗಾದರೂ ಹಾಸಿಗೆಗೆ ಎಳೆದುಕೊಳ್ಳಬೇಕೆಂದು ಸಂಚು ಹೂಡತೊಡಗಿದ. ಫೆರೊಂಡೊ ದಡ್ಡನಾಗಿದ್ದರೂ ಸಹ ಹೆಂಡತಿಯ ವಿಷಯದಲ್ಲಿ ತುಂಬಾ ಎಚ್ಚರಿಕೆಯಿಂದ ಇದ್ದು, ಯಾರೂ ಅವಳ ಮೇಲೆ ಕಣ್ಣು ಹಾಕದಂತೆ ಹದ್ದಿನ ಕಣ್ಣಿನಿಂದ ಅವಳನ್ನು ಕಾಯುತ್ತಿದ್ದ.

ಒಂದು ದಿನ ಸಂನ್ಯಾಸಿ ಫೆರೊಂಡೊ ಹಾಗೂ ಆತನ ಪತ್ನಿಯನ್ನು ತನ್ನ ಆಶ್ರಮಕ್ಕೆ ಆಮಂತ್ರಿಸಿ ಅವರಿಗೆ ಅತ್ಯಂತ ಪೂಜ್ಯ ಭಾವನೆಯಿಂದ, ದೇವರು ಧರ್ಮದ ಬಗ್ಗೆ, ಬದುಕಿನ ನಶ್ವರತೆಯ ಬಗ್ಗೆ ತನ್ನ ನಯನಾಜೂಕಿನ ಮಾತುಗಳಿಂದ ಬೋಧಿಸಿದ. ಆತನ ಮಾತುಗಳಿಂದ ಪ್ರಭಾವಿತಳಾದ ಫೆರೊಂಡೋನ ಪತ್ನಿ ಆ ಸಂನ್ಯಾಸಿಯ ಬಳಿ ತನ್ನ ತಪ್ಪೊಪ್ಪಿಕೊಂಡು ಆತನ ಆಶೀರ್ವಾದ, ಹಿತವಚನ ಕೇಳುತ್ತೇನೆಂದು ತನ್ನ ಪತಿಯ ಬಳಿ

ಅನುಮತಿ ಕೇಳಿದಳು. ಸಂನ್ಯಾಸಿಯ ಮೇಲಿನ ಗೌರವದಿಂದಾಗಿ ಫೆರೊಂಡೊ ಒಪ್ಪಿಕೊಂಡು ಅನುಮತಿ ನೀಡಿದ.

ಏಕಾಂತದಲ್ಲಿ ಸಂನ್ಯಾಸಿಯ ಕಾಲಬಳಿ ಕೂತು ಫೆರೊಂಡೋನ ಪತ್ನಿ, 'ಫಾದರ್, ದೇವರು ನನಗೆ ಫೆರೊಂಡೋನ ಬದಲು ಬೇರೆ ಗಂಡನನ್ನು ಕೊಟ್ಟಿದ್ದಲ್ಲಿ, ನೀವು ಇಷ್ಟು ಹೊತ್ತು ಹೇಳಿದ ಧರ್ಮದ ಹಾದಿಯಲ್ಲಿ ಆಧ್ಯಾತ್ಮಿಕ ಬದುಕಿನಿಂದ ನಾನು ಸಾಗಬಹುದಿತ್ತು. ಆದರೆ ನನ್ನ ಗಂಡ ಫೆರೊಂಡೊ ಎಷ್ಟು ದಡ್ಡ ಎಂದು ಆಲೋಚಿಸಿದಾಗಲೆಲ್ಲ ನನ್ನನ್ನು ವಿಧವೆಯೆಂದು ಕರೆದುಕೊಳ್ಳುವುದೇ ವಾಸಿ ಎನ್ನಿಸುತ್ತದೆ. ಆದರೂ ಆತ ಬದುಕಿರುವವರೆಗೂ ನಾನು ಮತ್ತೊಂದು ಮದುವೆಯಾಗುವ ಹಾಗಿಲ್ಲ. ಆತ ದಡ್ಡನಾಗಿರುವುದಷ್ಟೇ ಅಲ್ಲ, ನನ್ನನ್ನು ಎಷ್ಟು ಅಸೂಯೆಯಿಂದ ನೋಡುತ್ತಾನೆಂದರೆ ಆತನ ಜೊತೆಗಿರುವುದೇ ಅತೀವ ಹಿಂಸೆಯಾಗಿದೆ. ಅದು ನನ್ನ ಕರ್ಮ. ದಯವಿಟ್ಟು ಇದರ ಬಗ್ಗೆ ತಮ್ಮ ಉಪದೇಶ ನೀಡಿ' ಎಂದು ಸಂನ್ಯಾಸಿಯನ್ನು ಕೇಳಿಕೊಂಡಳು. ಆಕೆಯ ಮಾತುಗಳನ್ನು ಕೇಳಿ ಸಂನ್ಯಾಸಿಗೆ ತನ್ನ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಷ್ಟು ಸಂತೋಷವಾಯಿತು. ಆದರೂ ಅದನ್ನು ತೋರಗೊಡದೆ, 'ಮಗಳೇ, ನಿನ್ನಂತಹ ಸುಂದರ, ನಾಜೂಕಿನ ಹೆಣ್ಣಿಗೆ ಇಂತಹ ದಡ್ಡ ಅಸೂಯಾಪರ ಗಂಡ ಸಿಕ್ಕಿರುವುದು ನಿನ್ನ ದುರಾದೃಷ್ಟವೇ ಸರಿ. ನಿನ್ನನ್ನು ಆ ದುರಾದೃಷ್ಟತೆಯಿಂದ ಪಾರು ಮಾಡಲು ನನಗೆ ತೋಚುವ ದಾರಿ ಎಂದರೆ, ನಿನ್ನ ಗಂಡನನ್ನು ಆತನ ಅಸೂಯೆಯ ಮನಃಸ್ಥಿತಿಯಿಂದ ಪಾರು ಮಾಡಬೇಕು. ಅದಕ್ಕೆ ಬೇಕಾದ ಔಷಧ ನನ್ನಲ್ಲಿದೆ. ಆದರೆ ಅದನ್ನು ಯಾರಿಗೂ ಹೇಳಬಾರದು' ಎಂದ ಸಂನ್ಯಾಸಿ. ಆಕೆ ಒಪ್ಪಿಕೊಂಡ ಮೇಲೆ, 'ಆತನಿಗೆ ಅಸೂಯೆಯ ಖಾಯಿಲೆ ವಾಸಿಯಾಗಬೇಕಾದಲ್ಲಿ ಮೊದಲಿಗೆ ಆತ ನರಕಕ್ಕೆ ಹೋಗಬೇಕು' ಎಂದ ಸಂನ್ಯಾಸಿ. ಅದಕ್ಕೆ ಗಾಭರಿಗೊಂಡ ಆಕೆ, 'ಅದು ಹೇಗೆ ಸಾಧ್ಯ? ಆತ ಬದುಕಿರುವ ಹಾಗೆಯೇ ನರಕಕ್ಕೆ ಹೋಗಲು ಸಾಧ್ಯವೆ?' ಎಂದು ಕೇಳಿದಳು. 'ಇಲ್ಲ ಆತ ಸತ್ತು ನರಕಕ್ಕೆ ಹೋಗಬೇಕು. ಅಲ್ಲಿ ಆತನಿಗೆ ಸಾಕಷ್ಟು ಶಿಕ್ಷೆಯಾಗಿ ಆತನ ಅಸೂಯೆಯ ಖಾಯಿಲೆ ವಾಸಿಯಾದ ನಂತರ ನಾವು ದೇವರನ್ನು ಪ್ರಾರ್ಥಿಸಿ ಆತ ಮತ್ತೆ ಬದುಕಿ ಬರುವಂತೆ ಮಾಡೋಣ. ದೇವರು ನಮ್ಮ ಪ್ರಾರ್ಥನೆಯನ್ನು ಖಂಡಿತಾ ಈಡೇರಿಸುತ್ತಾನೆ' ಎಂದ ಕಪಟ ಸಂನ್ಯಾಸಿ. 'ಫೆರೊಂಡೊ ಸತ್ತಿರುವಷ್ಟು ದಿವಸವೂ ನಾನು ವಿಧವೆಯಾಗಿರಬೇಕೆ?' ಎಂದು ಕೇಳಿದಳು ಆಕೆ ಖಿನ್ನಳಾಗಿ. 'ಹೌದು, ಆದರೆ ಸ್ವಲ್ಪ ದಿವಸ ಮಾತ್ರ. ಮತ್ತೊಂದು ವಿಷಯ. ಫೆರೊಂಡೊ

ಸತ್ತಿರುವಾಗ ನೀನು ಬೇರೊಂದು ಮದುವೆಯ ಯೋಚನೆ ಮಾಡಬಾರದು. ಅದರಿಂದ ನಿನ್ನ ಮೇಲೆ ದೇವರಿಗೆ ಅತಿಯಾದ ಕೋಪ ಬರುತ್ತದೆ. ಅಷ್ಟಲ್ಲದೆ



ಮತ್ತೆ ಫೆರೊಂಡೊ ಬದುಕಿ ಬಂದಾಗ ಆತನಿಗೆ ನಿನ್ನ ಮೇಲಿನ ಅಸೂಯೆ ಮತ್ತಷ್ಟು ಹೆಚ್ಚಾಗುತ್ತದೆ' ಎಂದ ಸಂನ್ಯಾಸಿ. ಅದಕ್ಕೆ ಫೆರೊಂಡೋನ ಪತ್ನಿ, 'ಸಧ್ಯ ಆತನಿಗೆ ಅಸೂಯೆಯ ಖಾಯಿಲೆ ವಾಸಿಯಾದರೆ ಸಾಕು. ನಿಮಗೆ ತೋಚಿದ ಹಾಗೆ ಮಾಡಿ' ಎಂದಳು ಕೈ ಮುಗಿದು.

ಅದಕ್ಕೆ ಆ ಸಂನ್ಯಾಸಿ ಫೆರೊಂಡೋನ ಪತ್ನಿಯನ್ನು ಓರೆಗಣ್ಣಿನಿಂದ ನೋಡುತ್ತ, 'ನನ್ನ ಈ ಸಹಾಯಕ್ಕೆ ನಿನ್ನಿಂದ ನನಗೇನು ಬಹುಮಾನ ಸಿಗುತ್ತದೆ?' ಎಂದು ಕೇಳಿದ. ಆತನ ಕುಡಿಗಣ್ಣಿನ ನೋಟ ಅರ್ಥವಾಗದ ಆಕೆ, 'ನನ್ನಿಂದ ಸಾಧ್ಯವಾಗುವಂಥದು ಏನು ಬೇಕಾದರೂ ಕೊಡುತ್ತೇನೆ. ಆದರೆ ನನ್ನಂಥ ಹೆಂಗಸು ನಿಮ್ಮಂಥ ಪೂಜ್ಯರಿಗೆ ಏನು ಮಾಡಲು ಸಾಧ್ಯ?' ಎಂದಳು. 'ಏಕೆ, ನಾನು ನಿನಗೆ ಏನು ಮಾಡಲು ಹೊರಟಿರುವೆನೋ ಅದನ್ನೇ ನೀನೂ ಸಹ ನನಗೆ ಮಾಡಬಹುದು. ನಿನ್ನ ಬದುಕು ಹೇಗೆ ಸುಖಕರವಾಗಿ ಮಾಡಲು ನಾನು ತಯಾರಿದ್ದೇನೆಯೋ, ಹಾಗೆಯೇ ನನ್ನ ಬದುಕನ್ನೂ ಸಹ ನೀನು ಸುಖಕರವನ್ನಾಗಿ ಮಾಡಬಹುದು' ಎಂದ ಕುಟಿಲ ಸಂನ್ಯಾಸಿ. ಆತನ ಮಾತಿನ ಗೂಡಾರ್ಥ ಅರಿಯಲಾಗದ ಮುಗುದೆ, 'ಆಯಿತು, ನಾನು ತಯಾರಿದ್ದೇನೆ. ನಿಮಗೇನು ಬೇಕೋ ಕೇಳಿ' ಎಂದಳು. 'ಹಾಗಿದ್ದಲ್ಲಿ, ನನಗೆ ನಿನ್ನ ಪ್ರೀತಿ ಪ್ರೇಮ ಕೊಡುವೆಯಾ? ನಿನ್ನ ಬಾಹುಬಂಧನದಲ್ಲಿ

ನನಗೆ ಸುಖ ಕೊಡುವೆಯಾ? ನಿನ್ನ ಮೇಲಿನ ಪ್ರೇಮದ ದಳ್ಳುರಿಯಲ್ಲಿ ನಾನು ಬೇಯುತ್ತಿದ್ದೇನೆ' ಎಂದ ಸಂನ್ಯಾಸಿ.

ಆತನ ಬೇಡಿಕೆಯಿಂದ ಫೆರೊಂಡೋನ ಪತ್ನಿ, 'ಏನಿದು ಫಾದರ್? ನೀವು ಕೇಳುತ್ತಿರುವುದು? ನೀವೊಬ್ಬರು ಸಂನ್ಯಾಸಿಯೆಂದು ತಿಳಿದಿದ್ದೆ! ನಿಮ್ಮಂಥ ಪೂಜ್ಯರು ತಮ್ಮ ಬಳಿ ತಪ್ಪೊಪ್ಪಿಗೆ ಕೇಳಲು ಬಂದಿರುವ ಹೆಂಗಸಿನ ಬಳಿ ಇಂಥದನ್ನು ಕೇಳಬಹುದೆ?' ಎಂದಳು. 'ಹೋ ನನ್ನ ಸಿಹಿ ಆತ್ಮವೇ, ಗಾಭರಿಯಾಗಬೇಡ. ಇದರಿಂದ ಪೂಜ್ಯತೆ, ಪಾವಿತ್ರ್ಯತೆ ಕಡಿಮೆಯಾಗುವುದಿಲ್ಲ; ಏಕೆಂದರೆ ಪಾವಿತ್ರ್ಯತೆ ಇರುವುದು ನನ್ನ ಆತ್ಮದಲ್ಲಿ. ಆದರೆ ನಾನೀಗ ಪಾಪ ಮಾಡಲು ಹೊರಟಿರುವುದು ನನ್ನ ದೇಹದಿಂದ. ಅದೇನೇ ಇರಲಿ, ನಿನ್ನ ಮೋಹಕ ಸೌಂದರ್ಯ ನನ್ನನ್ನು ಹುಚ್ಚನನ್ನಾಗಿ ಮಾಡಿದೆ. ನಾವು ಸ್ವರ್ಗದ ಅಪ್ಸರೆಯರನ್ನು ನೋಡಬಲ್ಲ ಯೋಗ್ಯತೆಯುಳ್ಳವರು. ಅಂತಹ ಪೂಜ್ಯರಿಗೆ ನಿನ್ನಂತಹ ಹೆಣ್ಣಿನ ದೇಹ ಸೌಂದರ್ಯ ಸುಖ ಸಂತೋಷ ಕೊಡಬಲ್ಲುದು ಎಂದು ನಿನಗೇ ಹೆಮ್ಮೆಯಾಗಬೇಕು. ಅಷ್ಟಲ್ಲದೆ, ನನ್ನನ್ನು ನೋಡು. ನಾನು ಸಂನ್ಯಾಸಿಯಾದರೂ ಇನ್ನೂ ನನ್ನಲ್ಲಿ ಯೌವನವಿದೆ. ಫೆರೊಂಡೊ ನರಕಕ್ಕೆ ಹೋಗುವುದರಿಂದ ನಾನು ಪ್ರತಿ ರಾತ್ರಿ ನಿನ್ನ ಮನೆಗೆ ಬಂದು ನಿನ್ನ ಗಂಡ ಕೊಡಬಹುದಾಗಿದ್ದ ಎಲ್ಲಾ ಸುಖಸಂತೋಷಗಳನ್ನು ಕೊಡುತ್ತೇನೆ. ಈ ರೀತಿಯ ಅವಕಾಶ ದೇವರೇ ನಿನಗೆ ಕಲ್ಪಿಸಿಕೊಟ್ಟಿರುವಾಗ ನೀನು ತಿರಸ್ಕರಿಸಬೇಡ. ಈ ರೀತಿಯ ನನ್ನ ಸಲಹೆ, ಸಹಕಾರಕ್ಕೆ ಬೇಕಾದಷ್ಟು ಜನ ಹೆಂಗಸರು ಕಾದಿರುತ್ತಾರೆ ಎಂಬುದನ್ನು ತಿಳಿದುಕೊ. ಅಲ್ಲದೆ, ನನ್ನಲ್ಲಿ ಬೇಕಾದಷ್ಟು ಒಡವೆ, ಆಭರಣಗಳಿವೆ. ಅವು ನಿನ್ನವಾಗಬಹುದು' ಎಂದ ಕಪಟ ಸಂನ್ಯಾಸಿ.

ಆತನ ಕೋರಿಕೆ ತಪ್ಪು ಎನ್ನಿಸಿದರೂ ಆಕೆಗೆ ಅದನ್ನು ತಿರಸ್ಕರಿಸಲಾಗಲಿಲ್ಲ. ಆಕೆಯ ಮೌನ ನೋಡಿದ ಸಂನ್ಯಾಸಿ, ತನ್ನ ಇನ್ನಷ್ಟು ನಾಜೂಕಿನ ಮಾತುಗಳಿಂದ ತನ್ನಂತಹ ಪೂಜ್ಯ ಪವಿತ್ರಾತ್ಮಗಳಿಗೆ ಸುಖಸಂತೋಷ ಕೊಡುವುದರಿಂದ ಏನೂ ತಪ್ಪಾಗುವುದಿಲ್ಲವೆಂಬ ಮನವರಿಕೆ ಮಾಡಿದ. ಕೊನೆಗೆ ಒಪ್ಪಿಕೊಂಡ ಫೆರೊಂಡೋನ ಪತ್ನಿ, 'ಫೆರೊಂಡೊ ಮೊದಲು ನರಕಕ್ಕೆ ಹೋಗಲಿ' ಎಂದಳು. ಅವಳ ಒಪ್ಪಿಗೆಯಿಂದ ಸಂತೋಷಗೊಂಡ ಸಂನ್ಯಾಸಿ, ತನ್ನ ಬೆರಳಿನಲ್ಲಿದ್ದ ಉಂಗುರ ತೆಗೆದು ಆಕೆಯ ಕೈಗೆ ಕೊಡುತ್ತಾ, 'ಆದಷ್ಟು ಬೇಗ ಫೆರೊಂಡೋನನ್ನು ನನ್ನ ಆಶ್ರಮಕ್ಕೆ ಕಳುಹಿಸು' ಎಂದ.

ಆ ಸಂನ್ಯಾಸಿಯ ಬಳಿ ಔಷಧದ ಪುಡಿಯೊಂದಿತ್ತು. ಯಾರಾದರೂ ಅದನ್ನು ಸೇವಿಸಿದಲ್ಲಿ ತಕ್ಷಣ ನಿದ್ರಾವಶರಾಗುತ್ತಿದ್ದರು. ನಿದ್ರೆಯ ಅವಧಿ ಅವರು ಸೇವಿಸುವ ಔಷಧದ ಪ್ರಮಾಣವನ್ನವಲಂಬಿಸಿರುತ್ತಿತ್ತು. ಆ ಔಷಧದ ಸೇವನೆ ನಿದ್ರಾವಶರಾಗುವುದಲ್ಲದೆ ಆ ವ್ಯಕ್ತಿಯ ಎದೆಬಡಿತ ಹಾಗೂ ನಾಡಿಮಿಡಿತ ಸಹ ನಿಂತುಬಿಡುತ್ತಿತ್ತು. ಅಂತಹ ವ್ಯಕ್ತಿಯನ್ನು ಯಾರಾದರೂ ಪರೀಕ್ಷಿಸಿದಲ್ಲಿ ಆತ ಸತ್ತಿದ್ದಾನೆಂದೇ ನಂಬಿಬಿಡುತ್ತಿದ್ದರು. ಆ ಔಷಧಿಯ ಪರಿಣಾಮ ಕಡಿಮೆಯಾದಂತೆ ನಿದ್ರಿಸಿದ ವ್ಯಕ್ತಿ ಎಚ್ಚರಗೊಳ್ಳುತ್ತಿದ್ದ.

ಒಂದು ದಿನ ಫೆರೊಂಡೊ ಆಶ್ರಮಕ್ಕೆ ಭೇಟಿಯಿತ್ತಾಗ ಸಂನ್ಯಾಸಿ ಮೂರು ದಿನ ನಿದ್ರಿಸಲು ಬೇಕಾಗುವಷ್ಟು ಔಷಧದ ಪುಡಿಯನ್ನು ವೈನ್‌ನಲ್ಲಿ ಕಲೆಸಿ ಅದನ್ನು ಫೆರೊಂಡೋನಿಗೆ ಕುಡಿಯಲು ಕೊಟ್ಟು ಇನ್ನಿತರ ಸಂನ್ಯಾಸಿಗಳ ಜೊತೆಗೂಡಿ ಎಂದಿನಂತೆ ಆತನ ದಡ್ಡತನವನ್ನು ಲೇವಡಿ ಮಾಡತೊಡಗಿದರು. ಸಂನ್ಯಾಸಿಗೆ ಬಿಟ್ಟು ಬೇರೆ ಯಾರಿಗೂ ಆತ ಫೆರೊಂಡೋನಿಗೆ ಔಷಧ ಕುಡಿಸಿರುವ ವಿಷಯ ತಿಳಿದಿರಲಿಲ್ಲ. ಫೆರೊಂಡೊ ಮಾತನಾಡುತ್ತಿರುವಂತೆ, ಔಷಧದ ಪರಿಣಾಮದಿಂದಾಗಿ ಎಚ್ಚರತಪ್ಪಿ ಬಿದ್ದುಬಿಟ್ಟ. ಗಾಭರಿಗೊಂಡವನಂತೆ ಸಂನ್ಯಾಸಿ ನಟಿಸುತ್ತ ಫೆರೊಂಡೋನ ಮುಖದ ಮೇಲೆ ನೀರು ಚಿಮುಕಿಸಿ ಎಚ್ಚರಿಸಲು ಯತ್ನಿಸಿದ. ಅಲ್ಲಿನ ಇತರ ಸಂನ್ಯಾಸಿಗಳು ಕೈ ಹಿಡಿದು ನಾಡಿ ಮಿಡಿತ ನೋಡಲು, ಅದೂ ಸಹ ನಿಂತು ಹೋಗಿತ್ತು; ಎದೆಬಡಿತವೂ ಕೇಳುತ್ತಿರಲಿಲ್ಲ. ಫೆರೊಂಡೊ ಸತ್ತುಹೋಗಿದ್ದಾನೆಂದು ನಿರ್ಧರಿಸಿ ಆತನ ಹೆಂಡತಿಗೆ ಹಾಗೂ ಇನ್ನಿತರ ಸಂಬಂಧಿಕರಿಗೆ ಹೇಳಿಕಳುಹಿಸಿದರು. ಫೆರೊಂಡೋನ ಪತ್ನಿ ಬಂದು ಪತಿ ಸತ್ತು ಹೋದನೆಂದು ಗೋಳಿಟ್ಟಳು. ನಂತರ ಸಂನ್ಯಾಸಿ ಆಶ್ರಮದ ಮರ್ಯಾದೆಗನುಗುಣವಾಗಿ ಸಮಾಧಿಯೊಂದರಲ್ಲಿ ಹೂತರು.

ಇತ್ತ ಸಂನ್ಯಾಸಿ ತನ್ನ ಆಪ್ತ ಶಿಷ್ಯನೊಬ್ಬನನ್ನು ಬೊಲೋನ ಎನ್ನುವ ಊರಿನಿಂದ ಯಾರಿಗೂ ತಿಳಿಯದ ಹಾಗೆ ಕರೆಸಿಕೊಂಡಿದ್ದ ಹಾಗೂ ಅವನಿಗೆ ಮಾತ್ರ ಫೆರೊಂಡೋನ ವಿಷಯ ತಿಳಿಸಿದ್ದ. ರಾತ್ರಿ ಊರೆಲ್ಲ ಮಲಗಿದ ಮೇಲೆ ಸಂನ್ಯಾಸಿ ಹಾಗೂ ಆತನ ಶಿಷ್ಯ ಇಬ್ಬರೂ ಸೇರಿ ಸಮಾಧಿಗೆ ಹೊದೆಸಿದ್ದ ಕಲ್ಲು ಸರಿಸಿ ಫೆರೊಂಡೋನನ್ನು ನೆಲಮಾಳಿಗೆಯಲ್ಲಿದ್ದ, ತಪ್ಪು ಮಾಡಿದ ಸಂನ್ಯಾಸಿಗಳನ್ನು ಸೆರೆ ಇಡುತ್ತಿದ್ದ ಕತ್ತಲಕೋಣೆಯೊಂದಕ್ಕೆ ಸಾಗಿಸಿದರು. ಅಲ್ಲಿ ಅವನ ಬಟ್ಟೆ ತೆಗೆದು ಸಂನ್ಯಾಸಿಗಳು ತೊಡುವ ಬಟ್ಟೆ ತೊಡಿಸಿದರು ಹಾಗೂ ಅಲ್ಲಿನ ಹುಲ್ಲಿನ ಹಾಸಿನ ಮೇಲೆ ಮಲಗಿಸಿದರು. ಫೆರೊಂಡೊ ಎಚ್ಚರಗೊಂಡ ಮೇಲೆ ಏನು ಮಾಡಬೇಕೆಂದು ಶಿಷ್ಯನಿಗೆ ಸಂನ್ಯಾಸಿ ತಿಳಿಸಿದ್ದ.

ಮರುದಿನ ಸಂನ್ಯಾಸಿ ಹಾಗೂ ಆತನ ಕೆಲ ಶಿಷ್ಯರು ಫೆರೊಂಡೋನ ಪತ್ನಿಗೆ ಸಂತಾಪ ಸೂಚಿಸಲು ಆಕೆಯ ಮನೆಗೆ ಹೋದರು. ಆಕೆಗೆ ಸಂತಾಪ ಸೂಚಿಸಿದ ನಂತರ ಆಕೆಗೆ ತಾನು ಕೊಟ್ಟ ಮಾತು ಉಳಿಸಿಕೊಳ್ಳುವಂತೆ ಸಂನ್ಯಾಸಿ ಏಕಾಂತದಲ್ಲಿ ನೆನಪಿಸಿದ. ಸಂನ್ಯಾಸಿಯ ಬೆರಳಲ್ಲಿ ಮತ್ತೊಂದು ಹೊಸ ಉಂಗುರ ಮಿನುಗುತ್ತಿತ್ತು. ಆಕೆ ಸಂತೋಷದಿಂದ ಒಪ್ಪಿದಳು. ಅಂದಿನಿಂದ ಪ್ರತಿ ರಾತ್ರಿ ಸಂನ್ಯಾಸಿ, ಫೆರೊಂಡೊ ಸಾಯುವ ಮೊದಲು ಧರಿಸಿದ್ದ ಬಟ್ಟೆಗಳನ್ನು ಧರಿಸಿ ಫೆರೊಂಡೋನ ಪತ್ನಿಯನ್ನು ಭೇಟಿಮಾಡಲು ಹೋಗಿ ಮುಂಜಾವಿನವರೆಗೂ ಆಕೆಯೊಂದಿಗೆ ಸ್ವರ್ಗಸುಖ ಕಂಡು ಹಿಂದಿರುಗುತ್ತಿದ್ದ. ಅಪರಾತ್ರಿಯ ಹೊತ್ತಲ್ಲಿ ಫೆರೊಂಡೋನ ಬಟ್ಟೆ ಧರಿಸಿ ಓಡಾಡುತ್ತಿದ್ದ ಸಂನ್ಯಾಸಿಯನ್ನು ಕಂಡು ಹಲವಾರು ಮಂದಿ ಫೆರೊಂಡೋನ ಪ್ರೇತಾತ್ಮವೇ ಊರೆಲ್ಲಾ ಅಲೆದಾಡುತ್ತಿದೆಯೆಂದು ಹೆದರಿ ಓಡಿಹೋಗಿದ್ದರು. ಆ ಸುದ್ದಿ ಫೆರೊಂಡೋನ ಪತ್ನಿಯ ಕಿವಿಗೂ ಬಿತ್ತು. ಆ ಪ್ರೇತಾತ್ಮ ಯಾವುದೆಂದು ಆಕೆಗೆ ತಿಳಿದಿದ್ದಿದ್ದರಿಂದ ಆಕೆ ತನ್ನಲ್ಲೇ ಮುಸಿಮುಸಿ ನಕ್ಕಳು.

ಇತ್ತ ಮೂರುದಿನಗಳ ದೀರ್ಘ ನಿದ್ರೆಯಿಂದ ಎಚ್ಚೆತ್ತ ಫೆರೊಂಡೊ ತಾನಿರುವ ಸ್ಥಳ ಯಾವುದೆಂದು ತಿಳಿಯದೆ ಗಾಭರಿಗೊಂಡಿದ್ದ. ಆತ ಎಚ್ಚರಗೊಳ್ಳುವುದನ್ನೇ ಕಾಯುತ್ತಿದ್ದ ಸಂನ್ಯಾಸಿಯ ಆಪ್ತ ಶಿಷ್ಯ ಕೂಡಲೇ ಎದ್ದು ಗರ್ಜಿಸುತ್ತ, ತನ್ನ ಬಳಿ ಇರಿಸಿಕೊಂಡಿದ್ದ ಬರಲಿನಿಂದ ಎರಡು ಬಾರಿಸಿದ. ಗಾಭರಿಯಿಂದ ಫೆರೊಂಡೊ 'ನಾನೆಲ್ಲಿದ್ದೇನೆ? ನಾನೆಲ್ಲಿದ್ದೇನೆ?' ಎಂದು ಕಿರುಚಿಕೊಂಡ.

'ನೀನು ನರಕದಲ್ಲಿದ್ದೀಯೆ' ಎಂದ ಶಿಷ್ಯ.

'ಹೌದಾ! ಹಾಗಾದರೆ ನಾನು ಸತ್ತು ಹೋಗಿದ್ದೇನೆಯೆ?' ಫೆರೊಂಡೊ ಕೂಗಿಕೊಂಡ.

'ಹೌದು' ಎಂದ ಶಿಷ್ಯ.

ಫೆರೊಂಡೊ ತನ್ನ ಸ್ಥಿತಿಯ ಬಗ್ಗೆ, ತನ್ನ ಪತ್ನಿ ಹಾಗೂ ಮಗನನ್ನು ನೆನೆಸಿಕೊಂಡು ಗೋಳಾಡತೊಡಗಿದ, ಅಸಂಬದ್ಧವಾಗಿ ಮಾತನಾಡತೊಡಗಿದ. ಶಿಷ್ಯ, ಫೆರೊಂಡೋನಿಗಾಗಿ ಆಹಾರ ಹಾಗೂ ನೀರು ತಂದಿಟ್ಟ. ಅದನ್ನು ನೋಡಿದ ಫೆರೊಂಡೊ ಅಚ್ಚರಿಯಿಂದ, 'ಏನು ಸತ್ತವರು ಊಟ ಮಾಡುತ್ತಾರೆಯೆ?' ಎಂದು ಕೇಳಿದ. 'ಹೌದು' ಎಂದ ಶಿಷ್ಯ, 'ನಿನ್ನೆ ನಿನ್ನ ವಿಧವೆ ಪತ್ನಿ ನಿನ್ನ ಸಮಾಧಿಯ ಬಳಿ ಈ ಆಹಾರ ಇಟ್ಟು ಪೂಜಿಸಿದ್ದಳು. ದೇವರು ಆ ಆಹಾರ ನಿನಗೆ ತಲುಪಿಸುವಂತೆ ಹೇಳಿದ್ದಾರೆ' ಎಂದೂ ಹೇಳಿದ.

ಫೆರೊಂಡೊ ಊಟ ಮಾಡುತ್ತಾ, 'ದೇವರು ಅವಳಿಗೆ ಒಳ್ಳೆಯದು ಮಾಡಲಿ. ನಾನವಳಿಗೆ ಎಷ್ಟು ಒಳ್ಳೆಯ ಗಂಡನಾಗಿದ್ದೆ! ಇಡೀ ರಾತ್ರಿ ಅವಳನ್ನು ತಬ್ಬಿ ಮುತ್ತಿಡುತ್ತಾ ಹಾಗೂ ಮಾಡುತ್ತಾ ಮಲಗುತ್ತಿದ್ದೆ' ಎಂದು ಅವಳೊಟ್ಟಿಗೆ ಇದ್ದ ದಿನಗಳನ್ನು ನೆನಪಿಸಿಕೊಂಡ.

ಅವನು ಊಟ ಮುಗಿಸಿದ ಕೂಡಲೆ, ಅಲ್ಲೇ ಇದ್ದ ಶಿಷ್ಯ ಮತ್ತೆ ಬರಲಿನಿಂದ ಫೆರೊಂಡೋನಿಗೆ ಬಾರಿಸತೊಡಗಿದ. ಫೆರೊಂಡೊ, ನೋವಿನಿಂದ ಅರಚುತ್ತ, ನನ್ನನ್ಯಾಕೆ ದನಬಡಿದ ಹಾಗೆ ಬಡಿಯುತ್ತಿದ್ದೀಯ?' ಎಂದ. 'ಅದು ದೇವರ ಆಜ್ಞೆ, ದಿನಕ್ಕೆರಡು ಬಾರಿ ಈ ರೀತಿ ನಿನ್ನನ್ನು ಬಡಿಯಬೇಕಂತೆ' ಎಂದ ಶಿಷ್ಯ. 'ಏಕಂತೆ?' ಎಂದ ಫೆರೊಂಡೊ ನೋವಿನಿಂದ ಏಟು ಬಿದ್ದ ಜಾಗವನ್ನು ತೀಡಿಕೊಳ್ಳುತ್ತ. 'ಏಕೆಂದರೆ, ನಿನಗೆ ಅಸೂಯೆ ಹೆಚ್ಚು. ನಿನಗಿರುವಂತಹ ಸುಂದರ ಪತ್ನಿ ಇಡೀ ಪ್ರಾಂತ್ಯದಲ್ಲೇ ಇಲ್ಲ. ಆದರೂ ನಿನಗೆ ಆಕೆಯನ್ನು ಕಂಡರೆ ಅಸೂಯೆಯಿತ್ತು' ಎಂದ ಬರಲಿನಿಂದ ಬಡಿಯುತ್ತಿದ್ದ ಶಿಷ್ಯ. ಫೆರೊಂಡೊ ಪಶ್ಚಾತ್ತಾಪ ಪಡುತ್ತಾ, 'ಹೌದು. ನೀನು ಹೇಳುವುದು ಸರಿ. ನನ್ನ ಪತ್ನಿ ಜೇನಿನಷ್ಟು ಸಿಹಿಯಿದ್ದಳು. ಆದರೆ ಪತ್ನಿಯನ್ನು ಅಸೂಯೆಯಿಂದ ನೋಡುವ ಗಂಡನನ್ನು ದೇವರು ಇಷ್ಟ ಪಡುವುದಿಲ್ಲವೆಂದು ನನಗೆ ತಿಳಿದಿರಲಿಲ್ಲ' ಎಂದು ಹೇಳಿದ. 'ಅದು ನಿನಗೆ ತಿಳಿದಿರಬೇಕಿತ್ತು. ತಿಳಿದು ಆಗಲೇ ನೀನು ಬದುಕುವ ದಾರಿ ಬದಲಿಸಿಕೊಂಡಿದ್ದರೆ ನಿನಗೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಈಗಲೂ ನೆನಪಿಟ್ಟುಕೊ, ನೀನೇನಾದರೂ ಮತ್ತೆ ಬದುಕಿ ನಿನ್ನ ಲೋಕಕ್ಕೆ ವಾಪಸ್ಸು ಹೋದರೆ, ನನ್ನ ಹೊಡೆತಗಳನ್ನು ನೆನಪಿಸಿಕೊ ಹಾಗೂ ನಿನ್ನ ಪತ್ನಿಯನ್ನು ಸರಿಯಾಗಿ ನಡೆಸಿಕೊ' ಎಂದ ಶಿಷ್ಯ.

'ಸತ್ತವರು ಮತ್ತೆ ಬದುಕಿ ಹೋಗಲು ಸಾಧ್ಯವೆ?' ಅಚ್ಚರಿಯಿಂದ ಕೇಳಿದ ಫೆರೊಂಡೊ.

'ದೇವರು ಮನಸ್ಸು ಮಾಡಿದರೆ ಯಾವುದು ಸಾಧ್ಯವಿಲ್ಲ ಹೇಳು!' ಎಂದ ಶಿಷ್ಯ.

'ಹೋ ದೇವರೇ! ನಾನೇನಾದರೂ ಮತ್ತೆ ಬದುಕಿ ಹೋದರೆ, ನನ್ನಷ್ಟು ಒಳ್ಳೆಯ ಗಂಡ ಈ ಪ್ರಪಂಚದಲ್ಲೇ ಇರುವುದಿಲ್ಲ. ಆಕೆಯನ್ನು ಎಂದಿಗೂ ಬೈಯುವುದಿಲ್ಲ, ಹೊಡೆಯುವುದಿಲ್ಲ' ಎಂದ ಫೆರೊಂಡೊ, 'ಅದಿರಲಿ, ನೀನ್ಯಾರು?' ಎಂದು ಶಿಷ್ಯನನ್ನು ಕೇಳಿದ.

'ನಾನೂ ನಿನ್ನ ಹಾಗೆ ಸತ್ತು ನರಕಕ್ಕೆ ಬಂದವನು. ದೇವರು ನನಗೆ ನಿನ್ನನ್ನು ಬಡಿಯುವ ಶಿಕ್ಷೆ ಕೊಟ್ಟಿದ್ದಾರೆ' ಎಂದ ಶಿಷ್ಯ.

‘ಇಲ್ಲಿ ನರಕದಲ್ಲಿ ಬೇರ್‍ಯಾರೂ ಇಲ್ಲವೆ?’ ಎಂದು ಕುತೂಹಲದಿಂದ ಕೇಳಿದ ಫೆರೊಂಡೊ.

‘ಇದ್ದಾರೆ. ಸಾವಿರಾರು ಜನ ಇದ್ದಾರೆ. ಆದರೆ ನೀನವರಿಗೆ ಕಾಣುವುದಿಲ್ಲ, ಅವರು ನಿನಗೆ ಕಾಣುವುದಿಲ್ಲ’ ಎಂದ ಶಿಷ್ಯ.

ಇದೇ ರೀತಿ ಫೆರೊಂಡೊ ಹತ್ತು ತಿಂಗಳು ಕತ್ತಲ ಕೋಣೆಯಲ್ಲಿ ಕಳೆದ. ಅತ್ತ ಸಂನ್ಯಾಸಿ ಇದೇ ಸಮಯವನ್ನು ಫೆರೊಂಡೋನ ಪತ್ನಿಯ ಕೋಣೆಯಲ್ಲಿ ಕಳೆದ. ಅವರ ದುರಾದೃಷ್ಟವೆಂಬಂತೆ ಆಕೆ ಕೊನೆಗೊಂದು ದಿನ ಬಸಿರಾದಳು. ಅದನ್ನು ತಿಳಿದ ಸಂನ್ಯಾಸಿ ಫೆರೊಂಡೋನನ್ನು ನರಕದಿಂದ ವಾಪಸ್ಸು ತರುವ ವ್ಯವಸ್ಥೆ ಮಾಡುತ್ತೇನೆಂದೂ, ಆತ ಬದುಕಿಬಂದ ನಂತರ ಆತನಿಂದಲೇ ತಾನು ಬಸಿರಾದದ್ದು ಎಂದು ತಿಳಿಸಬೇಕೆಂದು ಆಕೆಗೆ ಸಂನ್ಯಾಸಿ ತಿಳಿಸಿ ಹೊರಟ.

ಮರುದಿನ ರಾತ್ರಿ ಫೆರೊಂಡೋನ ನೆಲಮಾಳಿಗೆಯಲ್ಲಿನ ಕತ್ತಲ ಕೋಣೆಯ ಬಳಿ ಹೋಗಿ ತನ್ನ ಧ್ವನಿ ಬದಲಿಸಿ, ‘ಫೆರೊಂಡೊ, ನಿನಗೆ ಸಂತೋಷದ ಸುದ್ದಿ. ದೇವರು ನಿನ್ನ ನಡತೆಯನ್ನು ಮೆಚ್ಚಿ ನಿನ್ನನ್ನು ಪುನಃ ಬದುಕಿಸಿ ಭೂಮಿಗೆ ಕಳುಹಿಸುತ್ತಾರೆ. ನೀನು ವಾಪಸ್ಸು ಹೋದ ನಂತರ ನಿನಗೊಬ್ಬ ಮಗ ಹುಟ್ಟುತ್ತಾನೆ. ಅವನಿಗೆ ಬೆನೆಡೆಟ್ಟೊ ಎಂದು ಹೆಸರು ಇಡಬೇಕು. ಏಕೆಂದರೆ ನಿನ್ನ ಪತ್ನಿ ಹಾಗೂ ಆಕೆಯ ಪೂಜ್ಯ ಸಂನ್ಯಾಸಿ ಸಂತ ಬೆನೆಡೆಟ್ಟೋನನ್ನು ಪೂಜಿಸಿದ್ದರ ಫಲವಾಗಿ ನಿನಗೆ ಹಾಗೂ ನಿನ್ನ ಪತ್ನಿಗೆ ಈ ಮಗ ಹುಟ್ಟುತ್ತಾನೆ’ ಎಂದು ಹೇಳಿದ. ಅಶರೀರವಾಣಿಯ ಧ್ವನಿ ಕೇಳಿ ಫೆರೊಂಡೊ ಸಂತೋಷಗೊಂಡ.

ಆ ದಿನ ಫೆರೊಂಡೋನಿಗೆ ಕೊಡುವ ವೈನಿನಲ್ಲಿ ನಾಲ್ಕು ಗಂಟೆ ನಿದ್ರಿಸಲು ಬೇಕಾಗುವಷ್ಟು ಔಷಧವನ್ನು ಸೇರಿಸಿ ಕುಡಿಸಿದರು. ಅವನಿಗೆ ಎಚ್ಚರ ತಪ್ಪಿದ ನಂತರ, ಅವನಿಗೆ ಅವನದೇ ಬಟ್ಟೆ ತೊಡಿಸಿ ಅವನ ಸಮಾಧಿಯಲ್ಲೇ ತಂದು ಮಲಗಿಸಿದರು ಹಾಗೂ ಅದರ ಮೇಲೆ ತೆಳುವಾದ ಕಲ್ಲೊಂದನ್ನು ಮುಚ್ಚಿದರು.

ಮರುದಿನ ಬೆಳಿಗ್ಗೆ ಫೆರೊಂಡೋನಿಗೆ ಎಚ್ಚರವಾಗಿ, ತಾನು ಮತ್ತೆ ಬದುಕಿ ಬಂದಿದ್ದೇನೆಂದು ತಿಳಿದು, ಸಮಾಧಿಯಿಂದಲೇ ಕೂಗತೊಡಗಿದ. ನಂತರ ಸಮಾಧಿಗೆ ಹೊದಿಸಿದ್ದ ಕಲ್ಲನ್ನು ಬಲವಾಗಿ ನೂಕಿ ಎದ್ದು ಹೊರಬಂದ. ಅಲ್ಲೇ ಇದ್ದ ಕೆಲ ಸಂನ್ಯಾಸಿಗಳು ಫೆರೊಂಡೋನನ್ನು ನೋಡಿ ಹೆದರಿ

ಕಿರುಚಿಕೊಂಡು ಓಡಿಹೋಗಿ ತಮ್ಮ ಮುಖ್ಯ ಸಂನ್ಯಾಸಿಗೆ ತಿಳಿಸಿದರು. ಎಲ್ಲ ತಿಳಿದಿದ್ದ ಆತ ಆಗ ತಾನೇ ಪ್ರಾರ್ಥನೆಯಿಂದ ಎದ್ದು ಬಂದವನಂತೆ ನಟಿಸುತ್ತಾ, ‘ನೋಡಿದಿರಾ, ದೇವರು ಎಂತೆಂಥ ಪವಾಡಗಳನ್ನು ನಡೆಸುತ್ತಾನೆ! ಸತ್ತವರೂ ಎದ್ದು ಬರುತ್ತಾರೆ’ ಎಂದು ಹೇಳುತ್ತಾ ಹೊರಗೆ ಬಂದ. ಫೆರೊಂಡೊ



1554ರ ವೆನಿಸ್ ಆವೃತ್ತಿಯ ಮರದಚ್ಚಿನ ಚಿತ್ರ)

ಓಡಿಬಂದು ಆತನ ಕಾಲಿಗೆ ಬಿದ್ದು, ‘ಫಾದರ್, ನಿಮ್ಮ ಹಾಗೂ ನನ್ನ ಪತ್ನಿಯ ಪ್ರಾರ್ಥನೆಯಿಂದಾಗಿ ನನಗೆ ನರಕದಿಂದ ಮುಕ್ತಿ ಸಿಕ್ಕಿದೆ. ಇನ್ನು ಮುಂದೆ ನನ್ನ ಪತ್ನಿಯನ್ನು ಅಸೂಯೆಯಿಂದ ನೋಡುವುದಿಲ್ಲ, ಒಳ್ಳೆಯ ಗಂಡನಾಗಿರುತ್ತೇನೆ’ ಎಂದ.

ತನ್ನ ಗಂಡನನ್ನು ಒಳ್ಳೆಯವನನ್ನಾಗಿ ಮಾಡಿದುದ್ದಕ್ಕೆ ಹಾಗೂ ಆತನಿಲ್ಲದ ಸಮಯದಲ್ಲಿ ತನ್ನ ಅವಶ್ಯಕತೆಗಳನ್ನು ಚೆನ್ನಾಗಿ ಪೂರೈಸಿದುದಕ್ಕಾಗಿ ಫೆರೊಂಡೋನ ಪತ್ನಿ ಆಗಾಗ ಕದ್ದುಮುಚ್ಚಿ ಸಂನ್ಯಾಸಿಯನ್ನು ಭೇಟಿಯಾಗಿ ತನ್ನ ಕೃತಜ್ಞತೆ ತೋರಿಸುತ್ತಿದ್ದಳು.

ಹೇಸರಕತ್ತೆಗೆ ಬಾಲ

ಬಾರ್ಲೆಟ್ಟ ಎಂಬಲ್ಲಿ ಡಾನ್ ಜಿಯಾನ್ನಿ ಎಂಬ ಪಾದ್ರಿಯಿದ್ದ. ಆತನದ್ದು ಬಡ ಚರ್ಚಾದುದರಿಂದ ತನ್ನ ಜೀವನೋಪಾಯಕ್ಕಾಗಿ ತನ್ನಲ್ಲಿದ್ದ ಹೇಸರಕತ್ತೆಯ ಮೇಲೆ ಅದೂ ಇದೂ ಸಾಮಾನು ಹೇರಿಕೊಂಡು ಅಕ್ಕಪಕ್ಕದ ಊರುಗಳ ಸಂತೆಗಳಿಗೆ ಹೋಗಿ ವ್ಯಾಪಾರ ಮಾಡುತ್ತಿದ್ದ. ಹಾಗೇ ವ್ಯಾಪಾರದ ಮೇಲೆ ಹೋಗುತ್ತಿದ್ದಾಗ ಪಾದ್ರಿಗೆ ಪೆಟ್ರೊ ಎಂಬ ವ್ಯಾಪಾರಸ್ಥನ ಪರಿಚಯವಾಯಿತು. ಪೆಟ್ರೊ ಸಹ ತನ್ನಲ್ಲಿದ್ದ ಕತ್ತೆಯನ್ನು ಉಪಯೋಗಿಸಿಕೊಂಡು ಅದೇ ರೀತಿಯ ವ್ಯಾಪಾರದಲ್ಲಿ ತೊಡಗಿದ್ದ. ಪೆಟ್ರೊ ಬಾರ್ಲೆಟ್ಟಾಗೆ ಬಂದಾಗಲೆಲ್ಲ ಡಾನ್‌ನ ಚರ್ಚಿನಲ್ಲೇ ಇರುತ್ತಿದ್ದ ಹಾಗೂ ಡಾನ್ ತನ್ನ ಕೈಲಾದಮಟ್ಟಿಗೆ ಊಟ ಉಪಹಾರ ಕೊಟ್ಟು ಸತ್ಕರಿಸುತ್ತಿದ್ದ. ಅದೇ ರೀತಿ ಡಾನ್, ಪೆಟ್ರೋನ ಊರಾದ ಟ್ರೆಸಾಂತಿಗೆ ಹೋದಾಗಲೆಲ್ಲ ಪೆಟ್ರೊ ಡಾನ್‌ನನ್ನು ತನ್ನ ಮನೆಯಲ್ಲಿ ಸತ್ಕರಿಸುತ್ತಿದ್ದ. ಪೆಟ್ರೊ ಸಹ ಬಡವನಾಗಿದ್ದು ತನಗಿದ್ದ ಸಣ್ಣ ಗುಡಿಸಲಲ್ಲಿ ತಾನೂ, ತನ್ನ ಸುಂದರ ಯುವಪತ್ನಿ ಗ್ಯಾಮರ್ ಗೆಮ್ಮಟಳೊಂದಿಗೆ ಮಲಗುತ್ತಿದ್ದ. ಆದರೆ ಡಾನ್ ಬಂದಾಗ ಆತ ಪೆಟ್ರೋನ ಗುಡಿಸಲಲ್ಲಿ ಮಲಗಲು ಸ್ಥಳಾವಕಾಶವಿಲ್ಲದೆ ಕೊಟ್ಟಿಗೆಯಲ್ಲಿ ತನ್ನ ಹೇಸರಕತ್ತೆ ಹಾಗೂ ಪೆಟ್ರೋನ ಕತ್ತೆಯ ಜೊತೆ ಸ್ಥಳಾವಕಾಶ ಮಾಡಿಕೊಂಡು ಹುಲ್ಲಿನ ಮೇಲೆ ಮಲಗಬೇಕಿತ್ತು.

ತನ್ನ ಗಂಡ ಬಾರ್ಲೆಟ್ಟಾಗೆ ಹೋದಾಗಲೆಲ್ಲ ಡಾನ್ ಆತನನ್ನು ಚೆನ್ನಾಗಿ ಸತ್ಕರಿಸುತ್ತಾನೆಂದು ಗ್ಯಾಮರ್ ಗೆಮ್ಮಟಾಳಿಗೆ ತಿಳಿದಿತ್ತು. ಆದರೆ ಡಾನ್ ತಮ್ಮ ಊರಿಗೆ ಬಂದಾಗ ಆತನನ್ನು ಕೊಟ್ಟಿಗೆಯಲ್ಲಿ ಮಲಗಿಸುವುದರಿಂದ ಆಕೆಗೆ ಬಹಳ ಬೇಸರವಾಗುತ್ತಿತ್ತು. ಬಹಳಷ್ಟು ಸಾರಿ ಡಾನ್ ಬಂದಾಗ ಗ್ಯಾಮರ್ ಗೆಮ್ಮಟ, ತಾನು ಹೋಗಿ ಪಕ್ಕದ ಮನೆಯಲ್ಲಿ ತನ್ನ ಗೆಳತಿಯ ಜೊತೆ ಮಲಗುವೆನೆಂದೂ, ಡಾನ್ ತನ್ನ ಗಂಡನ ಜೊತೆ ಹಾಸಿಗೆಯಲ್ಲಿ ಮಲಗಿರಬೇಕೆಂದು ವಿನಂತಿಸಿಕೊಳ್ಳುತ್ತಿದ್ದಳು. ಆದರೆ ಡಾನ್ ಎಂದೂ ಒಪ್ಪುತ್ತಿರಲಿಲ್ಲ. ಅಲ್ಲದೆ ಒಂದು ದಿನ, 'ಗ್ಯಾಮರ್ ಗೆಮ್ಮಟ, ನೀವೇನೂ ತೊಂದರೆ ತೆಗೆದುಕೊಳ್ಳಬೇಡಿ. ನಾನು ಆರಾಮವಾಗಿ ಕೊಟ್ಟಿಗೆಯಲ್ಲೇ ಮಲಗುತ್ತೇನೆ. ಅಲ್ಲದೆ ಬೇಕೆಂದಾಗ ನಾನು ನನ್ನ ಹೇಸರಕತ್ತೆಯನ್ನು ಮಂತ್ರ ಹೇಳಿ ಸುಂದರ ಯುವತಿಯನ್ನಾಗಿ ಮಾಡಿಕೊಳ್ಳಬಲ್ಲೆ ಹಾಗೂ ಸಾಕಾದಾಗ ಮತ್ತೆ ಹೇಸರಕತ್ತೆಯನ್ನಾಗಿ ಪರಿವರ್ತಿಸಿಕೊಳ್ಳಬಲ್ಲೆ. ಅದಕ್ಕೇ ನಾನು ನನ್ನ ಹೇಸರಕತ್ತೆಯನ್ನು ಬಿಟ್ಟಿರಲಾರೆ. ನಾನು ಕೊಟ್ಟಿಗೆಯಲ್ಲೇ ಮಲಗುತ್ತೇನೆ' ಎಂದ ತಮಾಷೆಗೆ.

ಪೆಟ್ರೋನ ಪತ್ನಿ ಅದನ್ನು ನಿಜವೆಂದು ನಂಬಿ ಆಶ್ಚರ್ಯಚಕಿತಳಾದಳು. ಅದೇ ದಿನ ತನ್ನ ಗಂಡನಿಗೆ ಆ ವಿಷಯ ತಿಳಿಸಿ, 'ನಿಮಗೆ ಡಾನ್ ಆತ್ಮೀಯ ಗೆಳೆಯ ಎನ್ನುತ್ತೀರಿ. ಆ ಮಂತ್ರ ನೀವೂ ಕಲಿತುಕೊಳ್ಳಿ. ಅದರಿಂದ ನೀವು ನನ್ನನ್ನು ಹೇಸರಕತ್ತೆಯನ್ನಾಗಿ ಮಾಡಬಹುದು ಹಾಗೂ ನಾನು ಮತ್ತು ನಿಮ್ಮ ಕತ್ತೆ ಇಬ್ಬರೂ ಸಹ ಸಂತೆಗೆ ವ್ಯಾಪಾರಕ್ಕೆ ಹೊರಟರೆ ಹೆಚ್ಚು ಸಾಮಾನು ಹೊತ್ತು ಹೆಚ್ಚು ವ್ಯಾಪಾರ ಮಾಡಿ ಹೆಚ್ಚು ಹಣ ಸಂಪಾದಿಸಬಹುದು. ವ್ಯಾಪಾರದ ನಂತರ ಮನೆಗೆ ಹಿಂತಿರುಗಿದ ನಂತರ ಪುನಃ ನೀವು ನನ್ನನ್ನು ಹೆಣ್ಣಾಗಿ ಮಾರ್ಪಡಿಸಬಹುದು' ಎಂದಳು. ಗಮಾರ ಪೆಟ್ರೊ ಸಹ ಆಕೆಯ ಮಾತನ್ನು ನಂಬಿದ ಹಾಗೂ ಅಂದಿನಿಂದ ಆ ಮಂತ್ರ ಹೇಳಿಕೊಡುವಂತೆ ಡಾನ್‌ನನ್ನು ಪೀಡಿಸತೊಡಗಿದ. ಡಾನ್, ತಾನು ಆ ರೀತಿ ತಮಾಷೆಗೆ ಹೇಳಿದುದೆಂದೂ, ಆ ರೀತಿ ಹೆಣ್ಣನ್ನು ಹೇಸರಕತ್ತೆಯನ್ನಾಗಿ ಹಾಗೂ ಹೇಸರಕತ್ತೆಯನ್ನು ಹೆಣ್ಣಾಗಿ ರೂಪಾಂತರಿಸಲು ಸಾಧ್ಯವಿಲ್ಲವೆಂದು ಎಷ್ಟು ಹೇಳಿದರೂ ಗಮಾರ ಪೆಟ್ರೊ ಹಿಡಿದ ಪಟ್ಟು ಬಿಡಲೇ ಇಲ್ಲ. ಕೊನೆಗೆ ಡಾನ್, 'ಆಯಿತು. ನಿನಗೆ ನಿನ್ನ ಹೆಂಡತಿಯನ್ನು ಹೇಸರಕತ್ತೆಯನ್ನಾಗಿ ಮಾಡಲೇ ಬೇಕೆಂದರೆ ನಾಳೆ ಬೆಳಗಿನ ಜಾವ ಹೇಗೆಂದು ತೋರಿಸಿಕೊಡುತ್ತೇನೆ. ಆದರೆ ಅದರಲ್ಲಿ ಅತಿ ಕಷ್ಟವಾದ ಕೆಲಸವೆಂದರೆ ಹೇಸರಕತ್ತೆಗೆ ಬಾಲ ಸಿಕ್ಕಿಸುವುದು. ಅದು ನಿನಗೇ ನಾಳೆ ತಿಳಿಯುತ್ತದೆ' ಎಂದ.

ಆ ದಿನ ರಾತ್ರಿ ಗಮಾರ ಪೆಟ್ರೊ ಹಾಗೂ ಗ್ಯಾಮರ್ ಗೆಮ್ಮಟ ಸರಿಯಾಗಿ ನಿದ್ರಿಸಲೇ ಇಲ್ಲ. ಬೆಳಗಾಗುವುದನ್ನೇ ಕಾಯುತ್ತಿದ್ದರು. ಬೆಳಕು ಹರಿಯುತ್ತಿರುವಂತೆ ಕೊಟ್ಟಿಗೆಯಲ್ಲಿ ಮಲಗಿದ್ದ ಡಾನ್‌ನನ್ನು ಎಬ್ಬಿಸಿದರು. ಡಾನ್ ಒಳಗೆ ಏನೂ ಬಟ್ಟೆ ಧರಿಸದೆ ಮೇಲೆ ಒಂದು ಉದ್ದನೆಯ ನಿಲುವಂಗಿ ಮಾತ್ರ ಧರಿಸಿ ಅವರ ಕೋಣೆಗೆ ಬಂದು, 'ಈ ಮಂತ್ರ ನಾನು ಇದುವರೆಗೆ ಯಾರಿಗೂ ಹೇಳಿಕೊಟ್ಟಿಲ್ಲ. ನೀವು ನನ್ನ ಗೆಳೆಯರಾದುದರಿಂದ ಹಾಗೂ ನೀವು ಹೇಳಿಕೊಡಲೇ ಬೇಕೆಂದು ಪಟ್ಟು ಹಿಡಿದಿರು ವುದರಿಂದ ನಿಮಗೆ ಹೇಳಿಕೊಡುತ್ತೇನೆ. ಆದರೆ ನೀವಿಬ್ಬರೂ ನಾನು ಹೇಳಿಕೊಟ್ಟಂತೆ ಮಾಡಬೇಕು' ಎಂದ. 'ಆಯಿತು ಮಾಡುತ್ತೇವೆ' ಎಂದರು ಗಂಡ ಹೆಂಡತಿ ಒಕ್ಕೊರಲಿನಿಂದ.

ಇನ್ನೂ ಕತ್ತಲಿದ್ದುದರಿಂದ ಡಾನ್ ಒಂದು ಮೇಣದ ಬತ್ತಿ ಹಚ್ಚಿ ಗಮಾರ ಪೆಟ್ರೋನ ಕೈಗೆ ಕೊಡುತ್ತಾ, 'ನಾನು ಮಾಡುವುದನ್ನೆಲ್ಲ ಸರಿಯಾಗಿ ಗಮನಿಸು ಹಾಗೂ ನಾನು ಹೇಳುವು ದನ್ನೆಲ್ಲ ನೆನಪಿನಲ್ಲಿಟ್ಟುಕೊ. ಮುಂದೆ ನಿನ್ನ ಹೆಂಡತಿ ಯನ್ನು ಹೇಸರಕತ್ತೆಯನ್ನಾಗಿ ಮಾಡಬೇಕಾದಾಗ ನೀನೂ ಹಾಗೇ ಮಾಡಬೇಕಾಗುತ್ತದೆ. ಆದರೆ ಈಗ ನೀನು ನೋಡುವುದು ಏನೇ ಆಗಿದ್ದರೂ ಮಧ್ಯೆ ಮಾತನಾಡಲೇಬಾರದು. ಮಾತನಾಡಿದರೆ ಎಲ್ಲಾ ಹಾಳಾಗುತ್ತದೆ. ಬಾಲ ಸರಿಯಾಗಿ ಸಿಕ್ಕಿಕೊಳ್ಳಲೆಂದು ದೇವರನ್ನು ಪ್ರಾರ್ಥಿಸುತ್ತಿರು' ಎಂದ.

'ಆಯಿತು, ಎಲ್ಲವನ್ನೂ ಗಮನಿಸುತ್ತಿರುತ್ತೇನೆ ಹಾಗೂ ಮಧ್ಯೆ ಮಾತನಾಡುವುದಿಲ್ಲ' ಎಂದು ಹೇಳಿ ಪೆಟ್ರೊ ಮೋಂಬತ್ತಿ ಹಿಡಿದು ನಿಂತ. ಗ್ಯಾಮರ್ ಗೆಮ್ಮಟಾಳಿಗೆ ಬಟ್ಟೆ ಎಲ್ಲವನ್ನೂ ಬಿಚ್ಚಿ ಬೆತ್ತಲಾಗುವಂತೆ ಹೇಳಿ ಆಕೆ ಹೇಸರಕತ್ತೆಯಂತೆ ನೆಲದ ಮೇಲೆ ಬಾಗಿ ನಾಲ್ಕು ಕಾಲಿನಲ್ಲಿ ನಿಲ್ಲುವಂತೆ ಹೇಳಿದ ಹಾಗೂ ಆಕೆ ಸಹ ತಾನು ಏನು ಮಾಡಿದರೂ ಮಧ್ಯೆ ಮಾತನಾಡಬಾರದೆಂದು ಎಚ್ಚರಿಕೆ ನೀಡಿದ ಡಾನ್. ಆಕೆ ಆಯಿತೆಂದಳು.

ಡಾನ್ ಆಕೆಯ ಮುಖ, ತಲೆ ನೇವರಿಸಿ, 'ಇದು ಹೇಸರಕತ್ತೆಯ ಸುಂದರ ತಲೆಯಾಗುತ್ತದೆ' ಎಂದ. ನಂತರ ಅಕೆಯ ತಲೆಗೂದಲು ನೇವರಿಸಿ, 'ಇದು ಹೇಸರಕತ್ತೆಯ ಸುಂದರ ಕೇಸರವಾಗುತ್ತದೆ' ಎಂದ; ನಂತರ ಆಕೆಯ ಕೈಗಳನ್ನು ಸವರಿ 'ಇದು ಹೇಸರಕತ್ತೆಯ ಬಲಿಷ್ಠ ಮುಂಗಾಲುಗಳಾಗುತ್ತವೆ' ಎಂದ; ನಂತರ ಆಕೆಯ ಮೊಲೆಗಳ ಮೇಲೆ ಕೈಯಾಡಿಸಿದ; ಅವು ದುಂಡಗೆ ದಷ್ಟಪುಷ್ಟವಾಗಿದ್ದವು. ಬಹಳ ಹೊತ್ತು ಹಾಗೇ ಕೈಯಾಡಿಸುತ್ತಿದ್ದ. ಅಷ್ಟರಲ್ಲಿ ಡಾನ್‌ನಲ್ಲಿದ್ದ ಬಾಲ ಮಿಸುಕಾಡಿ ಎಚ್ಚರಾಗತೊಡಗಿತ್ತು. 'ಇದು ಹೇಸರಕತ್ತೆಯ ಸುಂದರ ಎದೆಯಾಗುತ್ತದೆ' ಎಂದ ಹಾಗೂ ಅದೇ ರೀತಿ ಆಕೆಯ ಬೆನ್ನು ಹೊಟ್ಟೆ, ತೊಡೆ, ಹಿಂಭಾಗ ಎಲ್ಲಾ ಬೇಕಾದಷ್ಟು ಸವರಿ ಹೇಸರಕತ್ತೆಯ ಆಯಾ ಭಾಗಗಳಾಗುತ್ತವೆ ಎಂದ ಡಾನ್. ಕೊನೆಗೆ ಬಾಲವೊಂದನ್ನು ಬಿಟ್ಟು ಎಲ್ಲಾ ಅಂಗಾಂಗಗಳ ಬಗ್ಗೆ ತಿಳಿಸಿದ. ಬಾಲ ಸಿಕ್ಕಿಸುವುದೊಂದು ಮಾತ್ರ ಬಾಕಿ ಉಳಿಯಿತು. ಡಾನ್ ಗ್ಯಾಮರ್ ಗೆಮ್ಮಟಾಳ ಹಿಂಭಾಗದಲ್ಲಿ ನಿಂತು ತನ್ನ ನಿಲುವಂಗಿಯ ಮುಂಭಾಗ ಮೇಲಕ್ಕೆತ್ತಿ ತನ್ನಲ್ಲಿ ತಯಾರಿದ್ದ ಬಾಲವನ್ನು ಅವಳಿಗೆ ಹಿಂಭಾಗದಿಂದ ಸಿಕ್ಕಿಸಿ, 'ಇದು ಹೇಸರಕತ್ತೆಯ ಸುಂದರ ಬಾಲವಾಗುತ್ತದೆ' ಎಂದ.

ಇದುವರೆಗೂ ಸುಮ್ಮನಿದ್ದ ಗಮಾರ ಪೆಟ್ರೊ, ಬಾಲ ಸಿಕ್ಕಿಸುವುದನ್ನು ಮಾತ್ರ ಒಪ್ಪಲಿಲ್ಲ. 'ಹೋ ಡಾನ್! ನನ್ನ ಹೇಸರಕತ್ತೆಗೆ ಬಾಲ ಬೇಡ! ಬಾಲ

ಬೇಡ!' ಎಂದು ಕೂಗಿದ. ಡಾನ್ ಏನೂ ಕೇಳಿಸದಿರುವವನಂತೆ ಬಾಲವನ್ನು ಆದಷ್ಟು ಒಳಕ್ಕೆ ತೂರಿಸಲು ಪ್ರಯತ್ನಿಸುತ್ತಿದ್ದ. ಕೊನೆಗೆ, 'ಹೋ ಪೆಟ್ರೊ! ಎಂಥ ಕೆಲಸ ಮಾಡಿದೆ! ನಾನು ನಿನಗೆ ಹೇಳಿರಲಿಲ್ಲವೆ, ಏನು ನೋಡಿದರೂ ಮಧ್ಯೆ ಮಾತನಾಡಬೇಡವೆಂದು. ಇನ್ನೇನು ಹೇಸರಕತ್ತೆ ತಯಾರಾಗಿಬಿಡುತ್ತಿತ್ತು. ಅಷ್ಟರಲ್ಲಿ ನೀನು ಎಲ್ಲಾ ಹಾಳುಮಾಡಿದೆ. ಮತ್ತೆ ಎಲ್ಲಾ ಪ್ರಾರಂಭಿಸಲು ಈ ದಿನ ಸಾಧ್ಯವೇ ಇಲ್ಲ' ಎಂದ ಡಾನ್ ಸಿಕ್ಕಿಸಿದ್ದ ತನ್ನ ಬಾಲವನ್ನು ಹೊರಗೆ ತೆಗೆಯುತ್ತ. ಅಷ್ಟರಲ್ಲಿ ಬಾಲ ತನ್ನ ಕೆಲಸವನ್ನು ಮುಗಿಸಿತ್ತು.



'ಸಾಕು, ಸಾಕು' ಎಂದ ಪೆಟ್ರೊ, 'ಆದರೆ ನನ್ನ ಹೇಸರಕತ್ತೆಗೆ ಅಂತಹ ಬಾಲ ಬೇಕಿರಲಿಲ್ಲ. ನೀನು ಮೊದಲೇ ಹೇಳಿದ್ದರೆ ನನ್ನದೇ ಬಾಲ ಸಿಕ್ಕಿಸುತ್ತಿದ್ದೆ. ಅಲ್ಲದೆ ನೀನು ಬಾಲವನ್ನು ತೀರಾ ಕೆಳಗೆ ಸಿಕ್ಕಿಸಿದ್ದೆ' ಎಂದ.

'ಇದು ಮೊದಲನೇ ಬಾರಿಯಾದುದರಿಂದ, ನಿನಗೆ ತಿಳಿಯುವುದಿಲ್ಲವೆಂದು ನಾನೇ ಬಾಲ ಸಿಕ್ಕಿಸಿದೆ' ಎಂದ ಡಾನ್.

ಡಾನ್ ಹಾಗೂ ಪೆಟ್ರೊ ವಾದವಿವಾದ ನಡೆಸುತ್ತಿರುವಾಗ ಮೇಲಕ್ಕೆದ್ದ ಗ್ಯಾಮರ್ ಗೆಮ್ಮಟ ತನ್ನ ಗಂಡನನ್ನು ಉದ್ದೇಶಿಸಿ, 'ನೀನೊಬ್ಬ ಮೂರ್ಖ. ನಿನ್ನ ವ್ಯಾಪಾರ ಹಾಳು ಮಾಡಿಕೊಳ್ಳುವುದರ ಜೊತೆಗೆ ನನ್ನದನ್ನೂ ಹಾಳು ಮಾಡಿದೆ. ಬಾಲ ಇಲ್ಲದಿರುವ ಹೇಸರಕತ್ತೆಯನ್ನು ಎಲ್ಲಾದರೂ ನೋಡಿದ್ದೀಯ? ನೀನು ಈಗಲೇ ಬಡವ. ಇದೇ ರೀತಿ ಇದ್ದರೆ ಮುಂದೆ ಇನ್ನೂ ಬಡವನಾಗುತ್ತೀಯೆ' ಎಂದು ಹೇಳಿ ಬೇಸರದಿಂದ ಬಟ್ಟೆ ಧರಿಸಿ ಹೊರನಡೆದಳು.

ಪೆಟ್ರೊ ಅಂದಿನಿಂದ ಮಾಮೂಲಿನಂತೆ ತನ್ನ ಹಳೆಯ ಕತ್ತೆಯೊಂದಿಗೇ ವ್ಯಾಪಾರಕ್ಕೆ ಹೊರಟ ಹಾಗೂ ಡಾನ್‌ನನ್ನು ಹೆಣ್ಣನ್ನು ಹೇಸರಕತ್ತೆಯನ್ನಾಗಿಸುವ ಮಂತ್ರ ಹೇಳಿಕೊಡೆಂದು ಮತ್ತೆಂದೂ ಕೇಳಲಿಲ್ಲ.

ಕಣಿವೆಯ ಮನೆಯಲ್ಲೊಂದು ರಾತ್ರಿ

ಮುಗ್ನೋನ್ ಕಣಿವೆಯಲ್ಲಿ ಒಬ್ಬಾತ ತನ್ನ ಸುಂದರ ಪತ್ನಿ, ಹದಿಹರೆಯದ ಪುತ್ರಿ ಹಾಗೂ ಒಂದು ಹಸುಗೂಸಿನೊಂದಿಗೆ ಒಂದು ಪುಟ್ಟ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದ. ಆತ ಉದಾತ್ತಭಾವದವನಾಗಿದ್ದು ಆ ಹಾದಿಯಲ್ಲಿ ಹಾದುಹೋಗುವ ಪ್ರಯಾಣಿಕರಿಗೆ ಆಹಾರ, ನೀರು ಒದಗಿಸುತ್ತಿದ್ದ. ತನ್ನ ಮನೆ ಸಣ್ಣದಿದ್ದರೂ ಸಹ ತೀರಾ ಅವಶ್ಯಕತೆಯಿದ್ದವರಿಗೆ ವಸತಿ ವ್ಯವಸ್ಥೆ ಸಹ ಮಾಡಿಕೊಡುತ್ತಿದ್ದ.

ಆ ಹಾದಿಯಲ್ಲಿ ಹಲವಾರು ಬಾರಿ ಹಾದುಹೋಗಿದ್ದ ಪಿನೋಕ್ಸಿಯೊ ಎಂಬ ಯುವಕ ಕಣಿವೆ ಮನೆಯಾತನ ಪುತ್ರಿಯಾದ ನಿಕ್ಕೊಲಾಸಾಳೊಂದಿಗೆ ಪ್ರೇಮಪಾಶದಲ್ಲಿ ಬಿದ್ದ. ಆಕೆ ಸಹ ಪಿನೋಕ್ಸಿಯೋನ ಪ್ರೇಮದ ಕರೆಗೆ ಓಗೊಟ್ಟಿದ್ದಳು. ದಿನ ಕಳೆದಂತೆ ಅವನ ಪ್ರೇಮದ ನೋವು ಹೆಚ್ಚಾಗಿ ಹೇಗಾದರೂ ಆಕೆಯೊಂದಿಗೆ ಒಂದು ರಾತ್ರಿ ಕಳೆಯಬೇಕೆಂದು ತೀರ್ಮಾನಿಸಿದ.

ಇವರ ಪ್ರೇಮ ವ್ಯವಹಾರ ತಿಳಿದಿದ್ದ ಅಡ್ರಿಯಾನೊ ಎಂಬ ಆಪ್ತ ಗೆಳೆಯನೊಂದಿಗೆ ಪಿನೋಕ್ಸಿಯೊ ಎರಡು ಬಾಡಿಗೆ ಕುದುರೆ ಪಡೆದು ವ್ಯಾಪಾರಸ್ಥರಂತೆ ವೇಷ ಧರಿಸಿ ಕತ್ತಲಾಗುವ ಹೊತ್ತಿಗೆ ಮುಗ್ನೋನ್ ಕಣಿವೆಯ ಮನೆ ತಲುಪಿದರು. ಮನೆಯ ಬಾಗಿಲು ತಟ್ಟಿ, 'ನಾವು ಫ್ಲಾರೆನ್ಸ್ ನಗರ ತಲುಪಬಹುದೆಂದು ಹೊರಟಿದ್ದೆವು. ಆದರೆ ಇಲ್ಲಿಗೆ ತಲುಪುವಷ್ಟರಲ್ಲಿಯೇ ಕತ್ತಲಾಗಿದೆ. ಆದುದರಿಂದ ನಮಗೆ ಈ ರಾತ್ರಿ ನಿಮ್ಮ ಮನೆಯಲ್ಲಿಯೇ ಉಳಿಯುವ ವ್ಯವಸ್ಥೆ ಮಾಡಿಕೊಡಬೇಕು' ಎಂದು ಮನೆಯಾತನನ್ನು ಕೇಳಿಕೊಂಡರು. ಅದಕ್ಕೆ ಮನೆಯಾತ ಸಂಕೋಚದಿಂದ, 'ನಿಮಗೇ ಗೊತ್ತಿದೆ ನನ್ನದು ಚಿಕ್ಕ ಮನೆಯೆಂದು. ಆದರೆ ನಿಮಗೂ ಬೇರೆ ದಾರಿಯಿಲ್ಲ. ನನ್ನ ಕೈಲಾದಮಟ್ಟಿಗೆ ನಿಮಗೆ ಮಲಗಲು ವ್ಯವಸ್ಥೆ ಮಾಡಿಕೊಡುತ್ತೇನೆ' ಎಂದ.

ಆ ಚಿಕ್ಕ ಮನೆಯಲ್ಲಿ ಮಲಗಲು ಒಂದೇ ಕೋಣೆ ಇದ್ದುದರಿಂದ

ಬೊಕಾಷಿಯೋನ ಡೆಕಮೆರಾನ್

ಎಲ್ಲರೂ ಅಲ್ಲೇ ಮಲಗಬೇಕಿತ್ತು. ಒಂದು ಗೋಡೆಯ ಬದಿಗೆ ಒಂದು ಹಾಸಿಗೆ ಹಾಸಿ ಅದರ ಎದುರು ಗೋಡೆಯ ಬದಿಗೆ ಮತ್ತೊಂದು ಹಾಸಿಗೆ ಹಾಸಿದರು. ಅತಿಥಿಗಳು ತಂದ ಬುತ್ತಿ ತಿಂದ ನಂತರ ಇಬ್ಬರೂ ಒಂದು



ಹಾಸಿಗೆಯಲ್ಲಿ ಮಲಗಿದರು. ಸ್ವಲ್ಪ ಹೊತ್ತಿಗೆ ನಿದ್ದೆ ಹೋದವರಂತೆ ನಟಿಸಿದರು. ಅದನ್ನೇ ಕಾಯುತ್ತಿದ್ದ ಮನೆಯಾತ ತನ್ನ ಪುತ್ರಿ ನಿಕ್ಕೊಲಾಸಾಳನ್ನು ಎರಡನೇ ಹಾಸಿಗೆಯಲ್ಲಿ ಮಲಗುವಂತೆ ಹೇಳಿ, ತಾನೂ ತನ್ನ ಪತ್ನಿ ಮೂರನೆ ಹಾಸಿಗೆಯಲ್ಲಿ ಮಲಗಿದರು. ಹಸುಗೂಸಿದ್ದ ತೊಟ್ಟಿಲನ್ನು ಪತ್ನಿ ತನ್ನ ಹಾಸಿಗೆಯ ಕಾಲ ಬಳಿ ಇಟ್ಟುಕೊಂಡಳು.

ಪಿನೋಕ್ಸಿಯೊ ನಿದ್ರಿಸಿದಂತೆ ನಟಿಸಿ ಈ ವ್ಯವಸ್ಥೆಯನ್ನೆಲ್ಲಾ ಗಮನಿಸುತ್ತಿದ್ದ. ಮನೆಯಾತ ದೀಪವಾರಿಸಿ ಮಲಗಿದನಂತರ ಪಿನೋಕ್ಸಿಯೊ ಸದ್ದಾಗದಂತೆ ಎದ್ದು ನಿಕ್ಕೊಲಾಸಾಳ ಹಾಸಿಗೆ ಸೇರಿಕೊಂಡ. ಆಕೆಗೆ ಒಂದರೆಕ್ಷಣ ಅಂಜಿಕೆಯಾದರೂ ಪ್ರಿಯಕರನನ್ನು ತಬ್ಬಿದಳು. ಇಬ್ಬರೂ ತಮ್ಮ ಪ್ರೇಮದ ನೋವನ್ನು ತೀರಿಸಿಕೊಳ್ಳತೊಡಗಿದರು. ಅದೇ ಹೊತ್ತಿಗೆ ಅಡುಗೆಮನೆಯಲ್ಲಿ ಬೆಕ್ಕೊಂದು ಪಾತ್ರೆ ಬೀಳಿಸಿ ಸದ್ದು ಮಾಡಿತು. ಎಚ್ಚರಗೊಂಡ ಪತ್ನಿ ಗೊಣಗುತ್ತ ಕತ್ತಲಲ್ಲೇ ಅಡುಗೆ ಮನೆಗೆ ಎದ್ದು ಹೋದಳು. ಅದೇ ಕ್ಷಣ ಇದಾವುದರ ಅರಿವಿಲ್ಲದ ಅಡ್ರಿಯಾನೊ ಪ್ರಕೃತಿಯ ಕರೆಗೆಂದು ಎದ್ದು ಹೊರಹೊರಟ. ಕತ್ತಲಲ್ಲಿ ಕಾಲಿಗೆ ತೊಟ್ಟಿಲು ತೊಡರಿದ್ದರಿಂದ ಅದನ್ನು ಎತ್ತಿ ತನ್ನ ಹಾಸಿಗೆಯ

ಕಾಲಬಳಿ ಇಟ್ಟು ಹೊರಗೆ ಹೋಗಿ ಬಂದು ಮಲಗಿದ. ಮಲಗುವಾಗ ಮತ್ತೆ ತೊಟ್ಟಿಲು ಎತ್ತಿ ಸ್ವಸ್ಥಾನಕ್ಕೆ ಇಡುವುದನ್ನು ಮರೆತ. ಇತ್ತ ಅಡುಗೆಮನೆಯಲ್ಲಿ ಪಾತ್ರೆ ಎತ್ತಿಟ್ಟು ಬಂದ ಪತ್ನಿ ಮಲಗಲು ತನ್ನ ಗಂಡನ ಹಾಸಿಗೆಯ ಬಳಿ



1554ರ ವೆನಿಸ್ ಆವೃತ್ತಿಯ ಮರದಚ್ಚು ಚಿತ್ರ

ಹೋದಳು. ಕಾಲ ಬಳಿ ತೊಟ್ಟಿಲು ಇಲ್ಲದ್ದು ಕಂಡು, 'ಹೋ ದೇವರೆ! ಎಂಥ ಕೆಲಸ ಮಾಡಿಬಿಡುತ್ತಿದ್ದೆ! ಮನೆಗೆ ಬಂದ ಅತಿಥಿಯ ಪಕ್ಕದಲ್ಲಿ ಮಲಗಿಬಿಡುತ್ತಿದ್ದೆನಲ್ಲ!' ಎಂದುಕೊಂಡು ಹಾಗೇ ಕತ್ತಲಲ್ಲಿ ತಡವಿ ಅಡ್ರಿಯಾನೊ ಹಾಸಿಗೆಯ ಬಳಿ ತೊಟ್ಟಿಲನ್ನು ಕಂಡು ಅದೇ ತನ್ನ ಹಾಸಿಗೆಯೆಂದು ತಿಳಿದು ಮಲಗಿದಳು. ಇನ್ನೂ ನಿದ್ದೆ ಮಾಡಿರದಿದ್ದ ಅಡ್ರಿಯಾನೊ ಮನೆಯಾತನ ಸುಂದರ ಪತ್ನಿ ತನ್ನ ಪಕ್ಕ ಮಲಗಿದ್ದು ಕಂಡು ಇಂತಹ ಅವಕಾಶ ಮತ್ತೊಮ್ಮೆ ಸಿಗುವುದಿಲ್ಲವೆಂದು ಊಹಿಸಿದ. ಸಿಕ್ಕ ಅವಕಾಶ ಬಿಡಬಾರದೆಂದು ಆಕೆಯನ್ನು ತಬ್ಬಿ ಆಕೆಗೆ ಮಾತನಾಡಲೂ ಬಿಡದೆ ಆಕೆಯನ್ನು ಸ್ವರ್ಗಕ್ಕೇರಿಸಿಬಿಟ್ಟ. ಬಹಳ ದಿನಗಳ ನಂತರ ತನ್ನ ಗಂಡ ಅತ್ಯಂತ ಹುರುಪು ಹಾಗೂ ಬಿರುಸಿನಿಂದ ಇರುವನೆಂದು ತಿಳಿದು ಆಕೆಗೂ ಸಂತೋಷವಾಯಿತು.

ಇತ್ತ ಸ್ವರ್ಗದ ಮತ್ತೊಂದು ಮಗ್ಗುಲಲ್ಲಿದ್ದ ಪಿನೋಕ್ಸಿಯೊ ತನ್ನ ಪ್ರೇಯಸಿ ನಿಕ್ಕೊಲಾಸಾಳೊಂದಿಗೆ ಅತ್ಯಂತ ಸುಖದ ಕ್ಷಣಗಳನ್ನು ಕಳೆದು ಹಾಗೇ ಇದ್ದಲ್ಲಿ ಬೆಳಗಿದ ತಾನು ನಿದ್ರಿಸಿಬಿಡಬಹುದೆಂದು ಹೆದರಿ ಕತ್ತಲಲ್ಲಿ ಎದ್ದು ತನ್ನ ಹಾಸಿಗೆಗೆ ತಡಕಾಡತೊಡಗಿದ. ಅಡ್ರಿಯಾನೊ ಹಾಸಿಗೆಯ ಕಾಲಬಳಿ ತೊಟ್ಟಿಲಿದ್ದದ್ದು ಕಂಡು ಅದು ಮನೆಯಾತನ ಹಾಗೂ ಆತನ

ಪತ್ನಿಯ ಹಾಸಿಗೆಯೆಂದು ತಿಳಿದು ಮೂರನೇ ಹಾಸಿಗೆಗೆ ಹೋಗಿ ಮನೆಯಾತನ ಪಕ್ಕದಲ್ಲಿಯೆ ಮಲಗಿದ. ಮಲಗಿದ್ದ ಮನೆಯಾತನನ್ನು ತನ್ನ ಗೆಳೆಯ ಅಡ್ರಿಯಾನೊ ಎಂದುಕೊಂಡು ನಿದ್ರಿಸುತ್ತಿದ್ದ ಆತನನ್ನು ಎಬ್ಬಿಸಿ, 'ನಾನು ನಿನಗೆ ಹೇಳಿರಲಿಲ್ಲವೆ! ಹೋ! ನಿಕ್ಕೊಲಾಸಾಳದು ಎಂತಹ ಅದ್ಭುತ ದೇಹ! ಒಬ್ಬ ಗಂಡು ಒಂದು ಹೆಣ್ಣಿನಿಂದ ಎಷ್ಟು ಸುಖ ಪಡೆಯಲು ಸಾಧ್ಯವೊ, ಅಷ್ಟನ್ನೂ ನಾನಿಂದು ಪಡೆದೆ. ಆ ಮಾಯಾನಗರದಿಂದ ಹೊರಬರುವ ಮೊದಲು ನಾನು ಆರು ಬಾರಿ ಪ್ರವೇಶಿಸಿದ್ದೆ!!' ಎಂದ ಸುಖದ ಅಮಲಿನಲ್ಲಿ.

ನಿದ್ದೆಯಿಂದ ಎಚ್ಚೆತ್ತ ಮನೆಯ ಯಜಮಾನ, ಮಾತನಾಡುತ್ತಿರುವವನು ಪಿನೊಕ್ಸಿಯೊ ಎಂದು ತಿಳಿದು, ಸಿಟ್ಟಿನಿಂದ, 'ಪಿನೊಕ್ಸಿಯೊ! ಎಂಥ ಕೆಲಸ ಮಾಡಿದ್ದೀಯ!! ನನ್ನ ಮಗಳಿಗೇಕೆ ಹಾಗೆ ಮಾಡಿದೆ? ನಾನು ನಿನಗೆ ತಕ್ಕ ಶಾಸ್ತಿ ಮಾಡುತ್ತೇನೆ!' ಎಂದರಚಿದ.

ದಡ್ಡ ಪಿನೋಕ್ಸಿಯೊ ಏನೂ ಹೇಳಲು ತೋಚದೆ, 'ನೀನು ನನಗೇನು ಮಾಡುತ್ತೀಯ? ನಿನ್ನಿಂದ ಏನು ಮಾಡಲು ಸಾಧ್ಯ?' ಎಂದ. ಅವರ ಮಾತುಕತೆ ಕೇಳಿಸಿಕೊಂಡ ಮನೆಯಾತನ ಪತ್ನಿ, ತನ್ನ ಮೇಲಿರುವ ಅಡ್ರಿಯಾನೊ ತನ್ನ ಪತಿಯೆಂದೇ ತಿಳಿದು, 'ನೋಡಿ, ಅತಿಥಿಗಳೇನೋ ಕಚ್ಚಾಡುತ್ತಿದ್ದಾರೆ' ಎಂದಳು. ಎಲ್ಲವನ್ನೂ ಕೇಳಿಸಿಕೊಂಡಿದ್ದ ಅಡ್ರಿಯಾನೊ ನಗುತ್ತಾ, 'ಕಚ್ಚಾಡಲಿ ಬಿಡು. ರಾತ್ರಿ ಅವರೆಲ್ಲೋ ಹೆಚ್ಚಾಗಿ ಕುಡಿದಿರಬೇಕು' ಎಂದ. ಅಡ್ರಿಯಾನೋನ ಧ್ವನಿ ಕೇಳಿದ ತಕ್ಷಣ ತಾನು ಯಾರ ಹಾಸಿಗೆಯಲ್ಲಿರುವೆನೆಂದು ಅರಿವಾಯಿತು. ಚತುರಳಾದ ಆಕೆ ತಕ್ಷಣ ಅಡ್ರಿಯಾನೋನನ್ನು ಪಕ್ಕಕ್ಕೆ ತಳ್ಳಿ, ಎದ್ದು ತನ್ನ ಮಗುವಿನ ತೊಟ್ಟಿಲೆತ್ತಿಕೊಂಡು ಕತ್ತಲಲ್ಲಿ ದಾರಿ ಮಾಡಿಕೊಂಡು ತನ್ನ ಮಗಳಾದ ನಿಕ್ಕೊಲಾಸಾಳ ಹಾಸಿಗೆಗೆ ಹೋಗಿ ಅವಳ ಪಕ್ಕ ಮಲಗಿಕೊಂಡಳು. ಗಂಡನ ಕೂಗಾಟದಿಂದ ಆಗ ತಾನೆ ನಿದ್ದೆಯಿಂದ ಎಚ್ಚೆತ್ತವಳಂತೆ ನಟಿಸುತ್ತ ತನ್ನ ಗಂಡ ಜಗಳವಾಡುತ್ತಿರುವುದು ಯಾರೊಂದಿಗೆ ಹಾಗೂ ಏಕೆಂದು ಕೇಳಿದಳು. ಅದಕ್ಕೆ ಆತ, 'ಇಲ್ಲಿ ಕೇಳಿದೆಯಾ ಪಿನೊಕ್ಸಿಯೊ ಏನು ಹೇಳುತ್ತಿದ್ದಾನೆ! ಅವನು ನಮ್ಮ ನಿಕ್ಕೊಲಾಸಾಳ ಜೊತೆ ಮಲಗಿದ್ದನಂತೆ!' ಎಂದ. ಅದಕ್ಕೆ ಆತನ ಪತ್ನಿ, 'ಸಾಧ್ಯವೇ ಇಲ್ಲ. ಅವನು ಸುಳ್ಳು ಹೇಳುತ್ತಿದ್ದಾನೆ. ನಿಕ್ಕೊಲಾಸಾಳೊಂದಿಗೆ ನಾನು ಮಲಗಿದ್ದೇನೆ. ಆತನ ಮಾತು ನಂಬಲು ನೀನೊಬ್ಬ ಮೂರ್ಖ. ಸಂಜೆ ಸಿಕ್ಕಾಪಟ್ಟೆ ಕುಡಿಯುತ್ತೀಯ! ಬೇಡಬೇಡವೆಂದರೂ ಕೇಳುವುದಿಲ್ಲ. ಅದಿರಲಿ, ಪಿನೊಕ್ಸಿಯೊ ನಿನ್ನ ಹಾಸಿಗೆಯಲ್ಲೇನು ಮಾಡುತ್ತಿದ್ದಾನೆ?' ಎಂದಳು.



ಆ ಚತುರ ಹೆಂಗಸು ಹೇಗೆ ತನ್ನ ಮಾತಿನಿಂದ ತನ್ನನ್ನು ಹಾಗೂ ತನ್ನ ಮಗಳನ್ನು ಕಾಪಾಡಿದಳೆಂದು ತಿಳಿದ ಅಡ್ರಿಯಾನೊ, ಈಗ ತಾನು ತನ್ನ ಗೆಳೆಯನನ್ನು ಕಾಪಾಡಬೇಕೆಂದು, 'ಪಿನೊಕ್ಸಿಯೊ, ನಾನು ನಿನಗೆ ಸಾವಿರಬಾರಿ ಹೇಳಿದ್ದೇನೆ, ಈ ರೀತಿ ಮನೆಬಿಟ್ಟು ಬೇರೆಡೆ ಮಲಗಬೇಡವೆಂದು. ನಿನಗೆ ಮೊದಲೇ ನಿದ್ದೆಯಲ್ಲಿ ನಡೆದಾಡುವ ಅಭ್ಯಾಸವಿದೆ, ಜೊತೆಗೆ ನಿನ್ನ ಕನಸಲ್ಲಿ ಕಾಣುವುದನ್ನೆಲ್ಲಾ ಮಾತನಾಡಿಬಿಡುತ್ತೀಯಾ. ಎದ್ದು ಬಾ' ಎಂದು ಕರೆದ.

ತನ್ನ ಪತ್ನಿ ಹಾಗೂ ಅಡ್ರಿಯಾನೋನ ಮಾತುಗಳನ್ನು ಕೇಳಿದ ಮನೆಯ ಯಜಮಾನ, ಪಿನೊಕ್ಸಿಯೊ ಕನಸು ಕಾಣುತ್ತಿದ್ದಾನೆಂದು ತಿಳಿದು, 'ಪಿನೊಕ್ಸಿಯೊ! ಏಳು, ಎದ್ದೇಳು. ನಿನ್ನ ಹಾಸಿಗೆಗೆ ಹೋಗು' ಎಂದು ಆತನ ಭುಜ ಹಿಡಿದು ಅಲುಗಾಡಿಸಿದ. ಇವರೆಲ್ಲರ ಮಾತು ಕೇಳಿ ನಿದ್ರಿಸುವವನಂತೆ ನಟಿಸುತ್ತಿದ್ದ ಪಿನೊಕ್ಸಿಯೊ ಗಡಬಡಿಸಿದವನಂತೆ ಎಚ್ಚೆತ್ತವನಂತೆ ನಟಿಸಿ, 'ಏನು ಬೆಳಗಾಯಿತೆ? ನನ್ನನ್ಯಾಕೆ ಎಬ್ಬಿಸಿದಿರಿ?' ಎಂದ. ಅಡ್ರಿಯಾನೊ ಮತ್ತೆ ಕರೆದ ನಂತರ ನಿದ್ದೆಯಲ್ಲಿ ತಡವರಿಸುವವನಂತೆ ನಟಿಸುತ್ತಾ ತನ್ನ ಹಾಸಿಗೆಗೆ ಹೋಗಿ ಮಲಗಿದ. ಮನೆಯ ಯಜಮಾನ ಅವನ ಪರಿಸ್ಥಿತಿ ನೋಡಿ ಮನಸಾರೆ ನಕ್ಕ.

ಬೆಳಗಾದ ನಂತರ ಮನೆಯ ಯಜಮಾನ ಮತ್ತೊಮ್ಮೆ ಪಿನೊಕ್ಸಿಯೋನ ನಿದ್ದೆಯಲ್ಲಿನ ನಡಿಗೆಯ ಬಗ್ಗೆ ಹಾಗೂ ಮಾತುಗಳ ಬಗ್ಗೆ ಹೇಳಿ ತಮಾಷೆ ಮಾಡಿ ಅತಿಥಿಗಳನ್ನು ಬೀಳ್ಕೊಟ್ಟ.

ಅತಿಥಿಗಳು ಹೊರಟ ನಂತರ ತಾಯಿ, ತನ್ನ ಮಗಳನ್ನು 'ನಿಜ ಹೇಳೆಂದು' ತರಾಟೆಗೆ ತೆಗೆದುಕೊಂಡಳು. ನಿಕ್ಕೊಲಾಸ ಪ್ರಮಾಣ ಮಾಡಿ, ತನಗೇನೂ ಗೊತ್ತಿಲ್ಲವೆಂದೂ, ತಾನು ನಿದ್ರಿಸುತ್ತಿದ್ದೆನೆಂದೂ, ಪಿನೊಕ್ಸಿಯೋ ಕನಸಿನಲ್ಲೇ ಮಾತನಾಡಿರಬಹುದೆಂದಳು. ಅಡ್ರಿಯಾನೋನ ಬಿಸಿಯಪ್ಪುಗೆ ನೆನಪಿಸಿಕೊಂಡ ತಾಯಿ ರಾತ್ರಿ ಎಚ್ಚರವಿದ್ದುದು ತಾನೊಬ್ಬಳೇ ಎಂದುಕೊಂಡಳು.

ಗಂಡನ ಬಸಿರು

ಫ್ಲಾರೆನ್ಸ್ ನಗರದಲ್ಲಿ ಕೆಲಾಂಡ್ರಿನೊ ಎಂಬ ಶತದಡ್ಡನಿದ್ದ. ಅವನು ದಡ್ಡನಷ್ಟೇ ಅಲ್ಲ ಅತ್ಯಂತ ಖಂಜೂಸಿಯೂ ಆಗಿದ್ದ. ಅವನ ಸೋದರತ್ತೆ ಸತ್ತುಹೋದಾಗ ಆಕೆಯ ಬಳಿಯಿದ್ದ ಇನ್ನೂರು ಲೈರ್‌ಗಳ ಪುಡಿಗಾಸು ಅವನ ಪಾಲಿಗೆ ಬಂದಿತ್ತು. ತನಗೆ ಅಪಾರ ಆಸ್ತಿ, ಹಣಕಾಸು ದೊರಕಿರುವಂತೆ ಅವನು ಆ ಹಣದಿಂದ ತಾನೊಂದು ತೋಟವನ್ನು ಖರೀದಿಸುವುದಾಗಿ ಊರೆಲ್ಲಾ ಹೇಳಿಕೊಂಡು ತಿರುಗಿದ. ಜಮೀನು ಮಾರುವಂತಹವರ ಬಳಿ ಕೂತು ವ್ಯಾಪಾರ ಮಾಡುತ್ತಿದ್ದ. ಆದರೆ ಹಣಪಾವತಿಯ ವಿಷಯ ಬಂದಾಗ ಅವನ ವ್ಯಾಪಾರ ಮುರಿದುಬೀಳುತ್ತಿತ್ತು.

ಬ್ರುನೊ ಮತ್ತು ಬಫಲ್‌ಮ್ಯಾಕೊ ಎಂಬ ಅವನ ಇಬ್ಬರು ಗೆಳೆಯರಿಗೆ ಈ ವಿಷಯ ತಿಳಿದಿತ್ತು. ಈ ಹಣದಿಂದ ಕೆಲಾಂಡ್ರಿನೊ ತೋಟ ಕೊಳ್ಳುವುದಂತೂ ಸಾಧ್ಯವೇ ಇಲ್ಲ. ಆದರೆ ಅದರ ಬದಲು ಅವರ ಜೊತೆ ಒಂದು ದಿನ ತಿಂದು ಕುಡಿದು ಮಜಾ ಮಾಡುವುದೇ ಒಳ್ಳೆಯದು ಎಂದು ಅವನಿಗೆ ಪರಿಪರಿಯಾಗಿ ತಿಳಿಸಿ ಹೇಳಿದರು. ಆದರೆ ಜುಗ್ಗ ಕೆಲಾಂಡ್ರಿನೊ ಒಂದು ಕಾಸೂ ಬಿಚ್ಚುವವನಾಗಿರಲಿಲ್ಲ. ಹೇಗಾದರೂ ಮಾಡಿ ಕೆಲಾಂಡ್ರಿನೋನ ಹಣದಿಂದ ಮಜಾಉಡಾಯಿಸಬೇಕೆಂದು ನಿರ್ಧರಿಸಿದ ಬ್ರುನೊ ಮತ್ತು ಬಫಲ್‌ಮ್ಯಾಕೊ ಒಂದು ಉಪಾಯ ಯೋಜಿಸಿದರು. ತಮ್ಮ ಜೊತೆಗೆ ನೆಲ್ಲೊ ಎಂಬ ಮತ್ತೊಬ್ಬ ಗೆಳೆಯನನ್ನು ಸೇರಿಸಿಕೊಂಡರು.

ಅವರ ಯೋಜನೆಯಂತೆ ಮರುದಿನ ಕೆಲಾಂಡ್ರಿನೊ ಮನೆಬಿಟ್ಟು ಹೊರಹೊರಟ ನಂತರ ಸ್ವಲ್ಪ ದೂರದಲ್ಲಿ ನೆಲ್ಲೊ ಎದುರಾದ. ಕೆಲಾಂಡ್ರಿನೋಗೆ ವಂದಿಸಿದ ನೆಲ್ಲೊ ಅವನನ್ನೇ ದಿಟ್ಟಿಸಿನೋಡತೊಡಗಿದ.

'ಏಕೆ ಹಾಗೆ ನೋಡುತ್ತಿದ್ದೀಯಾ?' ಕೇಳಿದ ಕೆಲಾಂಡ್ರಿನೊ.

'ಏನೋ ನಿನ್ನಲ್ಲಿ ಬದಲಾವಣೆಯಾದಂತಿದೆ. ಏಕೆ ಮೈ ಹುಷಾರಿಲ್ಲವೆ?' ಕೇಳಿದ ನೆಲ್ಲೊ.

'ಹೌದೆ? ಹಾಗೇನೂ ಇಲ್ಲವಲ್ಲ. ನಾನು ಚೆನ್ನಾಗಿಯೇ ಇದ್ದೇನೆ' ಎಂದ ಕೆಲಾಂಡ್ರಿನೊ.

'ಏನೋ. ನನಗೆ ಹಾಗನ್ನಿಸಿತು. ಇರಲಿ ಬಿಡು. ನಾನಿನ್ನು ಹೊರಡುತ್ತೇನೆ?' ಎಂದ ನೆಲ್ಲೊ ಹೊರಟ. ಸ್ವಲ್ಪದೂರ ನಡೆದ ನಂತರ ಬಫಲ್‌ಮ್ಯಾಕೊ ಎದುರಾದ. ಅವನೂ ಸಹ ಅದೇ ರೀತಿ ದಿಟ್ಟಿಸಿನೋಡಿ ನೆಲ್ಲೊ ಕೇಳಿದಂತೆಯೇ ಕೇಳಿದ. ಕೆಲಾಂಡ್ರಿನೋಗೆ ನಿಜವಾಗಿಯೂ ತನಗೇನೋ ಆಗಿದೆಯೆನ್ನಿಸತೊಡಗಿತು.

'ಹೌದು, ಅಲ್ಲಿ ನೆಲ್ಲೊ ಸಹ ಅದೇ ರೀತಿ ಕೇಳಿದ. ಬಹುಶಃ ನನಗೇನೋ ಆಗಿರಬೇಕು?' ಎಂದ ಕೆಲಾಂಡ್ರಿನೊ.

'ಖಂಡಿತವಾಗಿಯೂ ಆಗಿದೆ. ನೀನು ಅರೆ ಸತ್ತಂತೆ ಕಾಣುತ್ತಿದ್ದೀಯ' ಎಂದ ಬಫಲ್‌ಮ್ಯಾಕೊ. ಅಷ್ಟೊತ್ತಿಗೆ ಅಲ್ಲಿಗೆ ಬಂದ ಬ್ರುನೊ ಸಹ ಅದೇ ರೀತಿ ಕೇಳಿದ ಹಾಗೂ ಅವನಿಗೇನೋ ಖಾಯಿಲೆಯಾಗಿರಬಹುದೆಂದ. ಅವರ ಮಾತುಗಳನ್ನೆಲ್ಲ ಕೇಳಿದ ಕೆಲಾಂಡ್ರಿನೋಗೆ ನಿಜವಾಗಿ ಚಳಿಜ್ವರ ಶುರುವಾದಂತೆನ್ನಿಸುತ್ತಿತ್ತು. ಬೇಗ ಮನೆಗೆ ಹೋಗಿ ವಿಶ್ರಾಂತಿ ತೆಗೆದುಕೊಳ್ಳುವಂತೆ ಕಿಲಾಡಿ ಗೆಳೆಯರಿಬ್ಬರೂ ಸೂಚಿಸಿದರು. ಅಷ್ಟೇ ಅಲ್ಲ ಮೂತ್ರವನ್ನು ಪರೀಕ್ಷೆಗೆ ವೈದ್ಯ ಸಿಮೋನ್‌ಗೆ ಕಳುಹಿಸುವಂತೆಯೂ ಹೇಳಿದರು. ವೈದ್ಯ ಸಿಮೋನ್ ಇವರೆಲ್ಲರ ಗೆಳೆಯನಾಗಿದ್ದ. ಕೆಲಾಂಡ್ರಿನೋಗೆ ಅವರ ಮಾತು ಕೇಳಿ ಆಯಾಸವಾಗುತ್ತಿರುವಂತೆ ಭಾಸವಾಯಿತು. ಅವನನ್ನು ಮನೆಗೆ ಬಿಟ್ಟುಬರುತ್ತೇವೆಂದು ಗೆಳೆಯರು ಕರೆದೊಯ್ದರು. ಅವರನ್ನು ನೆಲ್ಲೊ ಸಹ ಕೂಡಿಕೊಂಡ.

ಕೆಲಾಂಡ್ರಿನೊ ಮನೆಗೆ ಹೋಗಿ ಮೂತ್ರವನ್ನು ಬಾಟಲಿಯಲ್ಲಿ ತುಂಬಿ ಕೆಲಸದಾಳಿನ ಜೊತೆ ಪರೀಕ್ಷೆಗೆಂದು ವೈದ್ಯ ಸಿಮೋನ್‌ಗೆ ಕಳುಹಿಸಿ, ತಾನು ಬೆಚ್ಚಗೆ ಕಂಬಳಿ ಹೊದ್ದು ಮಲಗಿದ. ಬ್ರುನೊ ತನ್ನ ಗೆಳೆಯರಿಗೆ ಅಲ್ಲೇ ಇದ್ದು ಕೆಲಾಂಡ್ರಿನೋನನ್ನು ನೋಡಿಕೊಳ್ಳುವಂತೆ ತಿಳಿಸಿದ ಹಾಗೂ ತಾನು ವೈದ್ಯ ಸಿಮೋನ್ ಬಳಿ ಹೋಗಿ ವಿಚಾರಿಸಿಕೊಂಡು, ಅಗತ್ಯವಿದ್ದಲ್ಲಿ ಆತನನ್ನೇ ಕರೆತರುವುದಾಗಿ ತಿಳಿಸಿಹೊರಟ. ಕೆಲಸದಾಳು ವೈದ್ಯನನ್ನು ತಲುಪುವ ಮೊದಲೇ ತಾನು ತಲುಪಿ, ತಾವಾಡುತ್ತಿರುವ ನಾಟಕದ ಬಗ್ಗೆ ವೈದ್ಯ ಸಿಮೋನ್‌ಗೆ ತಿಳಿಸಿದ. ಅನಂತರ ಕೆಲಸದಾಳು ತಂದ ಮೂತ್ರವನ್ನು ಪರೀಕ್ಷಿಸಿದಂತೆ ನಟಿಸಿ, 'ಹೋಗಿ ಕೆಲಾಂಡ್ರಿನೊ ಬೆಚ್ಚಗೆ ಹೊದ್ದು ಮಲಗುವಂತೆ ತಿಳಿಸು.

ನಾನು ಬಂದು ಆತನಿಗೇನಾಗಿದೆಯೆಂದು ತಿಳಿಸುತ್ತೇನೆ?' ಎಂದು ಕೆಲಸದಾಳಿಗೆ ಹೇಳಿ ಕಳುಹಿಸಿದ ವೈದ್ಯ ಸಿಮೋನ್.



ಸ್ವಲ್ಪ ಹೊತ್ತಿನ ನಂತರ ವೈದ್ಯ ಸಿಮೋನ್ ಹಾಗೂ ಬ್ರುನೊ ಕೆಲಾಂಡ್ರಿನೋನ ಮನೆಗೆ ಬಂದರು. ವೈದ್ಯ ಕೆಲಾಂಡ್ರಿನೊ ಬಳಿ ಕೂತು ನಾಡಿ ಹಿಡಿದು ನೋಡಿದ, ಎದೆ ಬಡಿತ ಪರೀಕ್ಷಿಸಿದ. ಕೆಲಾಂಡ್ರಿನೋನ ಪತ್ನಿ ಟೆಸ್ಸಾ ತನ್ನ ಗಂಡನಿಗೇನಾಗಿರಬಹುದೆಂದು ಆತಂಕದಿಂದ ನೋಡುತ್ತಿದ್ದಳು. ಹಲವಾರು ಪರೀಕ್ಷೆಗಳ ನಂತರ ವೈದ್ಯ ಸಿಮೋನ್ ಹೇಳಿದ,

'ಕೆಲಾಂಡ್ರಿನೊ, ನಾನು ನಿನ್ನ ಗೆಳೆಯನಾಗಿರುವುದರಿಂದ ಹೇಳುತ್ತಿದ್ದೇನೆ. ನಿನಗೆ ಅಂತಹುದೇನೂ ಆಗಿಲ್ಲ, ಆದರೆ ನೀನು ಬಸುರಾಗಿದ್ದೀಯ!.'

ಕೆಲಾಂಡ್ರಿನೊ ಬೆಚ್ಚಿ ಹೌಹಾರಿದ. ಗಂಡಸು ಬಸುರಾಗುವುದೆಂದರೇನು! ತಕ್ಷಣ ಅವನಿಗೆ ಏನೋ ಹೊಳೆದು ತನ್ನ ಹೆಂಡತಿಯ ಕಡೆಗೆ ತಿರುಗಿ,

'ಟೆಸ್ಸಾ, ಎಲ್ಲಾ ನಿನ್ನಿಂದಲೇ ಆದದ್ದು. ಯಾವಾಗಲೂ ನೀನೇ ಮೇಲೇರುತ್ತಿದ್ದೆ. ಅದರಿಂದಲೇ ನೀನು ಬಸುರಾಗುವ ಬದಲು ನನ್ನನ್ನು ಬಸಿರು ಮಾಡಿಬಿಟ್ಟಿದ್ದೀಯೆ! ಅಯ್ಯೋ!' ಎಂದರಚಿದ.

ಸೌಮ್ಯ ಸ್ವಭಾವದ ಟೆಸ್ಸಾಳ ಮುಖ ನಾಚಿಕೆಯಿಂದ ಕೆಂಪಾಯಿತು. ತಲೆತಗ್ಗಿಸಿ ಕೋಣೆಯಿಂದ ಹೊರಟುಹೋದಳು.

'ಎಂಥಾ ಕೆಲಸವಾಗಿಬಿಟ್ಟಿದೆ! ಈಗ ನಾನೇನು ಮಾಡಲಿ? ಮಗುವನ್ನು ಹೇಗೆ ಹೊರಲಿ. ಅದು ಹೊರಬರುವುದಾದರೂ ಎಲ್ಲಿಂದ? ಇದೆಲ್ಲಾ ನನ್ನ ಹೆಂಡತಿಯಿಂದಲೇ ಆದದ್ದು. ಅವಳ ತಪ್ಪಿಗೆ ನಾನು ಸಾಯಬೇಕಾಗುತ್ತದೆ. ಅವಳು ಎಷ್ಟು ಹೇಳಿದರೂ ಕೇಳುತ್ತಿರಲಿಲ್ಲ, ನನ್ನನ್ನು ಕೆಳಗೆ ತಳ್ಳಿ ಬೇಡವೆಂದರೂ ಗಂಡಿನಂತೆ ಅವಳೇ ಮೇಲೇರುತ್ತಿದ್ದಳು. ಅವಳಿಗೆ ದೇವರು ಶಿಕ್ಷೆ ಕೊಡಲಿ!' ಎಂದು ಗೋಳಾಡಿದ ಕೆಲಾಂಡ್ರಿನೊ.

ಬ್ರುನೊ, ಬಫಲ್‌ಮ್ಯಾಕೊ ಮತ್ತು ನೆಲ್ಲೊ ನಗು ಒತ್ತಿ ಬರುತ್ತಿದ್ದರೂ ತಡೆದು ತಮ್ಮ ಗೆಳೆಯನಿಗೊದಗಿರುವ ವಿಪತ್ತಿನಿಂದ ಆತಂಕಗೊಂಡವರಂತೆ ನೋಡುತ್ತಾ ನಿಂತಿದ್ದರು. ಆದರೆ ವೈದ್ಯ ಸಿಮೋನ್ ಮಾತ್ರ ಕೇಕೆ ಹಾಕಿ ನಗುತ್ತಿದ್ದ. ಕೊನೆಗೆ ತನ್ನನ್ನು ಈ ವಿಪತ್ತಿನಿಂದ ಪಾರುಮಾಡುವಂತೆ ಕೆಲಾಂಡ್ರಿನೊ ವೈದ್ಯ ಸಿಮೋನ್‌ನನ್ನು ಬೇಡಿಕೊಂಡ.

'ಹೆದರಬೇಡ ಕೆಲಾಂಡ್ರಿನೊ. ಎಲ್ಲದಕ್ಕೂ ಪರಿಹಾರವಿದೆ. ಅಲ್ಲದೆ ದೇವರ ಕರುಣೆ ನಿನ್ನ ಮೇಲಿದೆ. ನಿನ್ನ ಬಸಿರು ನೋವಿಲ್ಲದೆ ಹೋಗಲಾಡಿಸುವ ಬೇಕಾದಷ್ಟು ಔಷಧಗಳಿವೆ. ಆದರೆ ನೀನು ಹಣ ಖರ್ಚುಮಾಡಬೇಕಷ್ಟೆ' ಎಂದ ವೈದ್ಯ ಸಿಮೋನ್.

'ಹೋ, ವೈದ್ಯರೆ ಅಷ್ಟು ಮಾಡಿ ಪುಣ್ಯ ಕಟ್ಟಿಕೊಳ್ಳಿ. ನನ್ನ ಬಳಿ ಇನ್ನೂರು ಲೈರ್ ಹಣ ಇದೆ. ಒಂದು ತೋಟ ಕೊಳ್ಳಬೇಕೆಂದಿದ್ದೆ. ನನಗೆ ತೋಟವೂ ಬೇಡ ಏನೂ ಬೇಡ. ನನ್ನ ಬಸಿರು ಹೋದರೆ ಸಾಕು. ಹೆರುವಾಗ ಹೆಂಗಸರ ಕಿರಿಚಾಟ ಕೇಳಿದ್ದೇನೆ. ನಾನಂತೂ ಸತ್ತೇಹೋಗಿಬಿಡುತ್ತೇನೆ' ಎಂದು ಗೋಳಾಡಿದ ಕೆಲಾಂಡ್ರಿನೊ.

'ಔಷಧವೊಂದನ್ನು ಕಳಿಸಿಕೊಡುತ್ತೇನೆ. ಅದು ಕುಡಿಯಲು ಬಹಳ ರುಚಿಕರವಾಗಿರುತ್ತದೆ. ಮೂರುದಿನ ಅದನ್ನು ಪ್ರತಿದಿನ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಕುಡಿಯಬೇಕು. ಅದಾದನಂತರ ನೀನು ಮೊದಲಿನಂತೇ ಆಗುತ್ತೀಯ. ಮತ್ತೆ ನಿನ್ನ ಪತ್ನಿಯ ಜೊತೆ ಇಂತಹ ಸರ್ಕಸ್ ಮಾಡಲು ಹೋಗಬೇಡ. ಈ ಕಾರ್ಯಕ್ಕೆ ಮೂರು ಕೊಬ್ಬಿದ ಹುಂಜಗಳು ಬೇಕು. ನಿನ್ನ ಗೆಳೆಯರಿಗೆ ಹಣಕೊಟ್ಟು ಹುಂಜಗಳನ್ನು ಕೊಂಡು ನನ್ನ ಮನೆಗೆ ತಲುಪಿಸಲು ಹೇಳು' ಎಂದರು ವೈದ್ಯರು.

ಕೋಳಿ ಹುಂಜಗಳಿಗೆ ಹಾಗೂ ಇತರ ಖರ್ಚಿಗೆಂದು ಸಾಕಷ್ಟು ಹಣ ಕೊಟ್ಟು ಕಳುಹಿಸಿ ಹೆಂಡತಿಯನ್ನು ಶಪಿಸುತ್ತಾ ಮಲಗಿದ. ಇತ್ತ ಕಿಲಾಡಿ ಗೆಳೆಯರು ಹಾಗೂ ವೈದ್ಯ ಕೂಡಿ ಕೆಲಾಂಡ್ರಿನೋನ ಬಗ್ಗೆ ತಮಾಷೆ ಮಾಡುತ್ತ ಕೋಳಿಮಾಂಸದ ಊಟವನ್ನು ಮಾಡಿ ತಿಂದುತೇಗಿದರು. ವೈದ್ಯ ಸಿಮೋನ್ ಕೆಲಾಂಡ್ರಿನೋಗೆ ಯಾವುದೋ ಬಣ್ಣದ ನೀರನ್ನು ಕೊಟ್ಟು ಕಳುಹಿಸಿದರು. ಅವನು ಅದನ್ನು ಶಿಸ್ತಾಗಿ ಮೂರುದಿನ ಕುಡಿದ. ನಂತರ ಪರೀಕ್ಷಿಸಿದ ವೈದ್ಯ ಈಗ ಬಸಿರೆಲ್ಲಾ ಇಳಿದುಹೋಗಿದೆ, ಇನ್ನೇನೂ ತೊಂದರೆಯಿಲ್ಲವೆಂದ. ಸಂತೋಷಗೊಂಡ ಕೆಲಾಂಡ್ರಿನೊ, ಮೂರೇ ದಿನದಲ್ಲಿ ಯಾವುದೇ ನೋವಿಲ್ಲದೆ ತನ್ನ ಬಸಿರು ಇಳಿಸಿದ ವೈದ್ಯನನ್ನು ಊರೆಲ್ಲಾ ಕೊಂಡಾಡಿದ. ಜುಗ್ಗ ಕೆಲಾಂಡ್ರಿನೊ ಹಣದಲ್ಲಿ ತಿಂದು ತೇಗಿದ್ದಕೆ ಅವನ ಗೆಳೆಯರು ಹಿಗ್ಗಿದರು. ಇದೆಲ್ಲವನ್ನೂ ಸಂಶಯದಿಂದಲೇ ನೋಡಿದ್ದ ಕೆಲಾಂಡ್ರಿನೋನ ಪತ್ನಿ ಟೆಸ್ಸಾ, ತನ್ನನ್ನು ಮೇಲೇರಲು ಬಿಡದೆ ತಾನೇ ಮೇಲೇರುತ್ತಿದ್ದ ತನ್ನ ಗಂಡನ ಬಗ್ಗೆ ಪ್ರತಿ ರಾತ್ರಿ ಗೊಣಗುತ್ತಿದ್ದಳು.

ಬಾಕಿ ಚುಕ್ತಾ

ಒಂದಾನೊಂದು ಕಾಲದಲ್ಲಿ ಇಟಲಿಯ ಮಿಲಾನ್ ನಗರದಲ್ಲಿ ಗಲ್‌ಫಾರ್ಡೊ ಎಂಬ ಜರ್ಮನಿಯ ಸೈನಿಕನಿದ್ದ. ಜರ್ಮನ್ನರಲ್ಲಿ ತೀರಾ ಅಪರೂಪವಾಗಿ ಕಂಡುಬರುವ ಕೆಚ್ಚು ಹಾಗೂ ನಿಷ್ಠಾವಂತತೆ ಅವನಲ್ಲಿತ್ತು. ಅವನು ಯಾರಿಂದಲೇ ಸಾಲ ಪಡೆದರೂ ಅದನ್ನು ಬಹಳ ನಿಯತ್ತಿನಿಂದ ಬಡ್ಡಿಯ ಸಮೇತ ಹಿಂದಿರುಗಿಸುತ್ತಿದ್ದ. ಹಾಗಾಗಿ ಅವನು ಕೇಳಿದಷ್ಟು ಸಾಲವನ್ನು ನೀಡಲು ಅಂಗಡಿಯರು, ಲೇವಾದೇವಿಗಾರರು ಹಿಂದೇಟು ಹಾಕುತ್ತಿರಲಿಲ್ಲ ಹಾಗೂ ಅವನಿಗಾಗಿ ತಮ್ಮ ಬಡ್ಡಿಯನ್ನು ಸಹ ಕಡಿಮೆ ಮಾಡಲು ಸಿದ್ಧವಿರುತ್ತಿದ್ದರು.

ಈ ಸೈನಿಕನಿಗೆ ಕಗಾಸ್ತ್ರೇಷಿಯೊ ಎಂಬ ಒಬ್ಬ ಸಿರಿವಂತ ವರ್ತಕ ಗೆಳೆಯನಿದ್ದ. ಆ ವರ್ತಕನಿಗೆ ಆಂಬ್ರೋಸಿಯೊ ಎಂಬ ಅತ್ಯಂತ ಸುಂದರ ಹೆಂಡತಿಯಿದ್ದಳು. ಈ ಜರ್ಮನ್ ಸೈನಿಕ ಗಲ್‌ಫಾರ್ಡೋನಿಗೆ ಆಕೆಯ ಮೇಲೆ ಅತೀವವಾದ ಪ್ರೇಮ ಮತ್ತು ವ್ಯಾಮೋಹವುಂಟಾಯಿತು. ಇದು ಆ ವರ್ತಕನಿಗೆ ತಿಳಿಯದಂತೆ ಅತಿಯಾದ ಎಚ್ಚರವಹಿಸಿದ್ದ. ಒಮ್ಮೆ ಆಕೆ ಒಂಟಿಯಾಗಿದ್ದಾಗ ಗಲ್‌ಫಾರ್ಡೊ ಆಕೆಯ ಬಳಿ ಹೋಗಿ ತನ್ನ ಪ್ರೇಮವನ್ನು ವ್ಯಕ್ತಗೊಳಿಸಿದ ಹಾಗೂ ಆಕೆಗಾಗಿ ತಾನು ಏನು ಬೇಕಾದರೂ ಮಾಡಲು ಸಿದ್ಧವೆಂದು ಅರುಹಿಕೊಂಡ.

ಬಹಳಷ್ಟು ಮಾತುಕತೆಯಾದ ನಂತರ ಆ ಸುಂದರಿ ಒಂದು ತೀರ್ಮಾನಕ್ಕೆ ಬಂದಳು. ಗಲ್‌ಫಾರ್ಡೋನನ್ನು ಪ್ರೀತಿಸಲು ಹಾಗೂ ಅವನೊಟ್ಟಿಗೆ ಮಲಗಲು ಎರಡು ಷರತ್ತುಗಳನ್ನೊಡ್ಡಿದಳು– ಮೊದಲನೆಯದು, ಅವರ ಪ್ರೇಮ ಪ್ರಕರಣ ಯಾರಿಗೂ ತಿಳಿಯದಂತೆ ಎಚ್ಚರ ವಹಿಸುವುದು; ಎರಡನೆಯದು, ಆಕೆಗೆ ತುರ್ತಾಗಿ ಇನ್ನೂರು ಚಿನ್ನದ ಫ್ಲೋರಿನ್ ನಾಣ್ಯಗಳು ಬೇಕಿರುವುದರಿಂದ ಸಿರಿವಂತನಾಗಿರುವ ಗಲ್‌ಫಾರ್ಡೊ ಅದನ್ನು

ತಂದುಕೊಡುವ ವ್ಯವಸ್ಥೆ ಮಾಡುವುದು. ಈ ಷರತ್ತುಗಳನ್ನು ಆತ ಈಡೇರಿಸುವುದೇ ಆದಲ್ಲಿ ಆಕೆ ಆತನಿಗಾಗಿ ಸದಾ ಎಲ್ಲದಕ್ಕೂ ಸಿದ್ಧವಿರುತ್ತೇನೆ ಎಂದಳು.



ಆಕೆಯನ್ನು ತನ್ನ ಪ್ರೇಮದಿಂದಾಗಿ ಪೂಜ್ಯ ಹಾಗೂ ಗೌರವಯುತ ಭಾವನೆಯಿಂದ ನೋಡುತ್ತಿದ್ದ ಗಲ್‌ಫಾರ್ಡೋನಿಗೆ ಆಕೆಯ ಹಣದ ದುರಾಸೆ ತಿಳಿದು ಹೇಸಿಗೆಯುಂಟಾಯಿತು. ಆ ಕ್ಷಣದಲ್ಲೇ ಆಕೆಯ ಬಗೆಗಿದ್ದ ಅವನ ಪ್ರೇಮ ದ್ವೇಷವಾಗಿ ಮಾರ್ಪಟ್ಟಿತು. ಆಕೆಗೆ ಸರಿಯಾಗಿ ಬುದ್ಧಿ ಕಲಿಸಬೇಕೆಂದು ತೀರ್ಮಾನಿಸಿ ಆಕೆಯ ಷರತ್ತುಗಳಿಗೆ ಸಂತೋಷವಾಗಿ ಒಪ್ಪಿದ. ತಾನು ಎಂದು ಆಕೆಗೆ ಹಣ ತಂದುಕೊಡಬೇಕೆಂದು ಕೇಳಿದ. ತನ್ನ ಗಂಡ ಕೆಲದಿನಗಳಲ್ಲಿ ವ್ಯಾಪಾರನಿಮಿತ್ತ ಜಿನೋವಾಗೆ ಹೋಗುವವನಿದ್ದು, ಅವನು ಹೋದನಂತರ ಗಲ್‌ಫಾರ್ಡೊಗಾಗಿ ಹೇಳಿಕಳುಹಿಸುವುದಾಗಿ ಸಂತೋಷದಿಂದ ತಿಳಿಸಿದಳು. ಈ ವಿಷಯ ಯಾರಿಗೂ ತಿಳಿಸುವುದಿಲ್ಲ ಆದರೆ ತನ್ನೊಂದಿಗೆ ಸದಾ ಇರುವ ತನ್ನ ಆಪ್ತಗೆಳೆಯನೊಬ್ಬನಿಗೆ ಮಾತ್ರ ಈ ವಿಷಯ ತಿಳಿದಿರುತ್ತದೆ ಹಾಗೂ ಅವನೊಬ್ಬ ನಂಬಿಕಸ್ಥನಾಗಿರುವುದರಿಂದ ಆತಂಕ ಪಡುವ ಕಾರಣವಿಲ್ಲವೆಂದು ತಿಳಿಸಿ ಹೊರಟ.

ಅಲ್ಲಿಂದ ಹೊರಟ ಗಲ್‌ಫಾರ್ಡೊ, ಸುಂದರಿ ಆಂಬ್ರೋಸಿಯೋಳ ಗಂಡ ಹಾಗೂ ತನ್ನ ಗೆಳೆಯನಾದ ಕಗಾಸ್ತ್ರೇಷಿಯೋನ ಬಳಿ ಹೋದ. ತನಗೆ ತುರ್ತಾಗಿ ಇನ್ನೂರು ಚಿನ್ನದ ಫ್ಲೋರಿನ್ ನಾಣ್ಯಗಳು ಬೇಕಿರುವುದರಿಂದ

ಇತರರಿಗೆ ಕೊಡುವ ಬಡ್ಡಿಯ ದರದಲ್ಲೇ ತನಗೂ ಕೊಡಲು ಆತನನ್ನು ಕೇಳಿ ನಾಣ್ಯಗಳನ್ನು ಪಡೆದುಕೊಂಡ. ಕೆಲದಿನಗಳ ನಂತರ ಕಗಾಸ್ಟ್ರೇಷಿಯೊ ಜಿನೋವಾಗೆ ಆತನ ಪತ್ನಿ ಹೇಳಿದ್ದಂತೆ ಹೊರಟ. ಆತ ಅತ್ತ ಹೊರಟ ಕೂಡಲೇ ಆಂಬ್ರೋಸಿಯೊ ಗಲ್‌ಫಾರ್ಡೋನನ್ನು ಇನ್ನೂರು ಚಿನ್ನದ ಫ್ಲೋರಿನ ನಾಣ್ಯಗಳೊಂದಿಗೆ ಬರಲು ಹೇಳಿಕಳುಹಿಸಿದಳು. ಗಲ್‌ಫಾರ್ಡೊ ತನ್ನ ಆಪ್ತಗೆಳೆಯನೊಂದಿಗೆ ಇನ್ನೂರು ಫ್ಲೋರಿನ್‌ಗಳ ಚೀಲ ಹಿಡಿದು ಆಕೆಯ ಮನೆಗೆ ಬಂದ. ಅಕೆ ಮನೆಯಲ್ಲಿ ಆತನಿಗಾಗಿಯೇ ಎದುರುನೋಡುತ್ತಿದ್ದಳು. ಮನೆಗೆ ಹೋದತಕ್ಷಣ ಗಲ್‌ಫಾರ್ಡೊ ಮಾಡಿದ ಮೊದಲ ಕೆಲಸವೆಂದರೆ, ಇನ್ನೂರು ಚಿನ್ನದ ಫ್ಲೋರಿನ್‌ಗಳಿದ್ದ ಚೀಲವನ್ನು ಆಕೆಯ ಕೈಗಿಟ್ಟು, ಈ ಹಣವನ್ನು ನಿಮ್ಮ ಗಂಡನ ಬಳಿ ಸಾಲಪಡೆದಿದ್ದೆ. ಆತ ಹಿಂದಿರುಗಿದ ನಂತರ ದಯವಿಟ್ಟು ಇದನ್ನು ಆತನಿಗೆ ಕೊಟ್ಟುಬಿಡಿ ಎಂದದ್ದು. ಆತನ ಮಾತಿನಿಂದ ಆಕೆ ಚಕಿತಳಾದರೂ, ಆತನ ಗೆಳೆಯನಿರುವುದರಿಂದ ಈ ರೀತಿ ಹೇಳುತ್ತಿದ್ದಾನೆಂದು ಭಾವಿಸಿ, ಆಯಿತು, ಆತ ಹಿಂದಿರುಗಿದನಂತರ ಖಂಡಿತಾ ಕೊಡುತ್ತೇನೆ ಎಂದು ಹೇಳಿ ಅಲ್ಲೇ ಮೇಜಿನಮೇಲೆ ನಾಣ್ಯಗಳನ್ನು ಹರಡಿ ಎಣಿಸಿಕೊಂಡಳು. ಆಕೆಯ ಮುಖ ಸಂತೋಷದಿಂದ ಅರಳಿತ್ತು. ಅತ್ಯಂತ ಹರ್ಷದಾಯಕವಾಗಿ ಅಕೆ ಗಲ್‌ಫಾರ್ಡೋನನ್ನು ತನ್ನ ಮಲಗುವ ಕೋಣೆಗೆ ಕರೆದೊಯ್ದಳು. ಆ ರಾತ್ರಿಯಷ್ಟೇ ಅಲ್ಲ, ತನ್ನ ಗಂಡ ಜಿನೋವಾದಿಂದ ಹಿಂದಿರುಗುವವರೆಗೂ ಹಲವಾರು ರಾತ್ರಿಗಳು ಗಲ್‌ಫಾರ್ಡೋನನ್ನು ತನ್ನ ಮನೆಗೆ ಬಂದುಹೋಗುವಂತೆ ಮಾಡಿಕೊಂಡಳು.

ಕೊನೆಗೊಂದು ದಿನ ಕಗಾಸ್ಟ್ರೇಷಿಯೊ ಜಿನೋವಾದಿಂದ ಹಿಂದಿರುಗಿದ. ಒಮ್ಮೆ ಆತ ತನ್ನ ಹೆಂಡತಿಯೊಂದಿಗೆ ಇರುವಾಗ ಅಲ್ಲಿಗೆ ಗಲ್‌ಫಾರ್ಡೊ ತನ್ನ ಗೆಳೆಯನೊಂದಿಗೆ ಬಂದು, 'ಕಗಾಸ್ಟ್ರೇಷಿಯೊ, ನಿನ್ನಿಂದ ಸಾಲವಾಗಿ ಪಡೆದ ಇನ್ನೂರು ಫ್ಲೋರಿನ್ ಹಣ ನನಗೆ ಬೇಕಾಗಲಿಲ್ಲ. ನಾನು ನೆರವೇರಿಸಬೇಕೆಂದಿದ್ದ ಕಾರ್ಯ ನೆರವೇರಿಸಲಾಗಲಿಲ್ಲ. ಆದುದರಿಂದ ಅದನ್ನು ನಿನ್ನ ಪತ್ನಿಗೆ ಹಿಂದಿರುಗಿಸಿದ್ದೇನೆ. ಅದನ್ನು ನನ್ನ ಸಾಲಕ್ಕೆ ವಜಾಮಾಡಿಕೊಂಡುಬಿಡು' ಎಂದು ಹೇಳಿದ.

ಕಗಾಸ್ಟ್ರೇಷಿಯೊ ತನ್ನ ಪತ್ನಿಯ ಕಡೆ ತಿರುಗಿ, 'ಹೌದೆ, ಹಣ ಹಿಂದಿರುಗಿಸಿದ್ದಾನೆಯೆ?' ಎಂದು ಕೇಳಿದ. ಹಣ ಹಿಂದಿರುಗಿಸಿದ್ದುದ್ದಕ್ಕೆ ಸಾಕ್ಷಿಯಾಗಿ ಗಲ್‌ಫಾರ್ಡೋನ ಗೆಳೆಯ ಅಲ್ಲಿಯೇ ಇದ್ದುದರಿಂದ ಆಕೆಗೆ

ಇಲ್ಲವೆನ್ನಲಾಗಲಿಲ್ಲ.

'ಹಾ....ಹೌದು. ಅಂದೇ ಹಿಂದಿರುಗಿಸಿದ. ನಿನಗೆ ಹೇಳಲು ಮರೆತಿದ್ದೆ' ಎಂದಳು ತೊದಲುತ್ತ.

'ಆಯ್ತು ಬಿಡು. ನಿನ್ನ ಸಾಲಕ್ಕೆ ಅದನ್ನು ವಜಾಮಾಡಿಕೊಳ್ಳುತ್ತೇನೆ' ಎಂದ ಕಗಾಸ್ಟ್ರೇಷಿಯೊ. ವಂದನೆ ತಿಳಿಸಿ ಗಲ್‌ಫಾರ್ಡೊ ಆಂಬ್ರೋಸಿಯಾಳತ್ತ ತಿರುಗಿ ಕಣ್ಣುಮಿಟುಕಿಸಿ ಅಲ್ಲಿಂದ ಹೊರಟ.

ಕಂಡದ್ದೆಲ್ಲಾ ನಿಜವಲ್ಲ

ಇಟಲಿಯ ಪುರಾತನ ನಗರವಾದ ಆರ್ಗೋಸ್‌ನಲ್ಲಿ ನಿಕೊಸ್ಟ್ರಾಟೊ ಎಂಬ ಸಿರಿವಂತ ಮುದಿ ಸಜ್ಜನನಿದ್ದ. ಮುದುಕ ನಿಕೊಸ್ಟ್ರಾಟೋಗೆ ಲಿಡಿಯಾ ಎಂಬ ಅತ್ಯಂತ ಸುಂದರವಾದ ಯುವ ಪತ್ನಿಯಿದ್ದಳು. ಸಿರಿವಂತ ನಿಕೊಸ್ಟ್ರಾಟೋನ ಮನೆಯಲ್ಲಿ ಬಹಳಷ್ಟು ಆಳುಕಾಳುಗಳಿದ್ದರು ಹಾಗೂ ಅವನಿಗೆ ಬೇಟೆಯಲ್ಲಿ ಅತೀವ ಆಸಕ್ತಿಯಿತ್ತು. ಅವನ ಸೇವಕರಲ್ಲಿ ಪಿರ್‍ರೊ ಎಂಬ ಸದೃಢ, ಸ್ಫುರದ್ರೂಪಿ ಯುವಕನಿದ್ದು, ಅವನು ಎಲ್ಲ ಕೆಲಸ ಹಾಗೂ ಕಲೆಗಳಲ್ಲಿ ನುರಿತವನಾಗಿದ್ದ. ಆತ ನಿಕೊಸ್ಟ್ರಾಟೋನ ಅಚ್ಚುಮೆಚ್ಚಿನ ಹಾಗೂ ನಂಬಿಕೆಯ ಸೇವಕನಾಗಿದ್ದ.

ಮುದಿಗಂಡ ನಿಕೊಸ್ಟ್ರಾಟೊ ತನ್ನ ಪತ್ನಿ ಲಿಡಿಯಾ ಬಗ್ಗೆ ಹೆಚ್ಚು ಆಸ್ಥೆ ವಹಿಸುತ್ತಿರಲಿಲ್ಲವಾದುದರಿಂದ ಲಿಡಿಯಾ ಸ್ಫುರದ್ರೂಪಿ ಪಿರ್‍ರೋನ ವ್ಯಾಮೋಹದಲ್ಲಿ ಬಿದ್ದಳು. ಆಕೆಯನ್ನು ಹಗಲು, ರಾತ್ರಿ ಆತನ ನೆನಪೇ ಕಾಡತೊಡಗಿತು. ಪಿರ್‍ರೋಗೆ ಈ ವಿಷಯ ತಿಳಿದಿರಲಿಲ್ಲ. ಯಜಮಾನನ ಪತ್ನಿಯೆಂಬ ಗೌರವ ಬಿಟ್ಟಲ್ಲಿ ಆತನ ಮನಸ್ಸಿನಲ್ಲಿ ಬೇರಾವ ಭಾವನೆಯೂ ಇರಲಿಲ್ಲ. ಆಕೆ ಎದುರಿಗಿದ್ದರೂ ನಿರ್ಲಿಪ್ತನಾಗಿರುತ್ತಿದ್ದ ಅವನನ್ನು ಕಂಡಾಗ ಲಿಡಿಯಾಗೆ ಅತೀವ ವೇದನೆಯಾಗುತ್ತಿತ್ತು. ಹೇಗಾದರೂ ಮಾಡಿ ತನ್ನ ಪ್ರೇಮವನ್ನು ಪಿರ್‍ರೋನಿಗೆ ತಿಳಿಸಬೇಕೆಂದು ನಿರ್ಧರಿಸಿ ತನ್ನ ಆಪ್ತ ಹಾಗೂ ನಂಬಿಕೆಯ ಸೇವಕಿ ಲುಸ್ಕಾಳನ್ನು ಕರೆದು, 'ನೋಡು ಲುಸ್ಕಾ, ನನ್ನ ದಾಂಪತ್ಯ ಜೀವನ ನಿನಗೇ ಗೊತ್ತಿದೆ. ನನ್ನ ಗಂಡ ಕೈಲಾಗದವ. ನಾನಿನ್ನೂ ಯುವತಿ. ಗಂಡ ಹೆಂಡತಿಗೆ ಕೊಡಬೇಕಾದ ಏನನ್ನೂ ಆತ ಕೊಡುತ್ತಿಲ್ಲ. ಎಲ್ಲ ಹೆಂಗಸರಂತೆ ನನ್ನಲ್ಲಿಯೂ ಕಾಮನೆಗಳಿರುವುದಿಲ್ಲವೆ? ವಿಧಿ ನೀಡಿದ್ದೇ ಅಮೃತವೆಂದು ಕಣ್ಣುಮುಚ್ಚಿಕೊಂಡು ಕೊರಗಿ ನನಗೆ ನಾನೇ ಶತ್ರುವಾಗಲು ನನಗಿಷ್ಟವಿಲ್ಲ. ನನ್ನ ಸಂತೋಷದ ಹಾಗೂ ಮುಕ್ತಿಯ ಹಾದಿಯನ್ನು ನಾನೇ ಕಂಡುಕೊಳ್ಳಬೇಕಾಗಿದೆ. ನಾನು ಬಹಳಷ್ಟು ಆಲೋಚಿಸಿ ಒಂದು ನಿರ್ಧಾರಕ್ಕೆ

ಬಂದಿದ್ದೇನೆ. ನಮ್ಮ ಸೇವಕ ಪಿರ್‍ರೋನನ್ನು ನಾನು ಪ್ರೇಮಿಸುತ್ತಿದ್ದೇನೆ. ನೀನು ನನ್ನ ಬದುಕನ್ನು ಗೌರವಿಸುವ ಹಾಗಿದ್ದರೆ, ಅವನಲ್ಲಿಗೆ ಹೋಗಿ ನನ್ನ ಪ್ರೇಮವನ್ನು ತಿಳಿಸಿ ಅವನನ್ನು ಕರೆದುಕೊಂಡು ಬಾ. ಅವನು ಒಪ್ಪದಿದ್ದಲ್ಲಿ, ಕಾಡಿ ಬೇಡಾದರೂ ಕರೆತರುವ ಜವಾಬ್ದಾರಿ ನಿನ್ನದು' ಎಂದಳು.

ಲಿಡಿಯಾಳ ದಾಂಪತ್ಯದ ಅವಸ್ಥೆ ತಿಳಿದಿದ್ದ ಸೇವಕಿ ಲುಸ್ಕಾ, ಸಂತೋಷದಿಂದ ಒಪ್ಪಿದಳು ಹಾಗೂ ಪಿರ್‍ರೊ ಒಬ್ಬನೇ ಎದುರಾದಾಗ ತನ್ನ ಒಡತಿಯ ಇಚ್ಛೆಯನ್ನು ತಿಳಿಸಿದಳು. ತಕ್ಷಣ ಸಿಟ್ಟಿಗೆದ್ದ ಪಿರ್‍ರೊ, 'ಇದು ಸಾಧ್ಯವೇ ಇಲ್ಲ. ಅಂತಹ ಗೌರವಾನ್ವಿತ ಹೆಂಗಸು ಈ ರೀತಿ ಹೇಳುವುದೆಂದರೇನು. ನೀನೆಲ್ಲೋ ಸುಳ್ಳು ಹೇಳುತ್ತಿದ್ದೀಯ. ಅಕಸ್ಮಾತ್ ಆಕೆಯೇ ಹೇಳಿಕಳುಹಿಸಿದ್ದರೂ ನಾನು ಒಪ್ಪುವುದಿಲ್ಲ. ನನ್ನ ಒಡೆಯನಿಗೆ ನನ್ನ ಮೇಲೆ ಎಲ್ಲಿಲ್ಲದ ವಿಶ್ವಾಸ. ಆತನ ಹೆಂಡತಿಯನ್ನೇ ಪ್ರೇಮಿಸಿ ನಾನು ಆತನಿಗೆ ವಿಶ್ವಾಸದ್ರೋಹ ಮಾಡಲಾರೆ. ಇನ್ನೆಂದಿಗೂ ಇಂತಹ ಮಾತಾಡಬೇಡ' ಎಂದು ಲುಸ್ಕಾಳನ್ನು ಬೈದು ಕಳುಹಿಸಿದ. ಹ್ಯಾಪೆಮೋರೆ ಹಾಕಿಕೊಂಡು ಹಿಂತಿರುಗಿದ ಲುಸ್ಕಾ ಒಡತಿಗೆ ಎಲ್ಲ ತಿಳಿಸಿದಳು. 'ಅವನ ಪ್ರೇಮದಿಂದಲೂ ವಂಚಿತಳಾದರೆ ನನಗೆ ಸಾವೇ ಗತಿ' ಎಂದು ಲಿಡಿಯಾ ರೋಧಿಸಿದಳು. ಕೆಲದಿನಗಳ ನಂತರ ಮತ್ತೆ ಲುಸ್ಕಾಳನ್ನು ಕರೆದು, 'ನಿನಗೇ ಗೊತ್ತಿದೆ, ಓಕ್ ಮರ ಒಂದೇ ಏಟಿಗೆ ಬೀಳುವುದಿಲ್ಲ. ಅವನ್ಯಾರೊ ನನ್ನ ನಿದ್ದೆಗೆಡಿಸಲು ಬ್ರಹ್ಮಚರ್ಯದ ಶಪಥ ತೊಟ್ಟಂತಿದೆ. ನೀನು ಮತ್ತೊಮ್ಮೆ ಅವನ ಬಳಿ ಹೋಗು. ಹೇಗಾದರೂ ಒಪ್ಪಿಸು' ಎಂದು ಹೇಳಿ ಕಳುಹಿಸಿದಳು.

ಲುಸ್ಕಾ ಮತ್ತೆ ಪಿರ್‍ರೋನ ಬಳಿ ಬಂದು, 'ಅದೃಷ್ಟ ಮತ್ತೆಮತ್ತೆ ಯಾರನ್ನೂ ಅರಸಿ ಬರುವುದಿಲ್ಲ. ಅಂತಹ ಸುಂದರ ಹೆಣ್ಣು ನಿನ್ನನ್ನು ಬಯಸುತ್ತಿದ್ದಾಳೆಂದರೆ ನೀನೇ ಹೆಮ್ಮೆಪಡಬೇಕು. ಆಕೆಯನ್ನು ನೀನು ಬೇಡವೆಂದರೆ, ನಿನ್ನಂಥ ಮೂರ್ಖ ಮತ್ತೊಬ್ಬನಿರುವುದಿಲ್ಲ. ನಿನ್ನ ಯಜಮಾನನ ಬಗ್ಗೆ ಈ ವಿಷಯದಲ್ಲಿ ಅಷ್ಟೊಂದು ನಿಷ್ಠೆಯ ಅವಶ್ಯಕತೆ ಬೇಡ. ನಿನಗೊಬ್ಬ ಸುಂದರಿ ಪತ್ನಿಯೋ, ತಂಗಿಯೋ ಅಥವಾ ಮಗಳೋ ಇದ್ದಿದ್ದಲ್ಲಿ, ಅವರನ್ನು ನಿನ್ನ ಯಜಮಾನ ನಿಕೊಸ್ಟ್ರಾಟೊ ಬಯಸಿದ್ದಲ್ಲಿ, ಆತ ನಿನ್ನ ಹಾಗೆ ಆಲೋಚಿಸುತ್ತಿದ್ದನೆ? ಅವರು ಒಪ್ಪದಿದ್ದಲ್ಲಿ ಬಲವಂತವಾದರೂ ಮಾಡಲು ಹೇಸುತ್ತಿರಲಿಲ್ಲ. ಯಜಮಾನರು ಸೇವಕರನ್ನು ನಡೆಸಿಕೊಳ್ಳುವಂತೆ ಇಂತಹ ವಿಷಯಗಳಲ್ಲಿ ನಾವೂ ಅವರನ್ನು ಹಾಗೆಯೇ ನಡೆಸಿಕೊಳ್ಳಬೇಕು. ನೀನೇನಾದರೂ ಒಡತಿ ಲಿಡಿಯಾಳನ್ನು ತಿರಸ್ಕರಿಸಿದಲ್ಲಿ

ಆಕೆ ಸತ್ತೇ ಹೋಗುತ್ತಾಳೆ. ಅವಳನ್ನು ಕೊಂದ ಪಾಪ ನಿನ್ನದಾಗುತ್ತದೆ, ಇಲ್ಲವೆನ್ನಬೇಡ' ಎಂದು ಹೇಳಿದಳು.

ಮೊದಲನೆಯ ಸಾರಿ ಲುಸ್ಕಾ ಬಂದುಹೋದಾಗಲೇ ಪಿರ್‍ರೊ ಆಲೋಚಿಸಲು ಆರಂಭಿಸಿದ್ದ. ಸಿಗುವ ಅವಕಾಶ ಏಕೆ ಕಳೆದುಕೊಳ್ಳಬೇಕೆನ್ನಿಸಿತ್ತು. ಆದರೂ ಯಜಮಾನ ಮತ್ತು ಒಡತಿ ತನ್ನನ್ನು ಪರೀಕ್ಷಿಸಲು ಇಬ್ಬರೂ ಈ ಆಟ ಹೂಡಿರಬಹುದೆಂಬ ಸಂಶಯ ಅವನಲ್ಲಿತ್ತು. ಈ ಸಂಶಯದ ಬಗ್ಗೆ ಹೇಳಿದ ಪಿರ್‍ರೊ ತನ್ನ ಮೂರು ಷರತ್ತುಗಳನ್ನು ಲಿಡಿಯಾ ನೆರವೇರಿಸುವುದಾದಲ್ಲಿ ತಾನು ಆಕೆ ಹೇಳಿದಂತೆ ಕೇಳುವುದಾಗಿ ತಿಳಿಸಿದ. ಆತನ ಮೂರು ಷರತ್ತುಗಳೆಂದರೆ, ಮೊದಲನೆಯದು– ನಿಕೊಸ್ಟ್ರಾಟೋನ ಕಣ್ಣೆದುರೇ ಆತನ ಪ್ರಿಯವಾದ ಬೇಟೆಯ ಗಿಡುಗವನ್ನು ಕೊಲ್ಲುವುದು, ಎರಡನೆಯದು– ನಿಕೊಸ್ಟ್ರಾಟೋನ ಗಡ್ಡದ ಕೂದಲನ್ನು ಕಿತ್ತು ಕಳಿಸುವುದು ಹಾಗೂ ಮೂರನೆಯದು– ನಿಕೊಸ್ಟ್ರಾಟೋನ ಒಂದು ಚೆನ್ನಾಗಿರುವ ಹಲ್ಲನ್ನು ಕಿತ್ತು ಕಳಿಸುವುದು.

ಲುಸ್ಕಾಳಿಗೆ ಈ ಷರತ್ತುಗಳ ಈಡೇರಿಕೆ ಕಷ್ಟವೆನ್ನಿಸಿದರೂ ತನ್ನ ಒಡತಿಗೆ ವಿಷಯ ತಿಳಿಸಿದಳು. ಪ್ರೇಮದ ಅಮಲಿನಲ್ಲಿದ್ದ ಲಿಡಿಯಾ, 'ಆ ಮೂರು ಷರತ್ತುಗಳನ್ನು ನೆರವೇರಿಸುತ್ತೇನೆ. ಅಷ್ಟೇ ಏಕೆ, ನನ್ನ ಗಂಡನ ಎದುರಿನಲ್ಲಿಯೇ ಪಿರ್‍ರೋನ ಜೊತೆ ಮಲಗಿ ಅದನ್ನು ನನ್ನ ಗಂಡ ನೋಡಿದರೂ ಅವನು ನೋಡಿದ್ದು ನಿಜವಲ್ಲವೆಂದು ನಂಬುವ ಹಾಗೆ ಮಾಡುತ್ತೇನೆಂದು ಹೇಳು' ಎಂದು ಹೇಳಿ ಕಳುಹಿಸಿದಳು.

ಕೆಲದಿನಗಳನಂತರ ನಿಕೊಸ್ಟ್ರಾಟೊ ಆಗಾಗ ಏರ್ಪಡಿಸುವಂತೆ ಕೆಲಗಣ್ಯರಿಗೆ ಔತಣಕೂಟ ಏರ್ಪಡಿಸಿದ. ಎಲ್ಲರೂ ಊಟಕ್ಕೆ ಕೂತಿದ್ದಾಗ ಅಲ್ಲಿಗೆ ಬಂದ ಲಿಡಿಯಾ ಅಲ್ಲಿ ಮೂಲೆಯೊಂದರಲ್ಲಿ ಕೂತಿದ್ದ ಗಿಡುಗವನ್ನು ಹಿಡಿದು, ಅದನ್ನು ಗೋಡೆಗೆ ಅಪ್ಪಳಿಸಿ ಕೊಂದಳು. ಅದನ್ನು ಆಘಾತಗೊಂಡವನಂತೆ ನೋಡಿದ ನಿಕೊಸ್ಟ್ರಾಟೊ, 'ಅಯ್ಯೋ, ಅದನ್ಯಾಕೆ ಕೊಂದೆ!' ಎಂದ. 'ಸುಮ್ಮನೆ' ಎಂದ ಲಿಡಿಯಾ, ಅಲ್ಲಿ ನೆರೆದಿದ್ದ ಗಣ್ಯರೆಡೆಗೆ ತಿರುಗಿ, 'ಈ ಗಿಡುಗ ನನ್ನ ಗಂಡನನ್ನು ನನ್ನಿಂದ ಕಿತ್ತುಕೊಂಡಿತ್ತು. ಆತ ಈ ಗಿಡುಗನನ್ನು ಹಿಡಿದು ಸದಾ ಬೇಟೆಗೆ ಹೋಗುತ್ತಿದ್ದ, ಆತ ನನ್ನೊಟ್ಟಿಗೆ ಸಮಯವನ್ನೇ ಕಳೆಯುವುದಿಲ್ಲ; ನಾನಿಲ್ಲಿ ಒಂಟಿಯಾಗಿ ಸಾಯಬೇಕು. ನನ್ನ ಒಂಟಿತನಕ್ಕೆ ಈ ಗಿಡುಗವೇ ಕಾರಣವಾಗಿತ್ತು. ಅದರಿಂದಲೇ ನಿಮ್ಮಂತಹ ಗಣ್ಯರ ಮುಂದೆ ಈ ಗಿಡುಗನನ್ನು ಕೊಂದಿದ್ದೇನೆ. ನಾನು ಮಾಡಿದ್ದು ತಪ್ಪೆ?



ನೀವೇ ತೀರ್ಮಾನಿಸಿ ಹೇಳಿ' ಎಂದಳು.

'ಈಕೆ ತನ್ನ ಗಂಡನನ್ನು ಎಷ್ಟೊಂದು ಪ್ರೀತಿಸುತ್ತಾಳೆ, ಅದರಿಂದಲೇ ಈ ರೀತಿ ಮಾಡಿದ್ದಾಳೆ' ಎಂದುಕೊಂಡ ಗಣ್ಯರು ಆಕೆ ಮಾಡಿದ್ದು ಸರಿಯೆಂದರು. ಅವರ ಮಾತು ಕೇಳಿ ನಿಕೊಸ್ಟ್ರಾಟೊ ಸುಮ್ಮನಾದ. ಅಲ್ಲಿಯೇ ಇದ್ದ ಪಿರ್‍ರೊ, 'ಈ ಹೆಂಗಸು ಕಡಿಮೆಯಾದವಳಲ್ಲ' ಎಂದುಕೊಂಡ.

ಕೆಲದಿನಗಳ ನಂತರ ನಿಕೊಸ್ಟ್ರಾಟೊ ತನ್ನ ಪತ್ನಿಯೊಂದಿಗೆ ಇರುವಾಗ ತಮಾಷೆಗೆ ಅವಳ ಕೂದಲು ಹಿಡಿದೆಳೆದ. ಅದೇ ಅವಕಾಶಕ್ಕೆ ಕಾಯುತ್ತಿದ್ದಂತೆ ಆಕೆ ತಕ್ಷಣ ಆತನ ಗಡ್ಡವನ್ನು ಜಗ್ಗಿ ಒಂದಷ್ಟು ಕೂದಲುಗಳನ್ನು ಕಿತ್ತೇಬಿಟ್ಟಳು. ನಿಕೊಸ್ಟ್ರಾಟೊ ನೋವಿನಿಂದ ಚೀರಿದ.

'ಏಕೆ ಹಾಗೆ ಕಿರುಚುತ್ತೀರಿ? ನಿಮ್ಮ ಗಡ್ಡದ ಮೂರು ಕೂದಲು ಕಿತ್ತೆನೆಂದೆ! ನೀವು ನನ್ನ ಕೂದಲು ಹಿಡಿದೆಳೆದಾಗ ನನಗೆಷ್ಟು ನೋವಾಯಿತು ಗೊತ್ತೆ?' ಎಂದು ಹುಸಿಮುನಿಸು ತೋರಿದಳು ಲಿಡಿಯಾ. ಆತನೇ ಆಕೆಯನ್ನು ರಮಿಸಿ ಮಾತು ಮರೆತ. ಅನಂತರ ಆಕೆ ಆ ಕೂದಲುಗಳನ್ನು ಪಿರ್‍ರೋನಿಗೆ ಕಳುಹಿಸಿದಳು.

ಇನ್ನು ಅವನ ಒಳ್ಳೆಯ ಹಲ್ಲುಕೀಳುವುದು ಬಾಕಿ ಉಳಿಯಿತು. ಅದಕ್ಕೊಂದು ಉಪಾಯ ಮಾಡಿದಳು. ನಿಕೊಸ್ಟ್ರಾಟೋನಿಗೆ ಊಟಬಡಿಸುವ ಕೆಲಸದವರಿಗೆ ಊಟ ಬಡಿಸುವಾಗ ತಮ್ಮ ಮುಖ ಬದಿಗೆ ತಿರುಗಿಸಿ ಬಡಿಸಲು ಹೇಳಿದಳು ಹಾಗೂ ಈ ವಿಷಯ ಯಾರಲ್ಲಿಯೂ ಹೇಳಬಾರದೆಂದೂ ತಿಳಿಸಿದಳು. ಕೆಲದಿನಗಳ ನಂತರ ಆಕೆ ತನ್ನ ಗಂಡನನ್ನು ಕೇಳಿದಳು, ಊಟ ಬಡಿಸುವವರ ನಡತೆಯನ್ನು ಗಮನಿಸಿದ್ದೀರಾ?.



'ಹೌದು, ನಾನು ಕೇಳಬೇಕೆಂದಿದ್ದೆ, ಏಕೆ ಅವರೆಲ್ಲಾ ಆ ರೀತಿ ಮುಖ ತಿರುಗಿಸಿಕೊಳ್ಳುತ್ತಿದ್ದಾರೆ' ಎಂದ ನಿಕೊಸ್ಟ್ರಾಟೊ.

'ಬೇಡ, ಅವರನ್ನು ಕೇಳಬೇಡಿ. ಅದರ ಕಾರಣ ನಾನು ಹೇಳುತ್ತೇನೆ. ನನಗೆ ತೊಂದರೆಯಾಗುತ್ತಿದ್ದರೂ ಇಷ್ಟೂ ದಿನ ನಾನು ಸಹಿಸಿಕೊಂಡಿದ್ದೆ. ಇತರರು ಅಸಹ್ಯಪಡುತ್ತಿರುವುದು ನೋಡಿ ಹೇಳಿಯೇಬಿಡುತ್ತೇನೆ. ನಿಮ್ಮ ಬಾಯಿ ಕೆಟ್ಟ ವಾಸನೆ ಬೀರುತ್ತಿದೆ. ಏನು ಕಾರಣವೋ ಗೊತ್ತಿಲ್ಲ. ಹಲ್ಲು ಕೊಳೆಯುತ್ತಿರಬಹುದು' ಎಂದಳು.

'ಹೌದೆ? ಈಗ ಏನು ಮಾಡುವುದು?' ಎಂದ ನಿಕೊಸ್ಟ್ರಾಟೊ ಚಿಂತೆಗೊಳಗಾದವನಂತೆ.

'ಬನ್ನಿ ನೋಡೋಣ' ಎಂದು ಬೆಳಕಿಗಾಗಿ ಕಿಟಕಿಯತ್ತ ಕರೆದೊಯ್ದು ಬಾಯಿತೆರೆಸಿ ನೋಡಿದಳು.

'ಹೋ. ಒಂದು ಹಲ್ಲು ಪೂರಾ ಕೊಳೆತಿದೆ. ಅದು ಇತರರಿಗೆ ಸೋಂಕು ಹರಡುವ ಮುನ್ನ ಅದನ್ನು ತೆಗೆಯಲೇಬೇಕು' ಎಂದಳು.

'ಹಾಗಿದ್ದಲ್ಲಿ ವೈದ್ಯರನ್ನು ಕರೆಸೋಣ' ಎಂದ ಗಾಬರಿಯಾಗಿದ್ದ ನಿಕೊಸ್ಟ್ರಾಟೊ.

'ಬೇಡ, ವೈದ್ಯನೇಕೆ ಬೇಕು? ಅವರೋ ಹೃದಯಹೀನರು, ಎಷ್ಟು ನೋವಾಗುತ್ತಿದ್ದರೂ, ಪೂರ್ತಿ ತೆಗೆಯದೇ ಬಿಡುವುದಿಲ್ಲ. ಆ ಹಲ್ಲು ಎಷ್ಟು ಕೊಳೆತಿದೆಯೆಂದರೆ, ನಾನೇ ಸುಲಭವಾಗಿ ಕಿತ್ತುಬಿಡಬಹುದು. ಅಲ್ಲದೆ, ನೋವಾಗುತ್ತಿದ್ದರೆ ಹೇಳಿ, ತಕ್ಷಣ ನಿಲ್ಲಿಸಿಬಿಡುತ್ತೇನೆ' ಎಂದಳು ಎಲ್ಲಾ ಮೊದಲೇ ಯೋಜನೆಮಾಡಿಕೊಂಡಿದ್ದ ಲಿಡಿಯಾ.

ಬೊಕಾಷಿಯೋನ ಡೆಕಮೆರಾನ್

ಸೇವಕಿ ಲುಸ್ಕಾಳಿಗೆ ಇಕ್ಕಳ ತರಲು ಹೇಳಿ ಇಬ್ಬರು ಹೆಂಗಸರೂ ಅವನ ಹಲ್ಲು ಕೀಳುವ ಕಾಯಕಕ್ಕೆ ಇಳಿದರು. ಲುಸ್ಕಾ ಆತನನ್ನು ಬಿಗಿಯಾಗಿ ಹಿಡಿದುಕೊಂಡಳು, ಲಿಡಿಯಾ ಒಂದು ಒಳ್ಳೆಯ ಹಲ್ಲನ್ನೇ ಬಲವಾಗಿ ಹಿಡಿದು, ಅವನು ಅರಚಿಕೊಳ್ಳುತ್ತಿದ್ದರೂ ಬಿಡದೆ ಕಿತ್ತುಬಿಟ್ಟಳು. ಕಿತ್ತ ತಕ್ಷಣ ಅದನ್ನು ದಿಂಬಿನಡಿ ಅಡಗಿಸಿಟ್ಟು ಅಲ್ಲಿ ಮೊದಲೇ ಇರಿಸಿದ್ದ ಕೊಳೆತ ಹಲ್ಲೊಂದನ್ನು ತೆಗೆದು ಅವನಿಗೆ ತೋರಿಸಿ, 'ನೋಡಿ, ಎಂತಹ ಕೊಳೆತ ಹಲ್ಲನ್ನು ಇಷ್ಟುದಿನ ನಿಮ್ಮ ಬಾಯಿಯಲ್ಲಿ ಇರಿಸಿಕೊಂಡಿದ್ದಿರಿ' ಎಂದಳು. ನೋವಿನಿಂದ ನರಳುತ್ತಿದ್ದ ನಿಕೊಸ್ಟ್ರಾಟೊ ಅವಳ ಮಾತನ್ನು ನಂಬಿದ. ಲಿಡಿಯಾ ಕಿತ್ತ ಒಳ್ಳೆಯ ಹಲ್ಲನ್ನು ಪಿರ್ರೋನಿಗೆ ಕಳುಹಿಸಿ, ಅವನ ಮೂರೂ ಷರತ್ತು ತಾನು ಈಡೇರಿಸಿರುವುದರಿಂದ ಇನ್ನು ಆತ ತಾನು ಹೇಳಿದ ಹಾಗೆ ಕೇಳಬೇಕೆಂದು ಹೇಳಿಕಳುಹಿಸಿದಳು.

ಇನ್ನು ಬಾಕಿ ಉಳಿದದ್ದು ತಾನೇ ಮಾಡಿಕೊಂಡ ಶಪಥ. ಅದನ್ನೂ ಈಡೇರಿಸಲು ಉಪಾಯವೊಂದನ್ನು ಯೋಜಿಸಿದಳು. ಲಿಡಿಯಾ ಕಾಯಿಲೆ ಬಿದ್ದವಳಂತೆ ನಟಿಸಿದಳು. ಗುಪ್ತವಾಗಿ ತನ್ನ ಯೋಜನೆಯನ್ನು ಪಿರ್ರೋನಿಗೆ ತಿಳಿಸಿದಳು. ಒಂದು ದಿನ ಗಂಡ ನಿಕೊಸ್ಟ್ರಾಟೊ ಮತ್ತು ಪಿರ್ರೊ ಅವಳಲ್ಲಿಗೆ ಬಂದರು. ಕಾಯಿಲೆಯಿಂದ ನರಳುವಂತೆ ನಟಿಸುತ್ತಿದ್ದ ಲಿಡಿಯ ತೋಟದಲ್ಲಿ ಹವಾಸೇವನೆಗೆ ಹೋಗಬೇಕೆಂಬ ಆಸೆ ವ್ಯಕ್ತಪಡಿಸಿದಳು. ನಿಕೊಸ್ಟ್ರಾಟೊ ಮತ್ತು ಪಿರ್ರೊ ಇಬ್ಬರೂ ಅವಳನ್ನು ತೋಟಕ್ಕೆ ಕೊಂಡೊಯ್ದು ಅಲ್ಲಿ ಪಿಯರ್ ಮರವೊಂದರ ಕೆಳಗಿನ ಹುಲ್ಲುಹಾಸಿನ ಮೇಲೆ ಕೂಡಿಸಿದರು. ಅಲ್ಲಿ ಕೂತ ನಂತರ ಪಿರ್ರೋನೊಂದಿಗಿನ ಯೋಜನೆಯಂತೆ ಆಕೆ ಆತನನ್ನು ಕೆಲವು ಪಿಯರ್ ಹಣ್ಣು ಕಿತ್ತುಕೊಡುವಂತೆ ಕೇಳಿದಳು. ಮರಹತ್ತಿದ ಪಿರ್ರೊ ಕೆಲವು ಹಣ್ಣು ಕಿತ್ತೆಸೆದು, ನಿಕೊಸ್ಟ್ರಾಟೋನನ್ನು ನೋಡಿ, 'ಏನಿದು ಯಜಮಾನರೆ, ಏನು ಮಾಡುತ್ತಿದ್ದೀರಿ? ಒಡತಿಯೇ ನೀವೂ ಸಹ! ಇಲ್ಲೇ ತೋಟದಲ್ಲಿ ಮಾಡಲು ನಿಮಗಿಬ್ಬರಿಗೂ ನಾಚಿಕೆಯಾಗುತ್ತಿಲ್ಲವೆ? ನನ್ನನ್ನೇನು ಕುರುಡನೆಂದುಕೊಂಡಿರುವಿರಾ? ನಿಮಗೆ ಈಗ ತಾನೆ ಕಾಯಿಲೆಯೆನ್ನುತ್ತಿದ್ದಿರಿ. ನಾನು ಮರಹತ್ತಿದ ಕೂಡಲೆ ಗಂಡನ ಜೊತೆ ಇಲ್ಲೇ ಬಟಾಬಯಲಲ್ಲೇ ಮಲಗಿದ್ದೀರಲ್ಲ! ಏಕೆ ಮನೆಯಲ್ಲಿ ಮಲಗುವ ಕೋಣೆಯಿಲ್ಲವೆ? ಥೀ!' ಎಂದ.

ಲಿಡಿಯಾ ಗಂಡನೆಡೆಗೆ ತಿರುಗಿ, 'ಪಿರ್ರೊ ಅದೇನು ಹೇಳುತ್ತಿದ್ದಾನೆ? ಅವನೇನೋ ಕನವರಿಸುತ್ತಿರುವಂತಿದೆ' ಎಂದು ಹೇಳಿದಳು.



'ಇಲ್ಲ ಒಡತಿಯೇ, ನಾನು ಕನವರಿಸುತ್ತಿಲ್ಲ. ನಾನು ಕಣ್ಣಾರೆ ಕಾಣುತ್ತಿರುವುದನ್ನು ನಾನು ಹೇಳುತ್ತಿದ್ದೇನೆ' ಎಂದ ಪಿರ್ರೊ.

ನಿಕೊಸ್ಟ್ರಾಟೋಗೆ ಅವನ ಮಾತು ಕೇಳಿ ಅಚ್ಚರಿಯಾಗಿತ್ತು. 'ಹೇ, ಪಿರ್ರೊ, ನೀನೆಲ್ಲೋ ಕನಸುಕಾಣುತ್ತಿದ್ದೀಯ. ಇಳಿ ಕೆಳಗೆ' ಎಂದು ಗದರಿಸಿದ.

'ಇಲ್ಲ ಒಡೆಯ. ನಾನು ಕನಸು ಕಾಣುತ್ತಿಲ್ಲ. ನಿಮ್ಮ ಅಲುಗಾಟ ಎಷ್ಟು ಬಿರುಸಾಗಿದೆಯೆಂದರೆ, ಈ ಮರದ ಮೇಲೆ ಒಂದೂ ಪಿಯರ್‌ಹಣ್ಣು ಉಳಿಯುವಂತಿಲ್ಲ. ನಾನು ಇಳಿಯುವುದೇನು, ಈ ಮರದ ಅಲುಗಾಟಕ್ಕೆ ನಾನೇ ಬಿದ್ದುಬಿಡುವಂತಿದೆ' ಎಂದ ಪಿರ್ರೊ.

ನಿಕೊಸ್ಟ್ರಾಟೊ ಗದರಿಸಿ ಅವನ್ನು ಕೆಳಗಿಳಿಸಿ, 'ಈಗೇನು ಕಾಣುತ್ತಿದೆ?' ಎಂದು ಕೇಳಿದ. 'ನಾನು ಮರದ ಮೇಲಿದ್ದಾಗ ನೀವು ನಿಮ್ಮ ಪತ್ನಿಯ ಮೇಲಿದ್ದಿರಿ. ನಾನು ಇಳಿದು ಬರುತ್ತಿರುವಂತೆ ನೀವು ಎದ್ದು ಕೂಡುತ್ತಿರುವುದನ್ನು ಕಂಡೆ' ಎಂದ ಪಿರ್ರೊ.

'ನಿನಗೆಲ್ಲೋ ತಲೆ ಕೆಟ್ಟಿರಬೇಕು. ನೀನು ಮರಹತ್ತಿದಾಗ ಇಲ್ಲಿ ಕೂತವನು ನಾನು ಎದ್ದೇ ಇಲ್ಲ' ಎಂದ ನಿಕೊಸ್ಟ್ರಾಟೊ.

'ಅಷ್ಟೊಂದು ವಾದವೇಕೆ? ನೀವೇ ಮರಹತ್ತಿನೋಡಿ, ಏನು ಕಾಣುತ್ತದೊ' ಎಂದಳು ಲಿಡಿಯಾ.

'ಹೌದು ನೋಡೇಬಿಡುತ್ತೇನೆ. ಆ ಮರದಲ್ಲಿ ಅಂತಹುದೇನಿದೆ' ಎಂದ ನಿಕೊಸ್ಟ್ರಾಟೊ ಮರಹತ್ತಿದ.

ಅತ್ತ ನಿಕೊಸ್ಟ್ರಾಟೊ ಮರಹತ್ತಿದ ಕೂಡಲೇ, ಇತ್ತ ಪಿರ್ರೊ ಲಿಡಿಯಾಳನ್ನು ಹತ್ತಿದ. ಅವರನ್ನು ನೋಡಿದ ಕೂಡಲೇ ನಿಕೊಸ್ಟ್ರಾಟೊ

ಕೂಗಿಕೊಳ್ಳತೊಡಗಿದ, 'ನೀಚ ಹೆಂಗಸೆ, ಏನು ಮಾಡುತ್ತಿದ್ದೀಯಾ? ಪಿರ್ರೋ ನೀನು ನನ್ನ ಹೆಂಡತಿಗೆ.... ಎಂಥಾ ವಿಶ್ವಾಸಘಾತುಕ ಕೆಲಸಗಾರ ನೀನು! ನಿನ್ನನ್ನು ಕೊಲ್ಲುತ್ತೇನೆ!' ಎನ್ನುತ್ತ ಮರದಿಂದ ಇಳಿದುಬಂದ. ಅವನು ಇಳಿದು ಬರುವಷ್ಟರಲ್ಲಿ ಲಿಡಿಯಾ ಮತ್ತು ಪಿರ್ರೊ ದೂರದೂರ ಸರಿದು ಮೊದಲೆಲ್ಲಿದ್ದರೋ ಅಲ್ಲೇ ಕೂತಿದ್ದರು.

'ನಾವಿಲ್ಲೇ ಕೂತಿದ್ದೇವೆ' ಎಂದಳು ಲಿಡಿಯ. ಆದರೂ ನಿಕೊಸ್ಟ್ರಾಟೊ ಬಯ್ಯುತ್ತಲೇ ಇದ್ದ.

'ಇಲ್ಲ ಒಡೆಯ, ನೀವೇನು ಕಂಡಿರೋ, ಅದನ್ನೇ ನಾನು ಕಂಡೆ. ನಾನಂತೂ ಏನೂ ಮಾಡಿಲ್ಲ. ಈ ಮರದಲ್ಲೇ ಏನೋ ದೋಷವಿರುವಂತಿದೆ' ಎಂದ ಪಿರ್ರೊ.

ಲಿಡಿಯಾ ಸಹ ತನ್ನ ಗಂಡನ ಮೇಲೆ ಸಿಟ್ಟುಗೊಂಡವಳಂತೆ ನಟಿಸಿ ಎದ್ದು ನಿಂತಳು, 'ನನಗೇನು ತಲೆಯಿಲ್ಲವೆ? ಮತ್ತೊಬ್ಬ ಗಂಡಿನೊಂದಿಗೆ ನಿನ್ನ ಕಣ್ಣೆದುರೇ ಮಲಗುವಷ್ಟು ದಡ್ಡಳಲ್ಲ ನಾನು. ನಮ್ಮ ಮನೆಯಲ್ಲಿ ಕೋಣೆಗಳಿಗೇನು ಕೊರತೆಯಿದೆಯೆ! ಆ ರೀತಿ ಮಲಗಿದರೂ ನಿನಗೆ ತಿಳಿಯುವುದು ಸಾಧ್ಯವೇ ಇಲ್ಲ. ನನ್ನ ಮೇಲೆ ಅಪನಂಬಿಕೆಯೆ?' ಎಂದಳು.

ನಿಕೊಸ್ಟ್ರಾಟೊ ಅವರಿಬ್ಬರ ಮಾತನ್ನು ನಂಬಿ, ತನ್ನ ಕಣ್ಣೆದುರಿಗೆ ನಡೆದದ್ದು ನಿಜವಲ್ಲ ಎಂದುಕೊಂಡ. ಆ ಪಿಯರ್ ಮರದಲ್ಲಿ ಎಂಥದೋ ದೋಷವಿದೆ ಎಂದೂ ನಂಬಿದ. ಆದರೂ ತನ್ನ ಮೇಲೆ ಸಂಶಯಗೊಂಡ ಗಂಡನ ಮೇಲೆ ಸಿಟ್ಟು ತೋರಿಸಿ,

'ಈ ದುಷ್ಟ ಪಿಯರ್ ಮರ ಇರಲೇಬಾರದು. ಮತ್ತೊಮ್ಮೆ ಮತ್ತೊಬ್ಬ ಹೆಣ್ಣಿಗೆ ಈ ಮರ ಅವಮಾನ ಉಂಟುಮಾಡಬಾರದು' ಎಂದು ಹೇಳಿದಳು. ನಿಕೊಸ್ಟ್ರಾಟೊ ಪಿರ್ರೋನಿಗೆ ಕೊಡಲಿ ತರಲು ಹೇಳಿ ಆ ಮರವನ್ನು ಕಡಿಸಿಹಾಕಿದ. ಸುಮ್ಮಸುಮ್ಮನೆ ತನ್ನ ಪತ್ನಿಯ ಮೇಲೆ ಸಂಶಯಪಟ್ಟಿದ್ದಕಾಗಿ ಆಕೆಯ ಕ್ಷಮೆ ಕೋರಿದ. ಆಕೆ ಸಂತೋಷವಾಗಿ ಕ್ಷಮಿಸಿದಳು. ಅದಾದ ನಂತರ ಆಕೆ ಹೇಳಿದ್ದಂತೆ ಅವರ ಮನೆಯಲ್ಲಿ ಹಲವಾರು ಕೋಣೆಗಳಿದ್ದು, ಅವುಗಳಲ್ಲಿ ನಡೆಯುತ್ತಿದ್ದುದು ಆಕೆಯ ಗಂಡನಿಗೆ ತಿಳಿಯುತ್ತಲೇ ಇರಲಿಲ್ಲ.

ದೇಶದ್ರೋಹಿ

ಇಟಲಿಯ ಫ್ಲಾರೆನ್ಸ್ ನಗರದಲ್ಲಿ ಇಸಬೆಲ್ಲಾ ಎಂಬ ಸುಂದರಿಯಿದ್ದಳು. ಆಕೆಯ ಗಂಡ ಸೈನ್ಯದಲ್ಲಿ ಸೇವೆ ಸಲ್ಲಿಸುವ ಒಬ್ಬ ವೀರಯೋಧನಾಗಿದ್ದನು. ಒಂದೇ ತರಹದ ಆಹಾರ ನಿರಂತರವಾಗಿ ಸೇವಿಸುತ್ತಿದ್ದರೆ ಬೇಸರವಾಗುವಂತೆ ಇಸಬೆಲ್ಲಾಳಿಗೆ ತನ್ನ ಗಂಡನ ಬಗ್ಗೆ ಆಸಕ್ತಿ ಕಡಿಮೆಯಾಗಿ ಲಿಯೊನೆಟ್ಟೊ ಎಂಬ ಯುವಕನನ್ನು ಪ್ರೇಮಿಸುತ್ತಿದ್ದಳು. ಲಿಯೊನೆಟ್ಟೊ ಉಚ್ಚ ಮನೆತನದವನು ಅಲ್ಲದಿದ್ದರೂ ಉತ್ತಮ ನಡತೆಯ, ಸ್ಫುರದ್ರೂಪಿ ಯುವಕನಾಗಿದ್ದ. ಆತನೂ ಸಹ ಸುಂದರಿ ಇಸಬೆಲ್ಲಾಳನ್ನು ಅತ್ಯಮೋಘವಾಗಿ ಪ್ರೀತಿಸುತ್ತಿದ್ದ. ಈ ಎರಡೂ ಮನಸುಗಳು ಹಾಗೂ ದೇಹಗಳು ಪರಸ್ಪರ ಪ್ರೀತಿಸುತ್ತಿದ್ದುದರಿಂದ ಇಡೀ ಜಗತ್ತಿನಲ್ಲೇ ಅತ್ಯಂತ ಸುಖೀ ಪ್ರೇಮಿಗಳು ಅವರಾಗಿದ್ದರು.

ಇಸಬೆಲ್ಲಾ ಅತ್ಯಂತ ಮೋಹಕ ಸುಂದರಿಯಾಗಿದ್ದುದರಿಂದ ಅದೇ ಊರಿನ ಮತ್ತೊಬ್ಬ ಗಣ್ಯವ್ಯಕ್ತಿ ಹಾಗೂ ಸರದಾರ ಲ್ಯಾಂಬರ್ಟುಷಿಯೋನ ಕಣ್ಣು ಸಹ ಅಕೆಯ ಮೇಲೆ ಬಿತ್ತು. ತನ್ನ ಪ್ರೇಮ ಸಂದೇಶವನ್ನು ಆತ ಹಲವಾರು ಬಾರಿ ಆಕೆಗೆ ಕಳುಹಿಸಿದ. ಆದರೆ ಆತನ ನಡತೆ ಇತ್ಯಾದಿಗಳು ಆಕೆಗೆ ಸರಿಬರುತ್ತಿರಲಿಲ್ಲವಾದುದರಿಂದ ಅವನ ಪ್ರೇಮವನ್ನು ತಿರಸ್ಕರಿಸಿದ್ದಳು. ಆದರೆ ಪಟ್ಟುಬಿಡದ ಲ್ಯಾಂಬರ್ಟುಷಿಯೋ ತನ್ನ ಅಧಿಕಾರದ ದರ್ಪ ಬಳಸಿ ಇಸಬೆಲ್ಲಾಳನ್ನು ಹೆದರಿಸಿದ, ಆಕೆ ಒಪ್ಪದಿದ್ದಲ್ಲಿ ಊರಿನಲ್ಲೆಲ್ಲಾ ಆಕೆಯ ಬಗ್ಗೆ ಅಪಪ್ರಚಾರ ಮಾಡುವುದಾಗಿ ಬೆದರಿಸಿದ. ಹೆದರಿದ ಆಕೆ ಒಪ್ಪಿಕೊಂಡಿದ್ದಳು. ಲ್ಯಾಂಬರ್ಟುಷಿಯೊ ಆಕೆಯೊಂದಿಗೆ ಸುಮಧುರ ಕ್ಷಣಗಳನ್ನು ಕಳೆಯಲು ಸೂಕ್ತ ಸಮಯಕಾಗಿ ಕಾಯುತ್ತಿದ್ದ.

ಸಾಮಾನ್ಯವಾಗಿ ಇಟಲಿಯ ಬೇಸಿಗೆಯಲ್ಲಿ ಜನ ತಮ್ಮ ತೋಟದ ಮನೆಗಳಿಗೆ ಹೋಗಿ ವಿಶ್ರಾಂತಿ ಪಡೆಯುವುದು ವಾಡಿಕೆ. ಅದೇ ರೀತಿ ಆ ಬೇಸಿಗೆ ಇಸಬೆಲ್ಲಾ ಹಾಗೂ ಅವಳ ಗಂಡ ತಮ್ಮ ತೋಟದ ಮನೆಯಲ್ಲಿ ಬಿಡಾರ ಹೂಡಿದ್ದರು. ಒಂದು ದಿನ ತುರ್ತುಸಂದೇಶ ಬಂದು ಇಸಬೆಲ್ಲಾಳ ಗಂಡ ಹಲವಾರು ದಿನಗಳ ಕಾಲ ದೂರದ ಊರಿಗೆ ಹೋಗಬೇಕಾಗಿಬಂತು. ಆತ ಹೆಂಡತಿಯನ್ನು ಬಿಟ್ಟುಹೋಗಬೇಕಲ್ಲ ಎಂದು ಬೇಸರದಿಂದ ಹೊರಟರೆ, ಒಳ್ಳೆಯ ಅವಕಾಶ ದೊರೆತಿದೆ ಎಂದು ಆಕೆ ಆತನನ್ನು ಸಂತೋಷದಿಂದ ಕಳಿಸಿಕೊಟ್ಟಳು. ಗಂಡ ಅತ್ತ ಹೊರಟಕೂಡಲೆ ಇಸಬೆಲ್ಲಾ ತನ್ನ ಪ್ರಿಯಕರ ಲಿಯೊನೆಟ್ಟೋನಿಗೆ ಹೇಳಿಕಳುಹಿಸಿದಳು. ಪ್ರೇಮಿಗಳಿಬ್ಬರಿಗೂ ಇಂತಹ ಸದವಕಾಶ ದೊರೆತು ಬಹಳ ದಿನಗಳಾಗಿತ್ತು. ಇಬ್ಬರೂ ತೋಟದಮನೆಯಲ್ಲಿ ಜಗವನ್ನೇ ಮರೆಯುವಂತಿದ್ದರು.

ಇಸಬೆಲ್ಲಾಳ ಗಂಡ ದೂರದ ಊರಿಗೆ ಹೊರಟ್ಟಿದ್ದು ಹಾಗೂ ಆಕೆ ಒಬ್ಬಳೇ ತೋಟದ ಮನೆಯಲ್ಲಿ ಇರುವ ವಿಷಯ ತಿಳಿದು ಸರದಾರ ಲ್ಯಾಂಬರ್ಟುಷಿಯೊ ತನಗೆ ಒಳ್ಳೆಯ ಅವಕಾಶ ದೊರೆತಿದೆಯೆಂದು ತಿಳಿದು ತನ್ನ ಬಹಳ ದಿನದ ಆಸೆ ತೀರಿಸಿಕೊಳ್ಳುವ ಸಲುವಾಗಿ ಇಸಬೆಲ್ಲಾಳ ತೋಟದ ಮನೆಗೆ ಬಂದ. ಆತ ಕುದುರೆಯೇರಿ ಬರುತ್ತಿದ್ದುದನ್ನು ನೋಡಿದ ಸೇವಕಿ ಕೋಣೆಯಲ್ಲಿ ಲಿಯೊನೆಟ್ಟೋನ ತೋಳಿನಲ್ಲಿ ಬಂಧಿಯಾಗಿದ್ದ ಇಸಬೆಲ್ಲಾಳಿಗೆ ಕದ ತಟ್ಟಿ ವಿಷಯ ತಿಳಿಸಿದಳು. ಅತ್ಯಂತ ಸುಮಧುರ ಕ್ಷಣದಲ್ಲಿ ಕರಡಿ ಬಂದಂತೆ ಬಂದ ಲ್ಯಾಂಬರ್ಟುಷಿಯೊ ಬಗ್ಗೆ ಆಕೆಗೆ ಅತೀವ ಸಿಟ್ಟುಬಂತು ಹಾಗೂ ಅವನ ಬಗ್ಗೆ ಹೆದರಿಕೆಯೂ ಆಯಿತು. ತನ್ನ ಪ್ರಿಯಕರ ಲಿಯೊನೆಟ್ಟೋನನ್ನು ಒಲಿಸಿ, ಲ್ಯಾಂಬರ್ಟುಷಿಯೊ ವಾಪಸ್ಸು ಹೋಗುವವರೆಗೂ ಅಲ್ಲೇ ಮಂಚದ ಕೆಳಗೆ ಅವಿತುಕೊಳ್ಳುವಂತೆ ಕೇಳಿಕೊಂಡಳು. ಆತ ಸಜ್ಜನನಾದುದರಿಂದ ಹಾಗೂ ಆತನಿಗೂ ಲ್ಯಾಂಬರ್ಟುಷಿಯೋನ ಬಗ್ಗೆ ಹೆದರಿಕೆ ಇದ್ದುದರಿಂದ ಒಪ್ಪಿಕೊಂಡು ಅಲ್ಲೇ ಮಂಚದ ಕೆಳಗೆ ಅವಿತುಕೊಂಡ.

ಸರದಾರ ಲ್ಯಾಂಬರ್ಟುಷಿಯೊ ಮನೆಯ ಮುಂದಿನ ಮರಕ್ಕೆ ತನ್ನ ಕುದುರೆ ಕಟ್ಟಿ ಧಿಮಾಕಿನಿಂದ ಒಳಬಂದ. ಇಸಬೆಲ್ಲಾ ಅವನನ್ನು ಬಲವಂತದ ನಗುಮುಖದಿಂದ ಸ್ವಾಗತಿಸಿದಳು ಹಾಗೂ ಬಂದ ವಿಷಯವೇನೆಂದು ಕೇಳಿದಳು. ಸರದಾರ ಒಮ್ಮೆಲೇ ಅವಳನ್ನು ಆಲಂಗಿಸಿ ಚುಂಬಿಸಿದ. 'ನಿನ್ನ ಗಂಡ ಪರದೇಶ ಹೋಗಿರುವ ವಿಷಯ ತಿಳಿಯಿತು. ನಿನ್ನೊಂದಿಗೆ ಕೆಲ ಸಮಯ ಕಳೆಯೋಣವೆಂದು ಬಂದೆ' ಎಂದವನೇ ಅವಳನ್ನೆತ್ತಿಕೊಂಡು ಮಂಚದೆಡೆಗೆ ನಡೆದ. ಆಕೆಗೆ ಆತ ಇಷ್ಟವಿಲ್ಲದಿದ್ದರೂ ಸಹಿಸಿಕೊಂಡು ಒಪ್ಪಿದಳು.

ಅಷ್ಟರಲ್ಲಿ ಇಸಬೆಲ್ಲಾಳ ಗಂಡ ತನಗೆ ತಪ್ಪು ಸಂದೇಶ ಬಂದಿದ್ದುದರಿಂದ ಹಾಗೂ ಆತ ದೂರದ ಊರಿಗೆ ಹೋಗಬೇಕಾದ ಕಾರಣವಿಲ್ಲದಿದ್ದುದರಿಂದ ತನ್ನ ಪ್ರಯಾಣ ರದ್ದುಗೊಳಿಸಿ, ಪಾಪ ಹೆಂಡತಿ ತೋಟದ ಮನೆಯಲ್ಲಿ

ಒಬ್ಬಳೇ ಇದ್ದಾಳೆ, ಅವಳಿಗೆ ಬೇಸರವಾಗಿರಬಹುದು ಎಂದುಕೊಂಡು ಬೇಗಬೇಗನೆ ಹಿಂದಿರುಗಿದ. ಆತ ಬಂದುದನ್ನು ಕಿಟಕಿಯಿಂದ ನೋಡಿದ ಸೇವಕಿ ತನ್ನ ಒಡತಿಯ ಕತೆ ಮುಗಿದಂತೆಯೇ ಎಂದು ಹೆದರಿ ಚೀರಿಕೊಂಡು ಇಸಬೆಲ್ಲಾಳ ಕೋಣೆಯ ಬಾಗಿಲು ತಟ್ಟಿ ವಿಷಯ ತಿಳಿಸಿದಳು.

ಇಸಬೆಲ್ಲಾಳಿಗೆ ಪ್ರಾಣವೇ ಹೋದಂತಾಯಿತು. ಮಂಚದ ಕೆಳಗೊಬ್ಬ, ತನ್ನ ಮೇಲೊಬ್ಬ– ಗಂಡನಿಗೆ ಏನೆಂದು ಹೇಳುವುದು!. ಮಂಚದ ಕೆಳಗಿರುವ ಲಿಯೊನೆಟ್ಟೋನನ್ನು ಅಲ್ಲೇ ಅವಿಸಿಡಬಹುದು, ಈ ಲ್ಯಾಂಬರ್ಟುಷಿಯೋನನ್ನು ಅವಿಸಿಡಲು ಸಾಧ್ಯವೇ ಇಲ್ಲ, ಅಲ್ಲದೆ ಅವನ ಕುದುರೆ ಮನೆಯ ಮುಂದೆಯೇ ಇದೆ! ಅಂತಹ ಪರಿಸ್ಥಿತಿಯಲ್ಲಿಯೂ ಆಕೆಗೊಂದು ಉಪಾಯ ಹೊಳೆಯಿತು. ತನ್ನ ಮೇಲಿದ್ದ ಲ್ಯಾಂಬರ್ಟುಷಿಯೋನನ್ನು ಬದಿಗೆ ತಳ್ಳಿ, "ನನ್ನ ಮೇಲೆ ಪ್ರೇಮವಿದ್ದರೆ ಹಾಗೂ ನನ್ನ ಪ್ರಾಣ ಉಳಿಸಬೇಕೆಂದಿದ್ದರೆ ನಾನು ಹೇಳಿದಂತೆ ಮಾಡಿ ನನ್ನನ್ನು ಆಪತ್ತಿನಿಂದ ಕಾಪಾಡು. ನಿನ್ನ ಕತ್ತಿಯನ್ನು ಕೈಯಲ್ಲಿ ಹಿಡಿದು ಸರಸರನೆ ಮೆಟ್ಟಲಿಳಿದುಹೋಗು. ಹೋಗುವಾಗ 'ದೇವರ ಮೇಲೆ ಶಪಥ ಮಾಡುತ್ತೇನೆ, ಒಂದಲ್ಲ ಒಂದು ದಿನ ಆ ದೇಶದ್ರೋಹಿಯನ್ನು ಹಿಡಿದೇ ತೀರುತ್ತೇನೆ' ಎಂದು ಹೇಳಿಕೊಂಡುಹೋಗು. ನನ್ನ ಗಂಡ ಎದುರು ಕಂಡು ಮಾತನಾಡಿಸಿದರೂ, ಆತ ಏನೇ ಹೇಳಿದರೂ ನೀನು ಮಾತನಾಡಬೇಡ. ನಾನು ಹೇಳಿಕೊಟ್ಟಷ್ಟನ್ನೇ ಹೇಳಿ ಸುಮ್ಮನೆ ನಿನ್ನ ಕುದುರೆ ಹತ್ತಿ ಹೊರಟುಹೋಗು, ಇಲ್ಲಿ ನಿಲ್ಲಲೇಬೇಡ" ಎಂದಳು.

ಬಹಳ ದಿನಗಳಿಂದ ಕಾದಿದ್ದ ಅವಕಾಶ ಸರದಾರ ಲ್ಯಾಂಬರ್ಟುಷಿಯೋನಿಗೆ ಈ ದಿನ ದೊರೆತಿತ್ತು. ಇಂತಹ ಅವಕಾಶ ಕೈತಪ್ಪಿಹೋಗಿದ್ದರಿಂದ ಆತನಿಗೆ ಆಕೆಯ ಗಂಡನ ಮೇಲೆ ವಿಪರೀತ ಸಿಟ್ಟು ಬಂದಿತ್ತು. ಹಾಳಾದವನು ಸ್ವಲ್ಪ ತಡವಾಗಿಯಾದರೂ ಬರಬಾರದೆ ಎಂದು ಶಪಿಸಿದ. ಆದರೆ ಆಕೆಯ ಗಂಡನ ಎದುರು ಈ ರೀತಿ ತನಗೂ ಸಿಕಿಹಾಕಿಕೊಳ್ಳಲು ಇಷ್ಟವಿರಲಿಲ್ಲ. ಹಾಗಾಗಿ ಆಕೆಯ ಸೂಚನೆಗೆ ಒಪ್ಪಿಕೊಂಡ. ಕತ್ತಿ ಹಿಡಿದು ಧಡಧಡನೆ ಮೆಟ್ಟಲಿಳಿದು ಹೊರಟ. ತಾನು ಮಾಡುತ್ತಿದ್ದ ಕಸರತ್ತಿನಿಂದಾಗಿ ಹಾಗೂ ಹಾಳಾದ ಗಂಡನ ಮೇಲಿನ ವಿಪರೀತ ಸಿಟ್ಟಿನಿಂದಾಗಿ ಅವನ ಮುಖ ಬೆವೆತು ಕೆಂಪಗಾಗಿ ಕೆಂಡಾಮಂಡಲವಾಗಿತ್ತು.

ಕುದುರೆಯಿಳಿದ ಗಂಡನಿಗೆ ತನ್ನ ಮನೆಯ ಅಂಗಳದಲ್ಲಿ ಮತ್ತೊಂದು ಕುದುರೆ ಕಂಡು ಅಚ್ಚರಿಯಾಗಿತ್ತು. 'ಯಾರು ಬಂದಿರಬಹುದು?' ಎಂದು ಆಲೋಚಿಸುತ್ತಿರುವಂತೆ ಎದುರಿಗೆ ಕತ್ತಿ ಹಿಡಿದ ಸರದಾರ ಲ್ಯಾಂಬರ್ಟುಷಿಯೊ ಬಂದ. ಆತನ ಮುಖದಲ್ಲಿ ಸಿಟ್ಟು, ಕ್ರೋಧ ನೋಡಿ ಗಾಭರಿಗೊಂಡ ಗಂಡ,



'ಹೋ, ಸರದಾರರೇ! ಏಕೆ ಏನಾಯಿತು?' ಎಂದು ಕೇಳಿದ. ಆತ ಗಂಡನ ಕಡೆಗೆ ತಿರುಗಿ ನೋಡಲೇ ಇಲ್ಲ. ನೇರವಾಗಿ ತನ್ನ ಕುದುರೆ ಹತ್ತಿ, 'ದೇವರ ಮೇಲೆ ಆಣೆ, ಆ ದೇಶದ್ರೋಹಿಯನ್ನು ಒಂದಲ್ಲ ಒಂದು ದಿನ ಹಿಡಿದೇ ತೀರುತ್ತೇನೆ' ಎಂದು ಅಬ್ಬರಿಸಿ ಕುದುರೆಹತ್ತಿ ಹೊರಟುಹೋದ.

ಗಂಡನಿಗೆ ಏನೊಂದೂ ಅರ್ಥವಾಗದೆ ಒಳಹೋದ. ಅಲ್ಲೇ ಮೆಟ್ಟಿಲಮೇಲೆ ಹೆಂಡತಿ ಇಸಬೆಲ್ಲಾ ಗಾಭರಿಗೊಂಡವಳಂತೆ ನಿಂತಿದ್ದಳು. 'ಆತ ಏನಿದೆಲ್ಲ? ಸರದಾರ ಲ್ಯಾಂಬರ್ಟುಷಿಯೋ ಯಾರನ್ನೋ ಹಿಡಿದೇ ತೀರುತ್ತೇನೆ ಎಂದು ಹೇಳಿ ಹೊರಟನಲ್ಲ. ಯಾರದು ದೇಶದ್ರೋಹಿ?' ಎಂದು ಕೇಳಿದ.

ಆಕೆ ಗಂಡನನ್ನು ಮಲಗುವ ಕೋಣೆಗೆ ಕರೆದೊಯ್ದು ಮಂಚದ ಮೇಲೆ ಕೂಡ್ರಿಸಿ, ಮಂಚದ ಕೆಳಗಿದ್ದ ಲಿಯೊನೆಟ್ಟೋನಿಗೆ ಕೇಳಿಸುವಂತೆ ಹೇಳಿದಳು,

'ಹೋ, ಇಷ್ಟು ನಾನೆಂದೂ ಹೆದರಿರಲಿಲ್ಲ. ಯಾರೋ ಅಪರಿಚಿತ ಯುವಕ ಈ ಮನೆಯೊಳಗೆ ಓಡಿಬಂದ. ಆತನ ಹಿಂದೆ ಸರದಾರ ಲ್ಯಾಂಬರ್ಟುಷಿಯೊ ಕತ್ತಿ ಹಿರಿದು ಆತನನ್ನು ಅಟ್ಟಿಸಿಕೊಂಡುಬರುವುದು ಕಂಡೆ. ನನ್ನ ಕೋಣೆಯೊಳಗೆ ಓಡಿಬಂದ ಆ ಯುವಕ, ದಯವಿಟ್ಟು ನನ್ನ ಜೀವ ಕಾಪಾಡಿ. ಸರದಾರ ನನ್ನನ್ನು ಕೊಲ್ಲಲು ಬರುತ್ತಿದ್ದಾನೆ? ಎಂದು ಬೇಡಿಕೊಂಡ. ಆ ಯುವಕ ಇಲ್ಲೇ ಮಂಚದ ಕೆಳಗೆ ಅವಿತಿದ್ದಾನೆ. ಎಲ್ಲಿ ಆ ದೇಶದ್ರೋಹಿ ಎಂದು ಹುಡುಕಿಬಂದ ಸರದಾರನಿಗೆ ಇಲ್ಯಾರು ಇಲ್ಲವೆಂದು ಹೇಳಿ ಕಳುಹಿಸಿದೆ. ನೀನೇ ನೋಡಿದಂತೆ ಆತ ಹಿಂದಿರುಗಿದ' ಎಂದು ಸುಳ್ಳನ್ನು ಸರಾಗವಾಗಿ ಪೋಣಿಸಿ ಹೇಳಿದಳು.

'ನೀನು ಒಳ್ಳೆಯ ಕೆಲಸ ಮಾಡಿದೆ. ನನ್ನ ಮನೆಯಲ್ಲಿ ಅಪರಿಚಿತರು ಸಾಯುವುದು ಒಳ್ಳೆಯದಲ್ಲ. ಎಲ್ಲಿ ಆ ಯುವಕ?' ಎಂದ ಒಳ್ಳೆಯ ಮನಸ್ಸಿನ ಗಂಡ.

ಎಲ್ಲಾ ಮಾತು ಕೇಳಿಸಿಕೊಂಡಿದ್ದ ಲಿಯೊನೆಟ್ಟೊ, 'ಇಲ್ಲಿದ್ದೇನೆ' ಎನ್ನುತ್ತಾ ಮಂಚದ ಕೆಳಗಿನಿಂದ ಹೊರಬಂದ.

'ಸಧ್ಯ ನಿನಗೇನೂ ತೊಂದರೆಯಾಗಿಲ್ಲವಲ್ಲ! ಏಕೆ ಸರದಾರ ನಿನ್ನನ್ನು ಕೊಲ್ಲಲು ಬಂದ?' ಎಂದು ಕೇಳಿದ ಗಂಡ.

'ಗೊತ್ತಿಲ್ಲ, ನನ್ನನ್ನೇಕೆ ಕೊಲ್ಲಲು ಬಂದನೋ ನನಗೇ ಅರ್ಥವಾಗುತ್ತಿಲ್ಲ. ನನ್ನನ್ನು ಬೇರೆ ಯಾರೊ ಎಂದು ಭಾವಿಸಿರಬೇಕು. ರಸ್ತೆಯಲ್ಲಿ ನನ್ನನ್ನು ನೋಡಿದವನೇ, ದೇಶದ್ರೋಹಿ! ನೀನು ಸಾಯಬೇಕು! ಎಂದು ಕತ್ತಿ ಹಿರಿದು ಅಟ್ಟಿಸಿಕೊಂಡು ಬಂದ. ನಾನು ಹೆದರಿ ಇಲ್ಲಿ ಓಡಿಬಂದೆ. ಈ ಮನೆಯ ಒಡತಿ ನನ್ನ ಪ್ರಾಣ ಕಾಪಾಡಿದರು. ಅವರಿಗೆ ನನ್ನ ವಂದನೆಗಳು' ಎಂದ ಕೈ ಜೋಡಿಸಿ.

'ಹೆದರಬೇಡ, ಇನ್ನು ನಾನಿದ್ದೇನೆ. ನಾನೇ ನಿನ್ನ ಮನೆಯವರೆಗೆ ಬಿಟ್ಟುಬರುತ್ತೇನೆ' ಎಂದು ಹೇಳಿದ ಗಂಡ ಅವನಿಗೆ ಹೊಟ್ಟೆತುಂಬ ಊಟ ಹಾಕಿ ತನ್ನದೇ ಒಂದು ಕುದುರೆ ನೀಡಿ ಫ್ಲಾರೆನ್ಸ್‌ವರೆಗೆ ಕರೆದೊಯ್ದು ಬಿಟ್ಟುಬಂದ.

ಗಂಡ, ಹೆಂಡತಿ ಮತ್ತು ಅವನು

ಬಹಳ ಹಿಂದೆ ಅರ್ಮೇನಿಯಾದಲ್ಲಿ ಒಬ್ಬ ಶ್ರೀಮಂತ ವರ್ತಕನಿದ್ದ. ಆತನ ಪತ್ನಿ ಅತ್ಯಂತ ಮೋಹಕ ಹಾಗೂ ಸುಂದರವಾಗಿದ್ದಳು. ಅಕೆ ಎಷ್ಟು ಸುಂದರವಾಗಿದ್ದಳೆಂದರೆ, ಆಕೆಯ ಗಂಡನೇ ಆಕೆಯ ಬಗ್ಗೆ ಅಸೂಯೆಪಡುತ್ತಿದ್ದ. ಊರಿನ ಗಂಡಸರೆಲ್ಲಾ ಆಕೆಯನ್ನು ನೋಡಿ ಮೆಚ್ಚಬಹುದು ಹಾಗೂ ಪ್ರೀತಿಸಬಹುದೆಂಬ ಸಂಶಯ ಅವನಲ್ಲಿತ್ತು. ಯಾರಾದರೂ ತನಗಿಂತ ಉತ್ತಮ ಗಂಡಸರು ಆಕೆಯಲ್ಲಿ ತಮ್ಮ ಪ್ರೇಮ ವ್ಯಕ್ತಪಡಿಸಿಕೊಂಡಲ್ಲಿ ಇವಳೆಲ್ಲಿ ಒಪ್ಪಿಕೊಂಡುಬಿಡುತ್ತಾಳೋ ಎನ್ನುವ ಹೆದರಿಕೆಯೂ ಇವನನ್ನು ನಿರಂತರವಾಗಿ ಕಾಡುತ್ತಿತ್ತು. ಹಾಗಾಗಿ ಆತ ಅವಳನ್ನು ಹದ್ದಿನ ಕಣ್ಣಿನಿಂದ ಕಾಯತೊಡಗಿದ– ಆಕೆಯನ್ನು ಯಾವುದೇ ಮದುವೆ, ಔತಣಕೂಟಗಳಿಗೆ ಅಥವಾ ಚರ್ಚಿಗೆ ಸಹ ಹೋಗಲು ಬಿಡುತ್ತಿರಲಿಲ್ಲ. ಆಕೆ ಮನೆಯಾಚೆ ಕಾಲಿಡುವುದಿರಲಿ ಕಿಟಕಿಯ ಬಳಿಯೂ ಹೋಗಲು ಆತ ಬಿಡುತ್ತಿರಲಿಲ್ಲ. ಆದರೆ ಆಕೆ ಅಂಥವಳಾಗಿರಲಿಲ್ಲವಾದುದರಿಂದ, ತನ್ನ ಗಂಡನ ನಡತೆಯಿಂದ ಆಕೆಗೆ ಅತೀವ ದುಃಖವಾಗುತ್ತಿತ್ತು. ಆತ ಎಷ್ಟು ಕಟ್ಟುನಿಟ್ಟಿನ ಷರತ್ತುಗಳನ್ನು ಹಾಕಿದ್ದನೆಂದರೆ, ಆಕೆಗೆ ಜೀವನವೇ ಬೇಸರವಾಗಿತ್ತು.

ತಾನು ಏನು ತಪ್ಪು ಮಾಡದಿದ್ದರೂ ತನ್ನ ಮೇಲೆ ಎಷ್ಟೆಲ್ಲಾ ನಿರ್ಬಂಧ ಹೇರಿರುವ ತನ್ನ ಗಂಡನಿಗೆ ಪಾಠ ಕಲಿಸಲು ತಾನು ತಪ್ಪು ಮಾಡಲೇಬೇಕೆಂದು ಒಂದು ದಿನ ನಿರ್ಧರಿಸಿದಳು. ಹೊರಗೆ ಹೋಗುವುದಿರಲಿ ಕಿಟಕಿಯಲ್ಲಾದರೂ ನಿಂತು ಯಾರಾದರೂ ಸ್ಫುರದ್ರೂಪಿ ಗಂಡಸರಿಗೆ ತನ್ನ ಸುಂದರ ಮುಖ ತೋರಿಸಿ ಮುಗುಳ್ನಗೋಣವೆಂದರೆ ಆಕೆ ಕಿಟಕಿಯ ಬಳಿಯೂ ಹೋಗುವಂತಿರಲಿಲ್ಲ. ಆದರೆ ನೆರೆಮನೆಯಲ್ಲಿ ಫಿಲಿಪ್ಪೊ ಎಂಬ ಸುಂದರ ಯುವಕನಿರುವ ವಿಷಯ ತನ್ನ ಕೆಲಸದವರಿಂದ ತಿಳಿದದ್ದು, ಹೇಗಾದರೂ ಮಾಡಿ ಆತನನ್ನು ಮಾತನಾಡಿಸಿ ಆತನಿಗೆ ಬೇಕಿದ್ದಲ್ಲಿ ತನ್ನ ಪ್ರೇಮ ನೀಡುವ ಇಚ್ಛೆವ್ಯಕ್ತಪಡಿಸುವ ಅವಕಾಶಕಾಗಿ ಕಾಯುತ್ತಿದ್ದಳು. ಆತ ನೆರೆಮನೆಯವನೇ

ಆಗಿದ್ದುದರಿಂದ ಹಾಗೂ ಅವರಿಬ್ಬರ ಮನೆಗಳ ನಡುವೆ ಗೋಡೆಯೊಂದೇ ಅಡ್ಡ ಇದ್ದುದರಿಂದ ಅದರಲ್ಲಿ ಬಿರುಕುಗಳೇನಾದರೂ ಇರಬಹುದೇನೋ ಎಂದು ಹುಡುಕಿದಳು. ಅವಳ ಅದೃಷ್ಟವೆಂಬಂತೆ ಗೋಡೆಯಲ್ಲಿ ಬಿರುಕಿತ್ತು. ಅದರಲ್ಲಿ ಕಷ್ಟಪಟ್ಟು ಇಣುಕಿ ನೋಡಿದರೆ ಗೋಡೆಯ ಆ ಬದಿಯಲ್ಲಿ ಕೋಣೆಯೊಂದಿರುವುದು ತಿಳಿಯುತ್ತಿತ್ತು. ಆ ಕೋಣೆ ಫಿಲಿಪ್ಪೋನದೇ ಆದಲ್ಲಿ ತನ್ನ ಕೆಲಸ ಅರ್ಧಮುಗಿದಂತೆ ಎಂದುಕೊಂಡಳು. ತನ್ನ ಬದುಕಿನ ಬಗ್ಗೆ ಕನಿಕರ ತೋರಿಸುತ್ತಿದ್ದ ಸೇವಕಿಗೆ ಆ ಬಿರುಕಿನ ಬಳಿ ಕಾವಲಿದ್ದು, ಇಣುಕಿ ಆ ಕೋಣೆಯಲ್ಲಿ ಯಾರು ಮಲಗುತ್ತಾರೆಂದು ತಿಳಿಸಲು ಹೇಳಿದಳು. ಆ ಕೋಣೆ ಫಿಲಿಪ್ಪೋನದೇ ಆಗಿತ್ತು. ಒಂದು ದಿನ ತನ್ನ ಗಂಡ ಮನೆಯಲ್ಲಿಲ್ಲದಿರುವಾಗ ಆ ಬಿರುಕಿನ ಬಳಿ ಹೋಗಿ ಇಣುಕಿನೋಡಿ ಫಿಲಿಪ್ಪೋ ಆ ಕೋಣೆಯಲ್ಲಿರುವುದನ್ನು ಖಾತ್ರಿಪಡಿಸಿಕೊಂಡು ಬೇಕೆಂತಲೇ ಅದೂ ಇದು ಬೀಳಿಸಿ ಜೋರಾಗಿ ಶಬ್ದಮಾಡಿದಳು. ಆ ಯುವಕ ಶಬ್ದ ಏನೆಂದು ನೋಡಲು ಆ ಬಿರುಕಿನ ಬಳಿ ಬಂದಾಗ, ಮೆಲುದನಿಯಲ್ಲಿ ಅತನ ಹೆಸರಿಡಿದು ಕರೆದಳು. ಅವನಿಗೆ ಅಚ್ಚರಿಯಾಯಿತು. ಅವಳು ಮತ್ತೆ ಕರೆದಾಗ ಆಕೆ ತನ್ನನ್ನೇ ಕರೆಯುತ್ತಿದ್ದಾಳೆಂದು ಖಾತ್ರಿಪಡಿಸಿಕೊಂಡು ಉತ್ತರಿಸಿದ. ಆಕೆ ತನ್ನ ಮನದ ಅಭಿಲಾಷೆ ತಿಳಿಸಿದಳು. ಅವಳ ಸೌಂದರ್ಯದ ಬಗ್ಗೆ ಕೇಳಿ ತಿಳಿದಿದ್ದ ಆತ ಸಂತೋಷದಿಂದಲೇ ಸಮ್ಮತಿಸಿದ. ತನ್ನ ಮನೆಯ ಭಾಗದ ಗೋಡೆಯ ಬಿರುಕನ್ನು ಇಬ್ಬರೂ ಬೆರಳು ತಾಗಿಸುವಷ್ಟು ಅಗಲಿಸಿದ. ಅಂದಿನಿಂದ ಆಕೆ ಆಗಾಗ ಬಿರುಕಿನ ಬಳಿ ಬಂದು ಫಿಲಿಪ್ಪೋ ಜೊತೆ ಲಲ್ಲೆ ಹೊಡೆಯುತ್ತಿದ್ದಳು, ಬೆರಳು ತಾಗಿಸುತ್ತಿದ್ದಳು; ಗಂಡನ ಹದ್ದಿನ ಕಣ್ಣು ತಪ್ಪಿಸಿ ಅದಕ್ಕಿಂತ ಮುಂದೆ ಹೋಗುವುದು ಅವರಿಗೆ ಸಾಧ್ಯವಿರಲಿಲ್ಲ.

ಕ್ರಿಸ್‌ಮಸ್ ಹತ್ತಿರ ಬರುತ್ತಿತ್ತು. ಒಂದು ದಿನ ಆಕೆ ತನ್ನ ಗಂಡನಿಗೆ ಹೇಳಿದಳು, 'ನೀನು ಅನುಮತಿ ನೀಡಿದಲ್ಲಿ, ನಾನು ಚರ್ಚಿಗೆ ಹೋಗಬೇಕು, ಎಲ್ಲ ಕ್ರಿಶ್ಚಿಯನ್ನರಂತೆ ಪಾದ್ರಿಯ ಬಳಿ ತಪ್ಪೊಪ್ಪಿಗೆ ನೀಡಿ ಆಶೀರ್ವಾದ ಪಡೆಯಬೇಕು' ಎಂದಳು.

'ನೀನ್ಯಾಕೆ ತಪ್ಪೊಪ್ಪಿಗೆ ನೀಡಬೇಕು? ಅಂತಹ ಪಾಪ ನೀನೇನು ಮಾಡಿದ್ದೀಯ?' ಎಂದ ಗಂಡ ಹುಬ್ಬೇರಿಸುತ್ತ.

'ಯಾಕೆ? ನನ್ನನ್ನು ಈ ಮನೆಯಲ್ಲಿ ಕೂಡಿಹಾಕಿದರೆ ನಾನು ಯಾವ ಪಾಪವನ್ನೂ ಮಾಡುವುದಿಲ್ಲವೆಂದು ಭಾವಿಸಿದ್ದೀಯೇನು? ನಾನೇನು ಸಂತಳೆ? ಎಲ್ಲ ಜೀವಂತ ಮನುಷ್ಯರ ಹಾಗೆ ನನ್ನಲ್ಲೂ ದುರ್ಬಲಗಳಿವೆ, ನಾನೂ ಪಾಪ ಮಾಡಿದ್ದೇನೆ. ಅದನ್ನು ನಿನ್ನಲ್ಲಿ ಹೇಳುವುದಿಲ್ಲ, ಪಾದ್ರಿಯಲ್ಲಿ ಮಾತ್ರ ಹೇಳಬಲ್ಲೆ' ಎಂದಳು.

ಮೊದಲೇ ಸಂಶಯಪಿಶಾಚಿಯಾದ ಗಂಡನಿಗೆ ಏನೋ ನಡೆಯಬಾರದ್ದು ನಡೆದುಹೋಗಿದೆಯೆನ್ನಿಸಿತು. ಅವಳು ಮಾಡಿರುವ ಪಾಪವನ್ನು ತಾನು ತಿಳಿದುಕೊಳ್ಳಲೇಬೇಕೆನ್ನಿಸಿ ಅದಕೊಂದು ಉಪಾಯ ಮಾಡಿದ. ಹೆಂಡತಿಯ ಕೋರಿಕೆಗೆ ಸಮ್ಮತಿಸಿದ ಆತ, ನಾಳೆ ಬೆಳಿಗ್ಗೆಯೇ ಚರ್ಚಿಗೆ ಹೋಗಬೇಕೆಂದೂ ಹಾಗೂ ಚರ್ಚಿನ ಮುಖ್ಯ ಪಾದ್ರಿ ಅಥವಾ ಆತ ಕಳುಹಿಸುವ ಪಾದ್ರಿಯಲ್ಲಿ ಮಾತ್ರ ತಪ್ಪೊಪ್ಪಿಗೆ ನೀಡಬೇಕೆಂದೂ ಹಾಗೂ ಅನಂತರ ಬೇರೆಲ್ಲಿಯೂ ಹೋಗದೆ, ತಲೆತಗ್ಗಿಸಿ ನೇರ ಮನೆಗೆ ಹಿಂದಿರುಗಬೇಕೆಂದು ಆಕೆಗೆ ಹೇಳಿದ. ಆತನ ಯೋಜನೆ ಆಕೆಗೆ ಬಹುಪಾಲು ಅರ್ಥವಾಯಿತು.

ಮರುದಿನ ಬೆಳಿಗ್ಗೆ ಆಕೆ ಚರ್ಚಿಗೆ ಹೊರಟಳು. ಗಂಡ ಅಕೆಗಿಂತ ಮೊದಲೇ ಚರ್ಚಿಗೆ ಹೋಗಿ ಹಿಂದಿನ ದಿನವೇ ತನಗೆ ಚೆನ್ನಾಗಿ ಪರಿಚಯವಿದ್ದ ಪಾದ್ರಿಯ ಜೊತೆ ಮಾತನಾಡಿ ನಿರ್ಧರಿಸಿದ್ದಂತೆ, ತಾನೇ ಪಾದ್ರಿಯ ಗೌನುತೊಟ್ಟು ಮುಖ ಕಾಣದಂತೆ ತಲೆಯ ಮೇಲೆ ಬಟ್ಟೆ ಹೊದ್ದು ತನ್ನ ಪತ್ನಿಗಾಗಿ ಕಾದು ಕೂತಿದ್ದ. ಪತ್ನಿ ಚರ್ಚಿಗೆ ಬಂದು ಪ್ರಾರ್ಥಿಸಿ, ಮುಖ್ಯ ಪಾದ್ರಿಯನ್ನು ತನ್ನ ತಪ್ಪೊಪ್ಪಿಗೆಯನ್ನು ಆಲಿಸಲು ಕೇಳಿಕೊಂಡಳು. ಆದರೆ ಆತ ತನಗೆ ಬೇರೆ ಬಹುಮುಖ್ಯವಾದ ಕೆಲಸವಿರುವುದರಿಂದ ಚರ್ಚಿನ ಮತ್ತೊಬ್ಬ ಸಹೋದರ ಪಾದ್ರಿಯನ್ನು ಕಳುಹಿಸುವುದಾಗಿ ಹೇಳಿ ಹೊರಟ. ಆತ ಒಳಗೆ ಪಾದ್ರಿಯ ಗೌನು ಧರಿಸಿ ಕಾಯುತ್ತಿದ್ದ ಆಕೆಯ ಗಂಡನನ್ನೇ ಕಳುಹಿಸಿದ. ಪಾದ್ರಿಯ ಗೌನಿನಲ್ಲಿದ್ದರೂ ಹಾಗೂ ಮುಖ ಕಾಣದಂತೆ ತಲೆಯ ಮೇಲೆ ಬಟ್ಟೆ ಹೊದ್ದಿದ್ದರೂ ಆಕೆಗೆ ತನ್ನ ಗಂಡನನ್ನು ಗುರುತು ಹಿಡಿಯುವುದು ಕಷ್ಟವಾಗಲಿಲ್ಲ. ಆದರೂ ತನಗೇನೂ ತಿಳಿದಿಲ್ಲವೆಂಬಂತೆ ವಿನಯಪೂರ್ವಕವಾಗಿ ಮಂಡಿಯೂರಿ ಕೂತಳು. ಆತ ತನ್ನ ಧ್ವನಿ ಗುರುತುಸಿಗದಿರಲೆಂದು ಬಾಯಿಯಲ್ಲಿ ದುಂಡನೆ ಕಲ್ಲುಗಳನ್ನಿರಿಸಿಕೊಂಡಿದ್ದ. ಆಕೆಯ ಪಾಪವೇನು ಎಂದು ಆತ ಕೇಳಿದ್ದಕ್ಕೆ ಆಕೆ, ತನಗೆ ಮದುವೆಯಾಗಿದೆಯೆಂದೂ ಆದರೆ ತಾನೊಬ್ಬ ಪಾದ್ರಿಯನ್ನು ಪ್ರೀತಿಸುತ್ತಿರುವುದಾಗಿಯೂ ಹಾಗೂ ಆ ಪಾದ್ರಿ ತನ್ನೊಂದಿಗೆ ಮಲಗಲು ಪ್ರತಿ ರಾತ್ರಿ ಬರುತ್ತಿದ್ದಾನೆಂದು ತಿಳಿಸಿದಳು. ಅಸೂಯಾಪರ ಗಂಡನ

ಹೃದಯವನ್ನು ಕತ್ತಿಯಲ್ಲಿ ತಿವಿದಂತಾಯಿತು. ಆದರೂ ಸಹಿಸಿಕೊಂಡು, ಕೇಳಿದ, 'ಏಕೆ, ರಾತ್ರಿ ನಿನ್ನ ಜೊತೆ ನಿನ್ನ ಗಂಡ ಮಲಗುವುದಿಲ್ಲವೆ?'

'ಹೌದು ಮಲಗುತ್ತಾನೆ' ಆಕೆ ಉತ್ತರಿಸಿದಳು.

'ಹಾಗಾದರೆ ಪಾದ್ರಿಯೂ ನಿನ್ನ ಜೊತೆ ಹೇಗೆ ಮಲಗಲು ಸಾಧ್ಯ?'

'ಸ್ವಾಮಿ, ಆ ಪಾದ್ರಿಯಲ್ಲಿ ಏನು ಮಾಯೆಯಿದೆಯೋ ಗೊತ್ತಿಲ್ಲ. ಆತ ಮುಟ್ಟಿದಲ್ಲಿ ನನ್ನ ಮನೆಯ ಎಂತಹ ಬೀಗವಾದರೂ ತೆರೆದುಕೊಳ್ಳುತ್ತದಂತೆ. ಆತ ನಮ್ಮ ಮನೆಗೆ ಬರುವ ಮೊದಲು ಎಂಥದೋ ಮಂತ್ರ ಹೇಳಿ ನನ್ನ ಗಂಡನನ್ನು ಗಾಢ ನಿದ್ರೆಗೆ ಕಳುಹಿಸುತ್ತಾನಂತೆ. ಈ ರೀತಿ ಪ್ರತಿ ರಾತ್ರಿ ಮಾಡುತ್ತಿದ್ದಾನೆ' ಎಂದಳು ಪತ್ನಿ.

'ಇದು ಮಹಾ ಪಾಪ. ಇದನ್ನು ನೀನು ಮುಂದುವರಿಸಬಾರದು' ಎಂದು ಹೇಳಿದ ಅತ್ಯಂತ ನೋವಿನಿಂದ ಪಾದ್ರಿಯ ಗೌನಿನಲ್ಲಿದ್ದ ಗಂಡ.

'ಸ್ವಾಮಿ, ಅದು ಸಾಧ್ಯವಿಲ್ಲವೆನ್ನಿಸುತ್ತದೆ. ಏಕೆಂದರೆ, ಆ ಪಾದ್ರಿಯನ್ನು ನಾನೂ ಸಹ ಬಹಳವಾಗಿ ಪ್ರೀತಿಸುತ್ತಿದ್ದೇನೆ' ಎಂದಳು.

'ಹಾಗಾದಲ್ಲಿ ನೀನು ಮಹಾನ್ ಪಾಪಿ. ನಿನ್ನ ಪಾಪ ನಿವಾರಣೆ ಸಾಧ್ಯವಿಲ್ಲ. ನಿನ್ನನ್ನು ಕ್ಷಮಿಸಿ ಆಶೀರ್ವಾದ ನೀಡಲಾರೆ' ಎಂದ ಗಂಡ.

'ನಿಮ್ಮ ಮಾತಿನಿಂದ ನನಗೆ ಅತೀವ ದುಃಖವಾಗುತ್ತಿದೆ. ನಾನು ನಿಮ್ಮ ಬಳಿ ಸುಳ್ಳು ಹೇಳಲು ಬಂದಿಲ್ಲ. ನನಗೊಂದು ದಾರಿ ತೋರಿ'

'ನೋಡಮ್ಮಾ, ನಿನ್ನನ್ನು ನೋಡಿದರೆ ಅಯ್ಯೋ ಎನ್ನಿಸುತ್ತದೆ. ನಿನ್ನ ನಡತೆಯಿಂದ ನಿನ್ನ ಆತ್ಮ ಹಾಗೂ ದೇಹವನ್ನು ಪಾಪದ ಕೂಪಕ್ಕೆ ತಳ್ಳುತ್ತಿದ್ದೀಯ. ನಿನಗಾಗಿ ನಾನು ವಿಶೇಷ ಪ್ರಾರ್ಥನೆ ಮಾಡುತ್ತೇನೆ. ನೀನು ಪಾಪದಿಂದ ದೂರವಿರಲು ಪ್ರಯತ್ನಿಸು. ಆಗಾಗ ನನ್ನ ಶಿಷ್ಯನನ್ನು ಕಳುಹಿಸುತ್ತೇನೆ. ಅವನಲ್ಲಿ ನನ್ನ ಪ್ರಾರ್ಥನೆ ಫಲಕಾರಿಯಾಗುತ್ತಿದೆಯೋ ಇಲ್ಲವೆಂಬುದನ್ನು ತಿಳಿಸು' ಎಂದ.

'ಅದು ಸಾಧ್ಯವಿಲ್ಲ. ನೀವು ಯಾರನ್ನೂ ನನ್ನ ಮನೆಗೆ ಕಳುಹಿಸಬೇಡಿ. ನನ್ನ ಗಂಡನಿಗೆ ನನ್ನ ಬಗ್ಗೆ ತುಂಬಾ ಅಸೂಯೆ ಹಾಗೂ ಸಂಶಯ. ಯಾರಾದರೂ ಗಂಡಸರು ನಮ್ಮ ಮನೆಗೆ ಬಂದರೆ ಅವರು ಯಾವುದೋ ಮಾಡಬಾರದ್ದು ಮಾಡಲು ಬಂದಿದ್ದಾರೆ ಎಂದುಕೊಂಡು ಅವರನ್ನು ಕೊಂದೇಬಿಡುತ್ತಾನೆ. ಆತನ ಸಂಶಯದಿಂದ ನಾನೆಷ್ಟು ಹಿಂಸೆ ಅನುಭವಿಸುತ್ತಿದ್ದೀನೊ, ಅದು ನನಗೇ ಗೊತ್ತು' ಎಂದಳು.



'ಹೆದರಿಕೋಬೇಡ. ಅದಕ್ಕೆ ಬೇಕಾದ ವ್ಯವಸ್ಥೆ ನಾನು ಮಾಡುತ್ತೇನೆ' ಎಂದ ಪಾದ್ರಿಯ ಗೌನಿನಲ್ಲಿದ್ದ ಗಂಡ.

'ನೀವು ಆ ರೀತಿ ಮಾಡುವುದಾದಲ್ಲಿ ನನಗೆ ಸಂತೋಷವಾಗುತ್ತದೆ' ಎಂದ ಹೆಂಡತಿ ತಪ್ಪೊಪ್ಪಿಗೆ ಮುಗಿಸಿ ಮನೆಗೆ ಹಿಂದಿರುಗಿದಳು.

ಅನಂತರ ಮನೆಗೆ ಬಂದ ಗಂಡ, 'ಈ ರಾತ್ರಿ ನನಗೆ ಊಟ ಬೇಡ. ನಾನು ಯಾವುದೋ ಕೆಲಸಕೆ ಹೋಗುತ್ತಿದ್ದೇನೆ. ರಾತ್ರಿ ಅಲ್ಲೇ ಉಳಿದುಕೊಳ್ಳುತ್ತೇನೆ. ನೀನು ಮನೆಯ ಮುಂದಿನ ಬಾಗಿಲು, ಮಹಡಿಯ ಬಾಗಿಲು ಹಾಗೂ ನಿನ್ನ ಕೋಣೆಯ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿ ಮಲಗಿಕೊ' ಎಂದು ತನ್ನ ಪತ್ನಿಗೆ ಹೇಳಿದ. ಆಕೆಗೆ ಕೂಡಲೇ ತನ್ನ ಗಂಡನ ಯೋಜನೆಯ ಅರಿವಾಯಿತು. ಆಕೆಗೆ ಸಮಯ ದೊರಕಿದ ಕೂಡಲೇ ಗೋಡೆಯ ಬಿರುಕಿನ ಬಳಿ ಹೋಗಿ ಫಿಲಿಪ್ಪೋನನ್ನು ಕರೆದು, 'ಈ ದಿನ ಬಹುಶಃ ನನ್ನ ಗಂಡ ಮನೆಯ ಮುಂದಿನ ಬಾಗಿಲ ಬಳಿ ಕಾವಲು ಕಾಯುತ್ತಾನೆ. ಅವನು ಬೆಳಗಿನವರೆಗೂ ಮನೆಯೊಳಗೆ ಬರುವುದಿಲ್ಲ. ಒಳ್ಳೆಯ ಅವಕಾಶ ಸಿಕಿದೆ. ನೀನು ಮಾಳಿಗೆಯಿಂದ ಈ ರಾತ್ರಿ ನನ್ನ ಕೋಣೆಗೆ ಬಾ' ಎಂದು ಆಹ್ವಾನಿಸಿದಳು.

ರಾತ್ರಿ ಗಂಡ ಹೊರಟನಂತರ ಹೆಂಡತಿ ಮನೆಯ ಎಲ್ಲಾ ಬಾಗಿಲುಗಳನ್ನು ಭದ್ರಪಡಿಸಿದಳು. ಹೊರಹೊರಟ ಗಂಡ ಮುಂದಿನ ನೆಲಮಾಳಿಗೆಯ ಕೋಣೆಯೊಂದರಲ್ಲಿ ಅವಿತಿದ್ದು ರಾತ್ರಿ ಹೊರಬಂದು ತನ್ನ ಹೆಂಡತಿಯೊಂದಿಗೆ ಮಲಗಲು ಬರಬಹುದಾದ ಮಾಯಾವಿ ಪಾದ್ರಿಗೆ ಸರಿಯಾಗಿ ಪಾಠ ಕಲಿಸಲು ಕತ್ತಿ ಹಿಡಿದು ಮುಂಬಾಗಿಲ ಬಳಿ ಕಾವಲುಕೂತ.

ರಾತ್ರಿ ಮಾಳಿಗೆಯಿಂದ ಫಿಲಿಪ್ಪೊ ಬಂದು ವರ್ತಕನ ಹೆಂಡತಿಯ ಕೋಣೆ ಸೇರಿದ. ದೊರಕಿದ ಅವಕಾಶವನ್ನು ಇಬ್ಬರೂ ಬಹಳ ಚೆನ್ನಾಗಿ ಸದುಪಯೋಗಪಡಿಸಿಕೊಂಡರು. ಇತ್ತ ಗಂಡ ನಿದ್ದೆ, ಆಹಾರವಿಲ್ಲದೆ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಕಾಯುತ್ತಿದ್ದ. ಬೆಳಿಗ್ಗೆ ಯುವಕ ಮಾಳಿಗೆಯಿಂದ ಬಂದ ದಾರಿಯಲ್ಲಿಯೇ ಹಿಂದಿರುಗಿದ. ನಿದ್ದೆಯಿಲ್ಲದೆ ಬಸವಳಿದ ಗಂಡ ಮನೆಯೊಳಗೆ ಬಂದ. ಮಧ್ಯಾಹ್ನ ಹೊರಹೊರಟ ಗಂಡ ಒಬ್ಬ ಸಣ್ಣ ಹುಡುಗನನ್ನು, ತನ್ನನ್ನು ಪಾದ್ರಿ ಕಳುಹಿಸಿದರೆಂದು ಹೇಳಿ, ಏನಾದರೂ ವಿಷಯವಿದ್ದರೆ ತಿಳಿಸಬೇಕೆಂದು ಕೇಳಿಕೊಂಡು ಬರಲು ಕಳುಹಿಸಿದ. ಹಿಂದಿನ ರಾತ್ರಿ ಮನೆಗೆ ಯಾವ ಪಾದ್ರಿಯೂ ಬಂದಿಲ್ಲವೆಂದು ಹೇಳುವಂತೆ ಆಕೆ ಹೇಳಿಕಳುಹಿಸಿದಳು.

ಇದೇ ರೀತಿ ಹಲವಾರು ರಾತ್ರಿ ಕಳೆಯಿತು. ಅತ್ತ ಗಂಡ ನಿದ್ದೆಯಿಲ್ಲದೆ ಕಾಯುವುದು, ಇತ್ತ ಹೆಂಡತಿ ನೆರೆಮನೆಯ ಫಿಲಿಪ್ಪೋನೊಂದಿಗೆ ಮಲಗುವುದು ನಡೆಯುತ್ತಿತ್ತು. ಕೊನೆಗೊಂದು ದಿನ ತಾಳ್ಮೆ ಕಳೆದುಕೊಂಡ ಗಂಡ, 'ನೀಚ ಹೆಂಗಸೆ, ನೀನು ಪಾದ್ರಿಯಲ್ಲಿ ಹೇಳಿದ ವಿಷಯವೆಲ್ಲಾ ನನಗೆ ಗೊತ್ತು. ದಿನಾ ರಾತ್ರಿ ನಿನ್ನೊಂದಿಗೆ ಮಲಗಲು ಬರುವ ಪಾದ್ರಿ ಯಾರು ಹೇಳು. ಹೇಳದಿದ್ದಲ್ಲಿ ನಿನ್ನನ್ನು ಕೊಲ್ಲುತ್ತೇನೆ' ಎಂದು ಹೆದರಿಸಿದ.

'ನಾನು ಬೇರೆ ಯಾರೋ ಪಾದ್ರಿಯನ್ನು ಪ್ರೀತಿಸುತ್ತೇನೆ ಹಾಗೂ ಅವನೊಟ್ಟಿಗೆ ಮಲಗುತ್ತೇನೆ ಎಂದು ನಾನು ಹೇಳೇ ಇಲ್ಲ' ಎಂದಳು.

'ಇಲ್ಲಾ, ನೀನು ಅದನ್ನೇ ಚರ್ಚಿನಲ್ಲಿ ಪಾದ್ರಿಗೆ ಹೇಳಿದ್ದೀಯ. ನನಗೆಲ್ಲಾ ಗೊತ್ತು' ಎಂದ ಗಂಡ.

'ನನಗೂ ಗೊತ್ತು, ಆ ದಿನ ಚರ್ಚಿನಲ್ಲಿ ಪಾದ್ರಿ ಧಿರಿಸಿನಲ್ಲಿದ್ದವನು ನೀನೇ ಎಂದು. ನಾನು ಪ್ರೀತಿಸುವ ಪಾದ್ರಿಯೂ ನೀನೆ. ನಾನೇನು ಸುಳ್ಳು ಹೇಳಿಲ್ಲ. ನೀನೊಬ್ಬ ಮೂರ್ಖ ಗಂಡ. ಒಬ್ಬ ಸಾಧಾರಣ ಹೆಂಗಸು ನಿನ್ನನ್ನು ಹೇಗೆ ಮುಠ್ಠಾಳನನ್ನಾಗಿ ಮಾಡಿದಳೋ ನೋಡು. ನಿನ್ನಲ್ಲಿ ಬರೇ ಅಸೂಯೆ ಹಾಗೂ ಸಂಶಯವಿದೆಯೇ ಹೊರತು ಬುದ್ಧಿವಂತಿಕೆಯಿಲ್ಲ. ನೀನು ಬುದ್ಧಿವಂತನಾಗಿದ್ದಲ್ಲಿ ನಿನ್ನ ಹೆಂಡತಿಯ ರಹಸ್ಯಗಳನ್ನು ತಿಳಿಯಲು ನೀನು ಈ ರೀತಿ ರಾತ್ರಿ ಊಟ, ನಿದ್ದೆ ಬಿಟ್ಟು ಕಳ್ಳನಂತೆ ಮನೆಯಬಾಗಿಲು ಕಾಯುವುದು ಬಿಟ್ಟು ಬೇರೆಯದೇ ವಿಧಾನ ಹುಡುಕುತ್ತಿದ್ದೆ. ಮೊದಲು ನಿನ್ನಲ್ಲಿನ ಸಂಶಯ ಪಿಶಾಚಿಯನ್ನು ದೂರಮಾಡು. ನಿನ್ನಲ್ಲಿರುವ ಎರಡು ಕಣ್ಣೇಕೆ, ನೂರು ಕಣ್ಣುಗಳಿದ್ದರೂ, ನೀನು ಹಗಲು ರಾತ್ರಿ ಕಾವಲಿದ್ದರೂ, ನಾನೊಬ್ಬ

ಪ್ರೇಮಿಯನ್ನು ಬಯಸಿದಲ್ಲಿ, ನಿನಗೆ ತಿಳಿಯದಂತೆ ಅವನನ್ನು ಬರಮಾಡಿಕೊಳ್ಳಬಲ್ಲೆ. ಆದುದರಿಂದ ನಿನ್ನ ಸಂಶಯ ತೊರೆದು ಸಹಜ ಮನುಷ್ಯನ ಹಾಗೆ ಬದುಕು' ಎಂದಳು.

ತಾನೇ ಬುದ್ಧಿವಂತನೆಂದುಕೊಂಡಿದ್ದ ಗಂಡನಿಗೆ ತಾನು ಮಾಡಿದ ನಾಟಕಗಳೆಲ್ಲಾ ಆಕೆಗೆ ತಿಳಿದುಹೋಗಿರುವುದರಿಂದ ಅವಮಾನ ವಾದಂತಾಯಿತು. ಅಲ್ಲದೆ ಆಕೆ ಬುದ್ಧಿವಂತ ಮತ್ತು ಸಾಧ್ವಿ ಪತ್ನಿ ಎಂದು ತಿಳಿದು ಹೆಮ್ಮೆಯೂ ಆಯಿತು. ಅಂದಿನಿಂದ ಅವಳ ಕಾವಲು ಕಾಯುವುದನ್ನು ನಿಲ್ಲಿಸಿದ ಹಾಗೂ ಅವಳಿಗೆ ಸಾಕಷ್ಟು ಸ್ವಾತಂತ್ರ್ಯವನ್ನೂ ನೀಡಿದ. ಮಾಳಿಗೆಯಿಂದ ಕಳ್ಳನಂತೆ ಬರುತ್ತಿದ್ದ ಫಿಲಿಪ್ಪೊ ಗಂಡನಿಲ್ಲದಿರುವಾಗ ಮುಂದಿನ ಬಾಗಿಲಿನಿಂದಲೇ ಬರಲಾರಂಭಿಸಿದ. ಅಂದಿನಿಂದ ಗಂಡ, ಹೆಂಡತಿ ಮತ್ತು ಆಕೆಯ ಪ್ರಿಯಕರ ಸುಖಸಂತೋಷದಿಂದಿದ್ದರು.

ಇದು ನ್ಯಾಯವೆ?

ಬಹಳ ಹಿಂದೆ ಇಟಲಿಯ ಪ್ರಾಟೊ ನಗರದಲ್ಲಿ ಒಂದು ಕಾನೂನಿತ್ತು. ಒಂದು ಹೆಣ್ಣು ಹಣದ ಆಸೆಗಾಗಿ ಯಾರಾದರೂ ಗಂಡಿನೊಂದಿಗೆ ಮಲಗಿದಲ್ಲಿ ಆಕೆಗೆ ಮರಣದಂಡನೆ ವಿಧಿಸಿ, ಆಕೆಯನ್ನು ಜೀವಂತವಾಗಿ ಸುಡಲಾಗುತ್ತಿತ್ತು. ಅದೇ ರೀತಿ ತನ್ನ ಹೆಂಡತಿ ಮತ್ತೊಬ್ಬ ಗಂಡಿನ ಜೊತೆ ಮಲಗಿರುವುದನ್ನು ಗಂಡ ಸ್ವತಃ ತನ್ನ ಕಣ್ಣಾರೆ ಕಂಡು ಆಕೆಯ ನಡತೆಯನ್ನು ನ್ಯಾಯಾಧೀಶರೆದುರು ಸಾಬೀತುಪಡಿಸಿದಲ್ಲಿ ಅಂತಹ ಹೆಣ್ಣಿಗೂ ಅದೇ ಶಿಕ್ಷೆ ವಿಧಿಸಲಾಗುತ್ತಿತ್ತು.

ಆ ಊರಿನಲ್ಲಿ ರಿನಾಲ್ಡೊ ಎಂಬಾತನಿಗೆ ಫಿಲಿಪ್ಪಾ ಎಂಬ ಸುಂದರ ಪತ್ನಿಯಿದ್ದಳು. ಆಕೆ ತನ್ನ ಗಂಡನನ್ನು ಎಷ್ಟು ಪ್ರೀತಿಸುತ್ತಿದ್ದಳೋ ಅಷ್ಟೇ ತನ್ನ ಪ್ರಿಯಕರ ಲ್ಯಾಜಾರಿನೋನನ್ನೂ ಪ್ರೀತಿಸುತ್ತಿದ್ದಳು. ಒಂದು ದಿನ ಗಂಡ ರಿನಾಲ್ಡೊ ಮನೆಗೆ ಬಂದಾಗ ತನ್ನ ಪತ್ನಿ ಲ್ಯಾಜಾರಿನೋನ ಆಲಿಂಗನದಲ್ಲಿದ್ದಳು. ರಿನಾಲ್ಡೋನಿಗೆ ಅವರನ್ನು ಆ ಅವಸ್ಥೆಯಲ್ಲಿ ಕಂಡು ಎಷ್ಟು ಸಿಟ್ಟು ಬಂದಿತೆಂದರೆ ಅವರನ್ನು ಅಲ್ಲೇ ಕೊಂದುಬಿಡಲು ತನ್ನ ಕತ್ತಿ ಹೊರತೆಗೆದ. ಕೊನೆಗೆ ಹೇಗೋ ತನ್ನನ್ನು ತಾನೇ ನಿಯಂತ್ರಿಸಿಕೊಂಡು ಸಾಕಷ್ಟು ಸಾಕ್ಷಾಧಾರಗಳೊಂದಿಗೆ ಪ್ರಾಟೊ ನಗರದ ಕಾನೂನಿನಂತೆ ಆಕೆಗೆ ಶಿಕ್ಷೆ ನೀಡಬೇಕೆಂದು ನ್ಯಾಯಾಸ್ಥಾನದ ಮೊರೆಹೊಕ್ಕ.

ಫಿಲಿಪ್ಪಾಳ ಗೆಳತಿಯರು ಆಕೆಯನ್ನು ರಾತ್ರೋರಾತ್ರಿ ಊರುಬಿಟ್ಟು ಓಡಿಹೋಗುವಂತೆ ಸೂಚಿಸಿದರು. ಇನ್ನು ಕೆಲವರು, ಏನೇ ಆದರೂ ನೀನು ತಪ್ಪೊಪ್ಪಿಕೊಳ್ಳಲೇಬೇಡ. ನಿನ್ನ ತಪ್ಪನ್ನು ನಿನ್ನ ಗಂಡ ಸಾಬೀತುಪಡಿಸಲು ಆಗುವುದಿಲ್ಲ ಎಂದರು. ಆದರೆ ಸುಂದರಿ ಫಿಲಿಪ್ಪಾ ತಾನು ಆ ರೀತಿ ಮಾಡುವುದಿಲ್ಲ, ಆ ರೀತಿ ಓಡಿಹೋಗುವುದರಿಂದ ಅಥವಾ ತನ್ನ ತಪ್ಪನ್ನು ಒಪ್ಪಿಕೊಳ್ಳದಿರುವುದರಿಂದ ತಮ್ಮ ಪ್ರೀತಿಗೇ ಅವಮಾನ ಮಾಡಿದಂತಾಗುತ್ತದೆ ಎಂದಳು.

ಬೊಕಾಷಿಯೋನ ಡೆಕಮೆರಾನ್



ಮರುದಿನ ನ್ಯಾಯಾಧೀಶರು ಫಿಲಿಪ್ಪಾಳನ್ನು ನ್ಯಾಯಾಲಯಕ್ಕೆ ಕರೆಸಿದರು. ಆಕೆಯ ಮೋಹಕ ಸೌಂದರ್ಯ ನೋಡಿ ನ್ಯಾಯಾಧೀಶನಿಗೇ ತಲೆತಿರುಗುವಂತಾಯಿತು. ಇಂತಹ ಸುಂದರ ಹೆಣ್ಣಿಗೆ ಶಿಕ್ಷೆ ವಿಧಿಸಬೇಕಾಗುತ್ತದಲ್ಲ ಎಂದು ಆತನಿಗೆ ಹಿಂಸೆಯೂ ಆಯಿತು. ಆದರೂ ನ್ಯಾಯ ಪರಿಪಾಲನೆ ಮಾಡಲೇಬೇಕಾಗಿದ್ದುದರಿಂದ ಆತ ಆಕೆಯನ್ನು ಕೇಳಿದ,

'ನೊಡಮ್ಮಾ, ಅಲ್ಲಿ ನಿಂತಿರುವ ವ್ಯಕ್ತಿ ನಿನ್ನ ಗಂಡ ತಾನೆ? ಆತ ನಿನ್ನನ್ನು ಮತ್ತೊಬ್ಬ ಗಂಡಿನ ಜೊತೆ ಮಲಗಿದ್ದುದನ್ನು ತನ್ನ ಕಣ್ಣಾರೆ ಕಂಡಿದ್ದಾನಂತೆ ಹಾಗೂ ಪ್ರಾಟೊ ನಗರದ ಕಾನೂನಿನಂತೆ ನಿನಗೆ ಶಿಕ್ಷೆ ವಿಧಿಸಬೇಕೆಂದು ನ್ಯಾಯಾಲಯವನ್ನು ಕೋರಿದ್ದಾನೆ. ನೀನು ತಪ್ಪೊಪ್ಪಿಕೊಳ್ಳದೆ ನಾನು ನಿನಗೆ ಶಿಕ್ಷೆ ವಿಧಿಸುವಂತಿಲ್ಲ. ಹಾಗಾಗಿ ನೀನು ಉತ್ತರವಾಗಿ ಏನು

ಹೇಳಬೇಕೆಂದಿರುವೆಯೋ ಅದನ್ನು ಎಚ್ಚರದಿಂದ ಹೇಳು. ನಿನ್ನ ಗಂಡ ನಿಜವನ್ನೇ ಹೇಳುತ್ತಿದ್ದಾನೆಯೆ?.'

ಫಿಲಿಪ್ಪಾ ಕೊಂಚವೂ ವಿಚಲಿತಳಾಗದೆ, ಅಂಜಿಕೆ ಅಳುಕಿಲ್ಲದೆ ಪ್ರಶಾಂತ ಧ್ವನಿಯಲ್ಲಿ ಹೇಳಿದಳು, 'ಹೌದು, ಅಲ್ಲಿ ನಿಂತಿರುವ ವ್ಯಕ್ತಿ ನನ್ನ ಗಂಡ ರಿನಾಲ್ಡೊ. ಆತ ನಿನ್ನೆ ರಾತ್ರಿ ನಾನು ಲ್ಯಾಜಾರಿನೋನ ಜೊತೆಯಲ್ಲಿ ಇದ್ದದ್ದನ್ನು ನೋಡಿದ್ದು ಸತ್ಯ. ನಿನ್ನೇ ರಾತ್ರಿಯೇ ಅಲ್ಲ ಬಹಳಷ್ಟು ರಾತ್ರಿಗಳನ್ನು ನಾನು ಲ್ಯಾಜಾರಿನೋನ ಜೊತೆ ಕಳೆದಿದ್ದೇನೆ. ನಮ್ಮಿಬ್ಬರದು ಪರಿಶುದ್ಧ ಪ್ರೇಮ. ನನ್ನ ಗಂಡನನ್ನೂ ನಾನು ಅಷ್ಟೇ ಪ್ರೀತಿಸುತ್ತೇನೆ. ನಿಮ್ಮ ಕಾನೂನು ಗಂಡು ಮತ್ತು ಹೆಣ್ಣನ್ನು ಸರಿಸಮಾನವಾಗಿ ನೋಡುತ್ತಿಲ್ಲ. ನಿಮ್ಮ ಕಾನೂನು ಬಡಪಾಯಿ ಹೆಂಗಸರಿಗೆ ಮಾತ್ರ ಅನ್ಯಾಯ ಮಾಡುತ್ತಿದೆ. ಅದರಲ್ಲೂ ಗಂಡಸರಿಗಿಂತ ಹೆಚ್ಚು ಜನರನ್ನು ತೃಪ್ತಿಪಡಿಸಬಲ್ಲ ಸಾಮರ್ಥ್ಯವಿರುವುದು ಹೆಂಗಸರಿಗೆ ಮಾತ್ರ. ಅದು ನಿಮಗೂ ತಿಳಿದಿದೆ. ಹೆಂಗಸರಿಗೆ ಶಿಕ್ಷೆ ವಿಧಿಸುವ ಕಾನೂನನ್ನು ನೀವು ಗಂಡಸರೇ ಮಾಡಿಕೊಂಡಿದ್ದೀರ ಹಾಗೂ ಯಾವುದೇ ಹೆಣ್ಣಿನ ಸಮ್ಮತಿಯನ್ನು ನೀವು ಕೇಳಿಲ್ಲ. ಹಾಗಾಗಿ ನಿಮ್ಮ ಕಾನೂನು ನ್ಯಾಯಸಮ್ಮತವಾಗಿಲ್ಲ.

'ನನಗೆ ನೀವು ಶಿಕ್ಷೆ ವಿಧಿಸುವುದೆಂದರೆ, ನೀವು ನಿಮ್ಮ ಆತ್ಮಗಳಿಗೆ ಮೋಸಮಾಡಿಕೊಂಡಂತೆ. ಆದರೆ ನೀವು ನನಗೆ ಶಿಕ್ಷೆ ಕೊಡಲೇಬೇಕೆಂದು ತೀರ್ಮಾನಿಸಿದ್ದರೆ ಶಿಕ್ಷೆ ಕೊಡಿ. ಆದರೆ ನೀವು ಯಾವುದೇ ನ್ಯಾಯ ತೀರ್ಮಾನ ತೆಗೆದುಕೊಳ್ಳುವ ಮೊದಲು ನನ್ನದೊಂದು ಸಣ್ಣ ಕೋರಿಕೆಯನ್ನು ನೆರವೇರಿಸಿ. ನೀವು ನನ್ನ ಗಂಡನನ್ನು ಕೇಳಿ, ಆತ ಕೇಳಿದಾಗಲೆಲ್ಲಾ, ಕೇಳಿದ ಸಮಯದಲ್ಲೆಲ್ಲಾ ಹಾಗೂ ಕೇಳಿದ ರೀತಿಯಲ್ಲೆಲ್ಲಾ ನಾನು ನನ್ನ ದೇಹವನ್ನು ಆತನಿಗೆ ಒಪ್ಪಿಸಿದ್ದೇನೆಯೆ ಇಲ್ಲವೆ ಕೇಳಿ' ಎಂದಳು.

ನ್ಯಾಯಾಧೀಶರು ಕೇಳುವ ಮುನ್ನವೇ ರಿನಾಲ್ಡೊ, 'ಹೌದು, ನನ್ನ ಹೆಂಡತಿ ಯಾವೊತ್ತೂ, ಯಾವ ಸಮಯದಲ್ಲೂ ನನ್ನ ಕೋರಿಕೆಯನ್ನು ಬೇಡವೆಂದಿಲ್ಲ' ಎಂದ.

'ಹಾಗಾದಲ್ಲಿ ನ್ಯಾಯಾಧೀಶರೆ, ಆತ ತನಗೆ ಬೇಕಾದಷ್ಟೂ ನನ್ನಿಂದ ಪಡೆದುಕೊಂಡಿದ್ದಾನೆ. ಆತ ಪಡೆದುಕೊಂಡ ನಂತರವೂ ನನ್ನಲ್ಲಿ ಇನ್ನೂ ಉಳಿದಿರುವುದನ್ನು ನಾನೇನು ಮಾಡಲಿ? ನಾಯಿಗಳಿಗೆಸೆಯಲೆ? ಅದು ಹಾಗೇ ನಷ್ಟಹೊಂದುವ ಬದಲು ನನ್ನನ್ನು ಪ್ರಾಮಾಣಿಕವಾಗಿ ಪ್ರೀತಿಸುವ

ಮತ್ತೊಬ್ಬ ವ್ಯಕ್ತಿಯಲ್ಲಿ ಅದನ್ನು ಹಂಚಿಕೊಂಡಲ್ಲಿ ತಪ್ಪೇನಿದೆ?' ಎಂದು ನ್ಯಾಯಾಧೀಶರಿಗೇ ಸವಾಲು ಹಾಕಿದಳು ಫಿಲಿಪ್ಪಾ.

ನ್ಯಾಯಾಧೀಶರ ಜೊತೆಗೆ ಅಲ್ಲಿ ನೆರೆದಿದ್ದ ಜನರೆಲ್ಲಾ ಆಕೆಯ ಮಾತಿನಿಂದ ದಂಗಾದರು. ನ್ಯಾಯಾಧೀಶರು ಏನು ಹೇಳಬೇಕೆಂದು ತಡವರಿಸುತ್ತಿರುವಾಗ ಜನರೆಲ್ಲಾ ಫಿಲಿಪ್ಪಾ ಹೇಳಿದ್ದು ಸರಿ ಸರಿ ಎಂದು ಕೂಗಿದರು. ಕೊನೆಗೆ ನ್ಯಾಯಾಧೀಶರಿಗೂ ಆಕೆಯ ಮಾತು ಸರಿಯೆನ್ನಿಸಿ ಪ್ರಾಟೋದ ಕಾನೂನನ್ನು ಬದಲಾಯಿಸಿ, ಹಣದಾಸೆಗಾಗಿ ಗಂಡಂದಿರಿಗೆ ಮೋಸಮಾಡಿ ವ್ಯಭಿಚಾರ ನಡೆಸುವ ಹೆಂಗಸರಿಗೆ ಮಾತ್ರ ಶಿಕ್ಷೆ ವಿಧಿಸಬೇಕೆಂದು ತೀರ್ಮಾನಿಸಿದರು.

ಎಲ್ಲಾ ಗೋಜಲು ಗೋಜಲೆನ್ನಿಸಿ ಏನೊಂದೂ ಅರ್ಥವಾಗದೆ ರಿನಾಲ್ಡೊ ಹಿಂದಿರುಗಿದರೆ, 'ಬೀಸುವ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಆಯಸ್ಸು' ಎಂದುಕೊಳ್ಳುತ್ತ ಫಿಲಿಪ್ಪಾ ನಡೆದಳು.



ಬೊಕಾಷಿಯೋನ ಡೆಕಮೆರಾನ್